ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು

ಸಾಧನೆ

(ಸಂಯುಕ್ತ ಸಂಚಿಕೆ)

ಸಂಪುಟ 29 : ಸಂಚಿಕೆ 1 ಮತ್ತು 2

ಜನವರಿ–ಜೂನ್ 2000

ಸಾಧನೆ

ಸಂಪುಟ–29, ಸಂಚಿಕೆ 1 ಮತ್ತು 2, ಸಂಯುಕ್ತ ಸಂಚಿಕೆ,
ಜನವರಿ–ಜೂನ್ 2000

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

SADHANE : Kannada Quarterly of the Bangalore University, Bangalore. Vol. 29, No. 1 & 2, (Jan-June) 2000. Pp. 108+iv

ಚಂದಾ ವಿವರ :

ಸಾಂಸ್ಥಿಕ ಆಜೀವ ಸದಸ್ಯತ್ವ	ರೂ. 500–00
ಆಜೀವ ಸದಸ್ಯತ್ವ	ರೂ. 300–00
ವಾರ್ಷಿಕ ಚಂದಾ	ರೂ. 50–00

ಪ್ರಕಾಶಕರು :
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560 056

ಮುದ್ರಕರು :
ಎಸ್. ಎಂ. ಹೊನ್ನಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ)
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು–560056

ಪರಿವಿಡಿ ಪುಟ

ಮಂಥನ

ನಾವೇರುವೆತ್ತರಕ್ಕೆ

—ಕುವೆಂಪು

ಕ. ವೆಂ. ರಾಜಗೋಪಾಲ

ನಾವೆಲ್ಲರೂ ಬಲ್ಲ
ಕೋಡುಗಲ್ಲು, ಇದು.
ತಲೆತಲಾಂತರದ ಸವಾಲು :
ಒಂದು ಯಕ್ಷ ಪ್ರಶ್ನೆ.

ಇದರ ತಲೆಯೇರಿ
ಇಳಿದು ಬಂದವರಿಲ್ಲ
ಈಗೆಂದರೆ ನೆನ್ನೆಮೊನ್ನೆ
ಬಾಯಾರಿ ಬಂದವನು
ಇದರ ಸಮ್ಮುಖ ನಿಂತು
ನೀರ ತರುವಾಸೆಯಲ್ಲಿ
ಮೈಯುಬ್ಬಿ ಕೈಯೆತ್ತಿ
ಮುಂದುವರಿದೇಬಿಟ್ಟ, ಇವನು.

ಹೆಗಲ ಜೋಳಿಗೆಯಲ್ಲಿ
ಗೂಟ–ಹೂಟ–ಮಾಟ–
ಹಗ್ಗ ಗಿಗ್ಗ - ಪೌಡರು - ಬ್ರೆಡ್ಡು
ಹೊಂದಿಸಿಕೊಂಡು
ಕೋಡುಗಲ್ಲಿಗೆ ಗೂಟ ಜಡಿದ, ಇವನು.

ಗೂಟದಿಂದ ಗೂಟಕ್ಕೆ
ತನ್ನ ತೂಗಿಸಿಕೊಂಡು
ಒಂದೊಂದೇ ಹೆಜ್ಜೆ ಹೂಡಿ
ಕಲ್ಲು ಸಂದುಗಳಲ್ಲಿ ನಾಡಿ

ಹಿಡಿದು, ಏರು ಮುಖ ಮಾಡಿ
ಹಲ್ಲಿಯು ಹಾಗೆ ಸರಿದು
ಕೋಡುಗಲ್ಲೇರಿ ಬಿಟ್ಟ, ಇವನು.

ಧೀರ - ಸುಕುಮಾರ - ಶೂರ
ಕೋಡುಗಲ್ಲಿನ ನೆತ್ತಿಗೇರಿ
ಆಕಾಶದರಳು ಮೋಡಕ್ಕೆ
ಕಾಲದರದೆಯಾಗಲಿಕ್ಕೆ
ಮೇಲೆ ಮೇಲೇರಿ ಹೋದ, ಇವನು.

ಕೆಳಗೆ ಜಮಾಯಿಸಿದ ಮಂದಿ
ಮೂಗಿಗೆ ಮೂಗೇರಿಸಿ
ಕಣ್ಣಿಗೆ ಕಣ್ಣೇರಿಸಿ
ಮೆದುಳಿಗೆ ಕಿವಿಯೇರಿಸಿ
ಚಪಲದ ರಾಜಕಾರಣ ಬೆರಸಿ
ಗೂಟಗಳ ನೆಣೆ ಸೆಣಸಿ
ಮೈಯೆಲ್ಲ ಕಲ್ಲಾಗಿಸಿದಾಗ, ಇವನು.

ಹೀಗಾದದ್ದೆ ನ್ಯಾಯ
ಬರಿದನಿಯಾಗುವುದೆ ಸೈ
ಕೂಗು ಕೇಳಿಸದಂತೆ
ತಲೆ ತಲಾಂತರದ ಈ ಕಲ್ಲಿಗೆ
ನಮ್ಮೆಲ್ಲರ ಕೋಡುಗಲ್ಲಿಗೆ
ಸವಾಲಿನ ಪ್ರಶ್ನೆಯಾದ, ಇವನು.

ಕೋಡುಗಲ್ಲಿನ ಬರಿಯ ಮೈ
ಸೆಡ್ಡು ಹೊಡೆಯಲು ಸರಿಯೆ ಸೈ
ಈ ಯಕ್ಷ ಬಂಡೆಯು ಕಲ್ಲೆದೆಗೆ
ತೂಗಿಸಿ ಸಮಕಾಲೀನ ಹಲಗೆ,
ಕೂಗಿಗೆ ಪ್ರತಿಧ್ವನಿ ಬಗೆಗೆ
ಆ ತುದಿಯಿಂದ ತೂಗಿದೆ ಹಗ್ಗ !
ಹೀಗೆ ಸವಾಲಾಗಿದ್ದಾನೆ ನಮಗೆ
ಸವಾಲಿಗೊಂದು ಸವಾಲು, ಧೀರ - ಇವನು !

ಕೆಳದಿ ಇತಿಹಾಸದಲ್ಲಿ ಮಂಗಳೂರು

ಕೆಳದಿ ಗುಂಡಾಜೋಯಿಸ್

ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ಕ್ರಿ.ಶ. ೧೪೯೯ ರಿಂದ ೧೭೬೩ ರವರೆಗೆ ಸಾಮಾನ್ಯ ಪ್ರಜೆಗಳ ನೆಮ್ಮದಿಗೆ ಸ್ಪಂದಿಸಿ ವೈಭವದಿಂದ ರಾಜ್ಯವಾಳಿದ ಕೆಳದಿ ಅರಸು ಮನೆತನದ ಇತಿಹಾಸವು ಗಮನಾರ್ಹವಾದುದು. ಈ ಅರಸರ ರಾಜ್ಯವಿಸ್ತೀರ್ಣವು ಉತ್ತರದಲ್ಲಿ ಅಂಕೋಲ-ಕಾರವಾರ, ದಕ್ಷಿಣದಲ್ಲಿ ಕೇರಳದ ಕಣ್ಣಾನೂರು ಆಚೆಗಿನ ತಳಿಪರಾಂಬಾ ನದೀತೀರ ಪಶ್ಚಿಮದಲ್ಲಿ ವಿಶಾಲವಾದ ಕಡಲ ತೀರಗಳು ಪೂರ್ವದಲ್ಲಿ ತುಮಕೂರಿನ ಚಿಕ್ಕನಾಯಕನಹಳ್ಳಿಯವರೆಗೆ ಸರಿಸುಮಾರಾಗಿ ಈಗಿನ ಕರ್ನಾಟಕದ ಅರ್ಧ ಭಾಗದ ಪ್ರದೇಶವನ್ನೇ ಒಳಗೊಂಡಿತ್ತು, ಕೆಳದಿ ಇತಿಹಾಸದಲ್ಲಿ ವಾಣಿಜ್ಯೋದ್ದಿಮೆಯನ್ನು ಕುರಿತು ಕಡಲ ತೀರದಿಂದ ಪೋರ್ಚುಗಲ್, ಸ್ಪೆಯಿನ್, ಮಸ್ಕಟ್, ಆಫ್ರಿಕಾ, ಮಾಲ್ಡೀವ್ಸ್, ಯೂರೋಪ್ ಹಾಗೂ ಅರೇಬಿಯಾದವರೆಗೂ ವಿಶ್ವಮಾರುಕಟ್ಟೆಯಲ್ಲಿ ತನ್ನದೇ ಆದ ಪ್ರಾಮುಖ್ಯತೆ ಗಳಿಸಿರುವುದು ಗಮನಾರ್ಹವಾದುದು. ಈ ಕುರಿತು ಅಪಾರ ಆಕರಗಳಿದ್ದರೂ ಶಾಸ್ತ್ರೀಯ ಅಧ್ಯಯನ ನಡೆದಿರುವುದು ಅಪರೂಪವೆಂದೇ ಹೇಳಬಹುದು. ಕೆಳದಿ ರಾಜ್ಯಕ್ಕೆ ಪಡುಗಡಲ ಪ್ರಾಂತವೇ ಆದಾಯವನ್ನು ತರುವ ಕೇಂದ್ರ ಬಿಂದುವಾಗಿದ್ದು ಪ್ರಮುಖ ವಾಣಿಜ್ಯೋದ್ಯಮ ಪಟ್ಟಣವಾಗಿದ್ದ ಮಂಗಳೂರನ್ನು ಕುರಿತು ಕೆಳದಿ ಇತಿಹಾಸದಲ್ಲಿರುವ ಇದರ ಪ್ರಾಮುಖ್ಯತೆಯನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ.

ಆಕರಗಳು

ಕೆಳದಿ ಹಾಗೂ ಪಡುಗಡಲ ತೀರದ ಇತಿಹಾಸಗಳನ್ನು ಕುರಿತು ಆಕರಗಳು ವಿಫುಲವಾಗಿವೆ. ಕೆಳದಿ ನೃಪ ವಿಜಯ, ಶಿವತತ್ವರತ್ನಾಕರ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ (ಎಂ. ಗಣಪತಿರಾವ್ ಐಗಳ್), ಸರಕಾರದ ದಕ್ಷಿಣ ಕನ್ನಡ ಜಿಲ್ಲೆಯ ಗೆಜೆಟೀರ್, ವಿಷಯ ವಿಶ್ವಕೋಶ, ಕರ್ನಾಟಕದ ಕೈಫಿಯತ್ತುಗಳು, ಡಾ. ತೋನ್ಸೆ ಮಾಧವ ಅನಂತ ಪೈರವರ ಅಭಿನಂದನ ಗ್ರಂಥ, ಪೀಟರ್ ಆಳ್ವಾರಿಸ್‌ರವರ ನಾಯಕಾಸ್ ಆಫ್ ಇಕ್ಕೇರಿ, ಪೂನಾ ವಿಶ್ವವಿದ್ಯಾನಿಲಯದ ಡಾ. ಚಿಟ್ನೀಸ್‌ರವರ ಕೆಳದಿ ಪಾಲಿಟಿ, ಗೋವಾ ಡಾ. ಬಿ. ಎಸ್, ಶಾಸ್ತ್ರಿರವರ ಪೋರ್ಚುಗೀಸ್ ಚಾರಿತ್ರಿಕ ಆಕರಗಳು[1], ಮೂಲ್ಕಿ ವಿಜಯ ಕಾಲೇಜಿನ ಡಾ. ವಸಂತ ಮಾಧವರ ವೆಸ್ಟರ್ನ್

ಕರ್ನಾಟಕ ಇಟ್ಸ್ ಅಗ್ರೇರಿಯನ್ ರಿಲೇಷನ್ಸ್, ಭಾರತ ಸರಕಾರದ ರಕ್ಷಣಾ ಇಲಾಖೆ ಯಿಂದ ಪ್ರಕಟವಾದ ಸೈನಿಕ ಸಮಾಚಾರ, ಪೋರ್ಚುಗೀಸರ ರೆಜಿಮೆಂಟೋಸ್ ಡಾಸ್ ಫೋರ್ಟಾಲೆಝಾಸ್ ಡಾ ಇಂಡಿಯಾ (Regimentos das Fortalonzas da India), ಲಿವ್ರೋ ಡಿ ಕರೆಸ್ಪಾಂಡಂಸಿಯ ಡು ಕೆನರಾ (Livro de Corresponde-ncia do Canara), ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲವಲ್ಲೆಯ ಪ್ರವಾಸಿ ಕಥನಗಳು, ಬಂಗರ ಇತಿಹಾಸ, ಇಂಸ್ಟ್ರುಕೋಸ್ (Instrucoes), ಮಾಂಕೋಸ್ ಡು ರೀನೋ (Moncoes de Reino), ಟ್ರಾಟಾಡೋಸ್ (Tratados), ಲೋಗನ್ (Logan) ಆಕರಗಳು, ಸಿಲ್ವಾರವರ ಇಂಡಿಯದ ಕ್ರೈಸ್ತರ ಇತಿಹಾಸ (Severine da silva-History of Christianity in Canara) ಮುಂತಾದ ಆಕರ ಸಾಮಗ್ರಿಗಳು ಪಡುಗಡಲ ಇತಿಹಾಸದಲ್ಲಿರುವ ಮಂಗಳೂರಿನ ಇತಿಹಾಸಕ್ಕೆ ಸಹಾಯಕಾರಿಯಾಗಿವೆ.

ಕೆಳದಿ ರಾಜ್ಯದ ಪಡುಗಡಲ ಸೀಮೆಗಳು

ಕೆಳದಿ ನೃಪ ವಿಜಯದಲ್ಲಿ ಕವಿ ಲಿಂಗಣ್ಣನು—

ಕಂ ॥ ಬಂಗಾಜಲ ಸಾವಂತ ಮ
ನಂಗೊಳಿಸುವ ಚೌಟ ಮೂಲ ಕುಂಬಳೆಯಿವರಂ
ಭಂಗಿಸಿ ತದ್ಧರೆಯುಮನು
ತ್ತುಂಗ ಶ್ರೀ ಮಂಗಳೂರನುರೆ ಸಾಧಿಸಿದಂ ॥

ವ॥ ಇಂತು ಚೌಟ ಬಂಗಾಜಲ ಸಾವಂತ ಮೂಲ, ಕುಂಬಳೆ ಕಾಸರಗೋಡ ಮನ್ನೆಯರ ಮುರಿದು ತತ್ತದ್ಧರಿತ್ರಿಯುಂ ವಶಗೈದು ಮಂಗಳೂರ ಸಂಸ್ಥಾನಮಂ ಸ್ವಾಧೀನಂ ಗೈದನಂತರಂ ಮೂಲಿಕೆ ಕೊಡೆಯಾಲ ಮೂಡಬಿದರೆ ಉಳ್ಳಾಲ ಕುಂಬಳೆ ಕಾಸರಗೋಡು ಪುದುವೆಟ್ಟು ಬೆಳ್ಳರೆ, ಕಾಂತಮಂಗಲ ಬಂದ್ಯಡಕ ಕಂಡಂಕುಳಿ ಕೊಲ್ಲೂರಬಾಚಿ ಶಿಶಿಲ ಚಂದ್ರಗಿರಿ ಕಿದುಟು ಮೂಡಗೊಡೆಯಾಲ, ಫಣಿಯಾಲ ಮುಂತಾದ ಕೋಂಟೆಗಳಂ ಬಲಿಯಿಸಿದನಂತುಮಲ್ಲದೆಯುಂ

ಕಂ ॥ ಕಡುಗಲಿಗಳೆನಿಸುವಗ್ಗದ
ಕೊಡಗರನೊಳಗೆನಿಸಿ ಸಾರ್ದು ಗೋರಾಷ್ಟ್ರದ ನಾ
ಲ್ಗಡೆಯಂ ಸಾಧಿಸಿ ಪಡುಗಡ
ಲೊಡೆಯಂ ತಾನೆನಿಸಿ ವೆಂಕಟೋರ್ವಿಪನೆಸೆದಂ ॥

ಕಂ ॥ ಕಂಗೊಳಿಪ ಮಂಗಲೂರು
ತ್ತುಂಗ ಪರಿಸ್ತರಣಮಂ ವಶಂಗೈದು ಬಳಿ
ಕ್ಕಿಂಗರೀಜಾದ್ಯರಾಗಮ
ನಂಗಳುಮಂ ತವಿಸಿ ರಾಜ್ಯಮಂ ಬಾಳಿಸಿದಂ

ಕಂ ॥ ಇಂದ್ರ ವಿಭವನಿಭ ವಿಭವನ
ರೇಂದ್ರಂ ತಾಂ ಮಂಗಲೂರ ತಾಣದೆ ಶಿವರಾ
ಜೇಂದ್ರಗಿರಿಯೆಂಬ ಗಡಮಂ
ಸಾಂದ್ರಯಶಂ ರಚನೆಗೆಯ್ಸಿದಂ ಪೊಸಬಗೆಯಿಂ[2]

ಹೀಗೆ ಚಾರಿತ್ರಿಕಾಂಶವನ್ನು ಉಲ್ಲೇಖಿಸಿದ್ದಾನೆ. ಕ್ರಿ.ಶ ೧೫೮೬–೧೬೨೯ ರಲ್ಲಿ ಆಳಿದ ಹಿರಿಯ ವೆಂಕಟಪ್ಪನಾಯಕ ಹಾಗೂ ೧೬೪೫–೧೬೬೦ ರಲ್ಲಿ ಆಳಿದ ಪ್ರಸಿದ್ಧನಾದ ಕೆಳದಿ ಶಿವಪ್ಪನಾಯಕ ಮತ್ತು ೧೭೩೯–೧೭೫೭ ರಲ್ಲಿ ಇಮ್ಮಡಿ ಬಸಪ್ಪನಾಯಕನ ಕಾಲದಲ್ಲಿ ಪಡುಗಡಲ ಪ್ರಾಂತಗಳು ಕೆಳದಿಯ ಆಧಿಪತ್ಯಕ್ಕೆ ಸೇರಿದುವು. ಕೆಳದಿ ಶಿವಪ್ಪನಾಯಕನ ಕಾಲದ ಶಾಸನವೊಂದು—

ಕೇಲದೀ ನಗರಾಧೀಶಃ ಶ್ರೀಮಾನಾಸೀತ್ ಸದಾಶಿವಃ ।
ಮಹೀಪಾಲಪುತ್ರ ಪೌತ್ರಃ ಶ್ರೀಮಾನ್ ಕೇಲದೀವಲ್ಲಭಃ ॥
ಶಿವಪ್ಪನಾಯಕೋ ಗುತ್ತಿ ಮಂಗಲೂರಾರಮಾದಿಕಾಮ್ ।
ಭುವಂ ಪಶ್ಚಿಮ ವಾರ್ಧ್ಯಂತಂ ಪರಿರಕ್ಷತಿ ಧರ್ಮತಃ ॥

– ಹೀಗೆ ಉಲ್ಲೇಖಿಸಿವೆ.[3]

ರಾಣಿ ಅಬ್ಬಕ್ಕದೇವಿ ಮತ್ತು ಮಂಗಳೂರಿನ ಪೋರ್ಚುಗೀಸರು :

ಕ್ರಿ.ಶ. ೧೫೪೪ ರಲ್ಲಿ ರಾಣಿ ಅಬ್ಬಕ್ಕದೇವಿಯು ಉಳ್ಳಾಲದ ರಾಣಿಯಾದಳು, ಈಕೆಯ ಪತಿಯೇ ಲಕ್ಷ್ಮಪ್ಪರಸ ಬಂಗರಾಜ. ೧೫೫೬ ರಲ್ಲಿ ಈತನು ಕಾಲವಾಗಲು ಇವನ ಅಳಿಯ ಕಾಮರಾಯನಿಗೆ ಪಟ್ಟವಾಯಿತು. ಅಬ್ಬಕ್ಕದೇವಿಗೂ ಕಾಮರಾಯನಿಗೂ ತೀವ್ರ ಭಿನ್ನಾಭಿಪ್ರಾಯವಿದ್ದುದರಿಂದ ಅತ್ತೆಯ ಮೇಲಿನ ದ್ವೇಷದಿಂದ ಕಾಮರಾಯನು ಪೋರ್ಚುಗೀಸರೊಡನೆ ಸ್ನೇಹ ಬೆಳಸಿದನು. ಈ ಕಾಲದಲ್ಲಿ ಪೋರ್ಚುಗೀಸರ ಹಾವಳಿ ಸಹಿಸಲಾರದಂತಾಯಿತು. ಉಳ್ಳಾಲ ಹಾಗೂ ಮಂಗಳೂರಿನಲ್ಲಿ ಇವರ ಸೈನ್ಯವು ವಿಪುಲವಾಗಿತ್ತು. ಪ್ರತಿಯೊಂದು ಬಂದರಿನಿಂದಲೂ ಪೋರ್ಚುಗೀಸರು ಸುಂಕ ವಸೂಲು ಮಾಡುತ್ತಿದ್ದರು. ಇವರು ಅಬ್ಬಕ್ಕದೇವಿಗೆ 'ಅಭಯದೇವಿ' ಅಥವಾ 'ಬುಕ್ಕಾದೇವಿ' ಎಂದು ಕರೆಯುತ್ತಿದ್ದರು. ಈಕೆಯು ಪೋರ್ಚುಗೀಸರಿಗೆ ಸರಿಯಾಗಿ ಕಪ್ಪವನ್ನೂ ಸಲ್ಲಿಸುತ್ತಿರಲಿಲ್ಲ. ಇದನ್ನು ವಸೂಲಿ ಮಾಡುವುದಕ್ಕಾಗಿ ದಿ. 4-1-1567 ರಂದು ಪೋರ್ಚುಗೀಸ್‌ನ ಡೊನ್ ಫ್ರಾನ್ಸಿಸ್ಕ ಮಸ್ಕರೇನ್ಹಾಸನು ಬಗಲೆಗಳ ಐದು ಮಂಜಿಗಳಲ್ಲಿ (3) 2000 ಸೈನಿಕರನ್ನು ತೆಗೆದುಕೊಂಡು ಉಳ್ಳಾಲದ ಸಮೀಪ ನದಿಯಲ್ಲಿ ಲಂಗರು ಹಾಕಿದನು. ಪೋರ್ಚುಗೀಸರು ರಾತ್ರೆ ಊಟ ಮಾಡುವ ಸಮಯದಲ್ಲಿ ಅಬ್ಬಕ್ಕದೇವಿಯು ೫೦೦ ಮಂದಿಯಿಂದ ೧೫೦೦ ರವರೆಗಿನ ಸೈನಿಕರು ಹಡಗುಗಳಿಗೆ ಮುತ್ತಿಗೆ ಹಾಕಿದರು. ಪೋರ್ಚುಗೀಸರು ಚೆಲ್ಲಾಪಿಲ್ಲಿಯಾಗಿ ದಿಕ್ಕು ದಿಕ್ಕಿಗೆ ಪಲಾಯನ ಮಾಡಿದರು. ಡೊನ್ ಫ್ರಾನ್ಸಿಸ್ಕನು

ತಿರುಗಿ ಸೈನ್ಯವನ್ನು ಜಮಾಯಿಸಿ ಯುದ್ಧಕ್ಕೆ ನಿಂತನು. ಉಭಯ ಕಡೆಗಳಲ್ಲಿ ಅನೇಕರು ಸಾವಿಗೀಡಾದರು, ಡೊನ್ ಲೂಯಿಜ್ ಆಲ್ಮೆಡನು ಇಫಿಫೆನಿಯೆ ದಿವಸ ಎಂದರೆ ಜನವರಿ ೬ನೇ ತಾರೀಖಿನ ಸಾಯಂಕಾಲ ತೀವ್ರ ಹೋರಾಟ ನಡೆಸಿದನು. ರಾಣಿಯ ಸೈನಿಕರಿಗೆ ಸೋಲುಂಟಾಯಿತು. ಪೋರ್ಚುಗೀಸರು ಉಳ್ಳಾಲವನ್ನು ವಶಪಡಿಸಿಕೊಂಡು ಅಗ್ನಿಗಾಹುತಿ ಮಾಡಿದರು. ಈ ಕದನದಲ್ಲಿ ರಾಣಿಯ ೫೦೦ ಮಂದಿ ಸೈನಿಕರೂ ಪೋರ್ಚುಗೀಸರ ಕಡೆಯಲ್ಲಿ ೪೦ ಮಂದಿಯೂ ಹತರಾದರೆಂದು ಹೇಳಲಾಗಿದೆ. ಅಬ್ಬಕ್ಕದೇವಿಯು ಉಚ್ಚಿಲ, ತಲಪಾಡಿಯಲ್ಲಿ ಗುಡ್ಡದ ಮೇಲಿರುವ ತನ್ನ ಕೋಟೆಗೆ ಓಡಿಹೋದಳು. ೧೫೬೯ ರಲ್ಲಿ ಈರ್ವರಿಗೂ ಒಪ್ಪಂದವುಂಟಾಯಿತು. ೧೫೬೮ ರಲ್ಲಿಯೋ ಬಂಗವಾಡಿ ಅರಸನಿಗೆ ಸೇರಿದ್ದ ಮಂಗಳೂರಿನಲ್ಲಿ ಕೋಟೆ ನಿರ್ಮಿಸಲು ಅನುಮತಿ ನೀಡಿದ್ದುದನ್ನು ಪೋರ್ಚುಗೀಸರ ದಾಖಲೆಯು ಉಲ್ಲೇಖಿಸುತ್ತದೆ.[4]

ಕೆಳದಿ ಹಿರಿಯ ವೆಂಕಟಪ್ಪನಾಯಕ—ಚಂದ್ರಶೇಖರ ಚಿಕ್ಕರಾಯ

ಕ್ರಿ.ಶ. ೧೬೦೬-೧೬೨೮ರಲ್ಲಿ ಚಿಕ್ಕರಾಯನು ತನ್ನ ತಾಯಿಯನ್ನು ಕೊಂದಿದ್ದ ಭೈರರಸ ಒಡೆಯನನ್ನು ನಿಗ್ರಹಿಸಲು ಕೆಳದಿ ಅರಸನ ಸಹಾಯವನ್ನು ಪ್ರಾರ್ಥಿಸಿ ಕಾಶೀಪತಿರಾಯನನ್ನು ರಾಯಭಾರಿಯಾಗಿ ಕೆಳದಿ ರಾಜಧಾನಿಗೆ ಕಳುಹಿಸಿದನು. ಇದರ ಪ್ರಕಾರ ಕದನವೇರ್ಪಟ್ಟು ೧೬೦೮ರಲ್ಲಿ ಕಾರ್ಕಳ ಸೀಮೆಯು ಕೆಳದಿಯ ಅಧೀನವಾಯಿತು. ವೆಂಕಟಪ್ಪನಾಯಕನು ಚಿಕ್ಕರಾಯನಿಗೆ ಸಾಣೂರು ಗ್ರಾಮವನ್ನು ಉಂಬಳಿಯಾಗಿತ್ತನು. ಕೆಳದಿ ಅರಸನೊಂದಿಗೆ ಚಿಕ್ಕರಾಯನು ಮಂಗಳೂರಿಗೆ ಹೋಗಿ ಅಧಿಕಾರಿಯನ್ನು ನೇಮಿಸಿ ಪೊಗದಿಯನ್ನು ಗೊತ್ತುಮಾಡಿದನು. ತನಗೆ ನೀಡಿದ ಸಹಾಯಕ್ಕಾಗಿ ಕೆಳದಿ ದೊರೆಯು ಪಟ್ಟೆಗ್ರಾಮ ಮತ್ತು ಹೆಜಮಾಡಿ ಮಾಗಣೆಯನ್ನು ಚಿಕ್ಕರಾಯನಿಗಿತ್ತನು. ಈ ಕಾಲದಲ್ಲಿ ಪೋರ್ಚುಗೀಸರ ಹಾವಳಿ ಹೆಚ್ಚಾಗುತ್ತಾ ಬಂದಿದ್ದರಿಂದ ಇದನ್ನು ನಿವಾರಿಸಲು ಮಂಗಳೂರು ರಾಜ್ಯದೊಳಗೆ ಕೊಡೆಯಾಲ, ಮೂಲಿಕೆ, ಮೂಡಬಿದರೆ, ಉಳ್ಳಾಲ, ಕುಂಬಳೆ, ಕಾಸರಗೋಡು, ಪುದುವೆಟ್ಟು, ಬೆಳ್ಳಾರೆ, ಕಾಂತಮಂಗಲ, ಬಂದ್ಯೆಡ್ಕ, ಕುಂಡೆಂಗಳಿ, ಕೊಲ್ಲೂರುಬಾಚಿ, ಶಿಶಿಲ, ಚಂದ್ರಗಿರಿ, ಕಿದೂರು, ಮೂಡುಗೊಡೆಯಾಲ, ಫಣಿಯಾಲಗಳಲ್ಲಿ ಕೋಟೆಗಳನ್ನು ನಿರ್ಮಿಸಲು ಮಂಗಳೂರಿನ ತನ್ನ ಅಧಿಕಾರಿಗೆ ಅಪ್ಪಣೆಯಿತ್ತನು. ಉಳ್ಳಾಲ, ತಲಪಾಡಿ, ಅಮ್ಮೆಂಬಳ, ಮಿಜಾರ, ಮಳಲಿ, ಪುತ್ತಿಗೆ, ಕಡಂದಳೆ, ಪೇಜಾವರ, ಹೆಜಮಾಡಿ, ಮುಂಡುಕೂರು, ಮಾಗಣೆಗಳು ಬಾಳೆಪುಣೆ, ಕೈರಂಗಳ, ಬೊಳುವು, ಬಾಳ ಕಳವಾರು, ಸಾಣೂರು, ಪಟ್ಟೆಗ್ರಾಮಗಳು, ಅಮುಣಜೆ ಮತ್ತು ಹೊಸಕೇರಿ ಎಂಬ ಎರಡು ಸುಂಕಗಳು ಚಿಕ್ಕರಾಯನಿಗೆ ಸೇರಿದುವು. ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲವಲ್ಲೆಯು ೧೬೨೩ರಲ್ಲಿ ಚಿಕ್ಕರಾಯನಿಗೆ ಭೂಗೋಳದ ನಕ್ಷೆಯೊಂದನ್ನು ಇನಾಮು ನೀಡಿದ್ದನು.

ಕೆಳದಿ ಅರಸರು ಮತ್ತು ಪೋರ್ಚುಗೀಸರು

ಕ್ರಿ.ಶ. ೧೬೧೮ರಲ್ಲಿ ಮಂಗಳೂರಿನ ಬಂಗರಾಜ ಕಾಮರಾಯನು ಪೋರ್ಚುಗೀಸರ ಸ್ನೇಹಿತನಾಗಿದ್ದನಷ್ಟೆ. ಕೆಳದಿಯ ಅಧೀನದಲ್ಲಿದ್ದ ಪಡುಗಡಲ ಪ್ರಾಂತದ ಅನೇಕ ಪಟ್ಟಣಗಳು ಹಾಗೂ ಮಂಗಳೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಿಗೆ ಪೋರ್ಚುಗೀಸರು ಹಾವಳಿಯನ್ನೆಸಗಿ ವಿನಾಕಾರಣ ದಹಿಸುತ್ತಾ ಕಿರುಕುಳ ನೀಡುತ್ತಿದ್ದರು. ಪೋರ್ಚುಗೀಸರ ಅಧೀನದಲ್ಲಿದ್ದ ಮಂಗಳೂರಿನ ಕೋಟೆಗೆ ಸಾಲವದೋರ ರೆಬೆಲೋ ಸೇನೆಯ ಅಧಿಕಾರಿಯಾಗಿದ್ದನು. ಒಂದು ಬಾರಿ ಕೆಳದಿಗೂ ಪೋರ್ಚುಗೀಸರಿಗೂ ಮಂಗಳೂರಿನಲ್ಲಿ ಕದನವೇರ್ಪಟ್ಟು ಕೆಳದಿಗೆ ಸೋಲಾಯಿತು. ವೆಂಕಟಪ್ಪ ನಾಯಕನು ತಿರುಗಿ ಸೇನೆಯನ್ನು ಜಮಾಯಿಸಿ ಡೊನ್ ಫ್ರಾನ್ಸಿಲ್ ಡಿ ಮೆನೆಜಿಸನು ಗೋವೆಯಿಂದ ಕಳುಹಿಸಿದ್ದ ಹಡಗಿನೊಂದಿಗೆ ಕಾದಲು ಬಂದ ಅಂತೋಣಿಯೋ ಡಿ ಸಾಲ್ಡಾಂಞನೊಂದಿಗೆ ಯುದ್ಧವಾಯಿತು. ಇದೇ ಸಮಯದಲ್ಲಿ ಒರಿಕ್ಷಿಸನು ಉಳ್ಳಾಲದ ರಾಣಿಗೆ ಸೇರಿದ ಸರಕು ತುಂಬಿದ ಒಂದು ದೊಡ್ಡ ಹಡಗನ್ನು ಹಿಡಿದನು. ಕೋಪಗೊಂಡ ರಾಣಿಯು ಕೆಳದಿ ಅರಸನ ಸಹಾಯಕ್ಕೆ ಮಂಗಳೂರಿಗೆ ಅಪಾರ ಸೇನೆಯನ್ನು ಕಳಿಸಿದಳು. ಪೋರ್ಚುಗೀಸರು ಕದನದ ಮಧ್ಯೆ ಮೋಸದಿಂದ ಮಂಗಳೂರನ್ನು ಸುಟ್ಟುಹಾಕಿದರು. ಒರಿಕ್ಷಿಸನು ಉಳ್ಳಾಲಕ್ಕೆ ಮುತ್ತಿಗೆ ಹಾಕಿ ಸೋತುಹೋದನು. ೧೬೧೮ರಲ್ಲಿ ನಡೆದ ಘೋರ ಕದನದಲ್ಲಿ ಕೆಳದಿ ವೆಂಕಟಪ್ಪ ನಾಯಕನಿಗೆ ಜಯವಾಗಿ ಪೋರ್ಚುಗೀಸರ ಸೇನಾನಿ ಲೂಯಿಜ್ ಡಿ ಬ್ರಿಟೋ ಇಮೆಲ್ಲೊ ಮತ್ತು ಡೊನ್ ಫ್ರಾನ್ಸಿಸ್ಕ ಡಿ ಮಿರಾಂದಾ ಮಡಿದರು. ೧೬೫೨-೫೩ರಲ್ಲಿ ಪ್ರಸಿದ್ಧನಾದ ಕೆಳದಿ ಶಿವಪ್ಪನಾಯಕನಿಗೂ ಪೋರ್ಚುಗೀಸರಿಗೂ ದಿ. ೧೪-೬-೧೬೫೨ ಮತ್ತು ೧೦-೧೧-೧೬೫೫ರಲ್ಲಿ ಕದನವೇರ್ಪಟ್ಟು ೧೬೫೩ ಸೆಪ್ಟೆಂಬರ್ ೬ರಲ್ಲಿ ಕಂಬೊಳಿಯಮ್, ಬಾರ್ಸಿಲೋರ್ ಮತ್ತು ಮಂಗಳೂರು ಕೆಳದಿಯ ಅಧೀನವಾಯಿತು.[5] ೧೫-೧-೧೬೫೩ರಲ್ಲಿ ಪೋರ್ಚುಗೀಸರು ಕಂಬೋಳಿಯಮ್ ಹಿಡಿಯಲಿಕ್ಕೆ ಹೋರಾಡಿ ಸೋತುಹೋದರು.[6] ಇದರಿಂದ ಪಡುಗಡಲಿನಲ್ಲಿ ಪೋರ್ಚುಗೀಸರ ಪ್ರಾಬಲ್ಯ ನಶಿಸಿತು. ಪಡುಗಡಲು ತೀರಗಳು ಸಂಪೂರ್ಣವಾಗಿ ಕೆಳದಿ ಅರಸರ ಆಧಿಪತ್ಯಕ್ಕೆ ಸೇರಿತು. ೧೬೭೦ರಲ್ಲಿ ಕೆಳದಿ ಅರಸರ ಅನುಮತಿ ಪಡೆದು ಪೋರ್ಚುಗೀಸರು ಮಂಗಳೂರಿನಲ್ಲಿ ಕೋಠಿ ನಿರ್ಮಿಸಿದರು. ಇದೇ ಸಮಯದಲ್ಲಿ ಮರಾಠಾ ಸರದಾರ ಶಿವಾಜಿಯೂ ಮಂಗಳೂರಿನ ಮೇಲೆ ಕಣ್ಣಿಟ್ಟಿದ್ದನು. ಅರಬರ ವ್ಯಾಪಾರಕ್ಕೆ ಅಡ್ಡಿಯುಂಟಾಗಿದ್ದರಿಂದ ೧೬೯೫ರಲ್ಲಿ ಅರಬ್ಬರು ಮಂಗಳೂರು ಪಟ್ಟಣಕ್ಕೆ ಬೆಂಕಿಯಿಟ್ಟು ಹಾವಳಿಯನ್ನೆಸಗಿದರು. ಪುನಃ ಪೋರ್ಚುಗೀಸರು ಕಾರ್ಖಾನೆ ನಿರ್ಮಿಸಲು ಕೆಳದಿ ಅರಸನ ಅನುಮತಿ ಪಡೆದರು.

ಇಟಲಿ ಪ್ರವಾಸಿ ಕಥನದಲ್ಲಿ ಮಂಗಳೂರು

ದಿ. ೧-೨-೧೬೨೩ ರಂದು ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲವಲ್ಲೆ ಪಡುಗಡಲ ಸೀಮೆಗೆ ಸಂಚರಿಸಿದಾಗ ಮಂಗಳೂರಿಗೆ ಭೇಟಿಯಿತ್ತು ಉಲ್ಲೇಖಿಸಿದ ಪ್ರವಾಸೀ ಕಥನವು ಆಸಕ್ತಿದಾಯಕವಾಗಿದೆ. ಆತನ ಮಾತಿನಲ್ಲಿಯೇ ಕೇಳಿ—

ಡಿಸೆಂಬರ್ ೧ನೆಯ ತಾರೀಖು ಬೆಳಗ್ಗೆ ಬಂಘೇಲ್ ನೋಡಲು ಹೋದೆ. ಇದನ್ನು ಇಂಡಿಯನರು 'ಬಂಘೇರ್' (Bangher)[7] ಅಥವಾ 'ಬಂಘೇರ್‌ವನ್' (Banghervan) ಎಂದು ಕರೆಯುತ್ತಾರೆ. ಇದು ಮಂಗಳೂರಿನಿಂದ ಉತ್ತರಕ್ಕೆ ಸುಮಾರು ಒಂದು ಮೈಲಿ ದೂರದಲ್ಲಿ ಸಮುದ್ರ ತೀರದಲ್ಲಿದೆ. ಇದನ್ನು ಮತ್ತು ಇದರ ಸುತ್ತ ಇದ್ದ ಪ್ರದೇಶವನ್ನು, ಆಳುತ್ತಿದ್ದ ರಾಜ ಈಗ ಓಡಿಹೋಗಿರುವ ಕಾರಣ ಕೆಳದಿ ವೆಂಕಟಪ್ಪನಾಯಕನ ಅಧೀನವಾಗಿದೆ. ಮಂಗಳೂರಿನಿಂದ ಹೊರಗೆ ಒಂದು ಗುಂಡು ಹಾರಿಕೆಯ ದೂರದಲ್ಲಿ ಆ ಕಡೆ ಸಣ್ಣ ನದಿಗೆ ಕಟ್ಟಿರುವ ಕಲ್ಲಿನ ಮುರುಕಲು ಸೇತುವೆಯೇ ಪೋರ್ಚುಗಲರ ಗಡಿ.

......ಬಹಳ ವರ್ಷಗಳ ಕಾಲ ಸುಖವಾಗಿ ಸಂಸಾರ ನಡೆಸಿದ ಬಂಘೇಲ್ ಅರಸನಿಗೂ ರಾಣಿಗೂ ಯಾವ ಸಂದರ್ಭದಲ್ಲಿ ಮನಸ್ತಾಪ ಹುಟ್ಟಿತೋ ಗೊತ್ತಿಲ್ಲ. ಆ ಮನಸ್ತಾಪದ ಕಾರಣವಾಗಿ ಆಕೆ ಗಂಡನನ್ನು ಬಿಟ್ಟು ಇಲ್ಲಿಯ ಪದ್ಧತಿಗನುಸಾರವಾಗಿ ಗಂಡ ಕೊಟ್ಟ ಒಡವೆ ವಸ್ತ್ರಗಳನ್ನು ಹಿಂದಿರುಗಿಸಿಬಿಟ್ಟಳು. ಇದು ಬಂಘೇಲ್ ಅರಸನನ್ನು ರೇಗಿಸಿತು. ಅವರ ವಿರಸ ಇಬ್ಬರಿಗೂ ಯುದ್ಧವಾಗುವ ಮಟ್ಟಕ್ಕೂ ಹೋಯಿತು. ಒಂದು ದಿನ ರಾಣಿ ದೋಣಿಯಲ್ಲಿ ಹೋಗುತ್ತಿರುವಾಗ ರಾಜ ಆಕೆಯನ್ನು ತನ್ನವರ ಮೂಲಕ ಬಂಧಿಸಿ ಸೆರೆಯಾಗಿಸಿದ. ರಾಣಿ ಉಪಾಯದಿಂದ ಬಿಡುಗಡೆ ಹೊಂದಿ, ತನ್ನ ರಾಜ್ಯಕ್ಕೆ ಹಿಂದಿರುಗಿ ಸೇಡು ತೀರಿಸಿಕೊಳ್ಳಲು ಬಂಘೇಲ್ ಅರಸನ ಮೇಲೆ ಯುದ್ಧ ಹೂಡಿದಳು. ಅರಸನಿಗೆ ಪೋರ್ಚುಗೀಸರ ಬೆಂಬಲವಿತ್ತು. ರಾಣಿಯು ಕೆಳದಿ ವೆಂಕಟಪ್ಪನಾಯಕನಲ್ಲಿಗೆ ಸಹಾಯಕ್ಕಾಗಿ ನಿಯೋಗ ಕಳುಹಿಸಿ ಪ್ರಾರ್ಥಿಸಿದಳು. ಆತ ರಾಣಿಯ ಸಹಾಯಕ್ಕೆ ಸೈನ್ಯವನ್ನು ಕಳುಹಿಸಿ ಬಂಘೇಲ್ ಅರಸನ ಕೋಟೆಯನ್ನು ನಾಶಮಾಡಿ ಆತನ ರಾಜ್ಯವನ್ನು ವಶಪಡಿಸಿಕೊಂಡನು. ಇದೇ ಸಂದರ್ಭದಲ್ಲಿ ನಾಯಕ ಇತರ ಸಣ್ಣ ಪುಟ್ಟ ಪ್ರಾಂತ್ಯಗಳನ್ನೂ ಗೆದ್ದುಕೊಂಡು ತನ್ನ ಅಧೀನವಾಗಿ ಮಾಡಿಕೊಂಡ. ಇಂಥವರಲ್ಲಿ ಕರ್ನಾಟ್ (Carnat > ಕಾರ್ನಾಡು) ರಾಣಿಯೂ ಒಬ್ಬಳು. ಈಕೆಯೂ ಪೋರ್ಚುಗಲರ ಬೆಂಬಲ ಪಡೆದು ಒಲಾಳ ರಾಣಿಗೆ ವಿರೋಧವಾಗಿದ್ದಳು. ನಾಯಕ ಮಂಗಳೂರಿಗೂ ನುಗ್ಗಿ ಆತುರಾತುರದಲ್ಲಿ ಯುದ್ಧಕ್ಕೆ ಸಿದ್ಧರಾಗಿದ್ದ ಪೋರ್ಚುಗಲ್ಲರನ್ನು ಸದೆಬಡಿದು ಸೋಲಿಸಿದ. ಒಟ್ಟಿನಲ್ಲಿ ಆತ ಇಂಡಿಯರಾದ ಸತ್ವವನ್ನೇ ಮುರಿದ ಎಂದು ಹೇಳಬಹುದು. ಅನೇಕ ಅಸ್ತ್ರ ಶಸ್ತ್ರಗಳನ್ನೂ, ಲಾಂಛನಗಳನ್ನೂ ವಿಜಯದಿಂದ (ಕೆಳದಿ ರಾಜಧಾನಿ) ಇಕ್ಕೇರಿಗೆ ಸಾಗಿಸಿಕೊಂಡು ಹೋದ.

ಹೀಗೆ ಪ್ರವಾಸೀ ಕಥನದಲ್ಲಿ ಹೇಳಿದ್ದಾನೆ.[8]

ಪಡುಗಡಲಿಂದ ಕೆಳದಿ ರಾಜ್ಯದ ಪೊಗದಿ ವಿವರ

ನಂ.	ಕಾಲ	ಕೆಳದಿ ಅರಸರು	ಸಾಮಂತರು	ಪೊಗದಿ ವಿವರ	ಆಕರ–ಇತರೆ
1	1520	ಸದಾಶಿವನಾಯಕ	ಬಂಗರಾಜ		ದ.ಕ.ಜಿ.ಪ್ರಾ.ಇ.
2	1583 1630	ಹಿರಿಯ ವೆಂಕಟಪ್ಪ ನಾಯಕ		ಉವಾಜೂರು (Vamanjur in Mangalore Tq.) ಓಂಜಿಯು (Omjiyu) ನಿಂದ, ಆದಾಯ ೨೦೦೦ ವರಹದಲ್ಲಿ ೮೦೦ ಪಗೋಡ.	Travels of Pietro Della Valle II
3	1612 1629	,,	3ನೇ ಲಕ್ಷ್ಮಪ್ಪ – ರಸ ಬಂಗರಾಜ	೩೫೦೦ ವರಹ. ಇದು ಶಿವಪ್ಪನಾಯಕನ ಕಾಲದವರೆಗೂ ನಡೆಯಿತು.	ದ.ಕ.ಜಿ.ಪ್ರಾ.ಜಿ. ಪು. 271
4	1608	,,	ತಿಮ್ಮಣ್ಣಾಜಿಲ	೩೦೦೦ ವರಹದಲ್ಲಿ ಅಜಿಲರ ಮನೆ ದೇವರು ಹಾಗೂ ದೈವದ ಖರ್ಚಿಗೆ ೫೦೦ ವರಹ ೨॥ ಹಣ ಕಳೆದು ಉಳಿದ ೨೪೯೯ ವರಹ ೨॥ ಹಣ.	–ಅದೇ–

1	2	3	4	5	6
5	,,	,,	ಸುರಾಲ ತೊಳಹಾರ ಅರಸರು	ಕುಂದಾಪುರ, ಗಂಗೊಳ್ಳಿಯಲ್ಲಿ ಪೋರ್ಚುಗೀಸರ ಉಪಟಳ ನಿವಾರಣೆಗಾಗಿ ಹಿರಿಯ ವೆಂಕಟಪ್ಪನಾಯಕ ಹಾಗೂ ಶಿವಪ್ಪ ನಾಯಕನಿಂದ 1608 ಮತ್ತು 1652 ರಲ್ಲಿ ಕೋಟೆ ನಿರ್ಮಿಸಿ ಅಧಿಕಾರಿಗಳನ್ನು ನೇಮಿಸಿದ್ದು.	–ಅದೇ–
6	1628 1630	,,	2ನೇ ಚನ್ನಮ್ಮದೇವಿ (ಚೌಳಿ)	೩೦೦೦ ಇಕ್ಕೇರಿ ವರಹ. ಇದು ಶಿವಪ್ಪ ನಾಯಕನವರೆಗೂ ನಡೆಯಿತು.	–ಅದೇ–
7	1630 1653	ವೀರಭದ್ರನಾಯಕ	3ನೇ ಶಂಕರದೇವಿ (ಬಂಗರ)	ಈಕೆಗೆ ವರಾಗಣೆಗಳನ್ನು ಉಂಬಳಿಯಾಗಿತ್ತು, ಪೊಗದಿ ಗೊತ್ತುಮಾಡಿದ್ದು.	–ಅದೇ–
8	1641	,,	ಕೂಳೂರು ದೊರೆ ಬಲ್ಲಾಳ	೨೧೦ ವರಹ ಹುಟ್ಟುವಳಿ ಇರುವ ಕೂಳೂರು ಶಂಕರದೇವಿಗೆ ಉಂಬಳಿಯಿತ್ತು, ೪೫॥ ವರಹ ೩॥ ಹಣ ಉತ್ತಾರವಿರುವ ನಂದಾವರ ಗ್ರಾಮ ಇನಾಮಿತ್ತು, ಪೊಗದಿ ಗೊತ್ತುಮಾಡಿದ್ದು.	

9	1726 1749	ಇಮ್ಮಡಿ ಸೋಮ ಶೇಖರ ನಾಯಕ	3ನೇ ಅಬ್ಬಕ್ಕದೇವಿ	೪೦೫೦ ವರಹ ೪॥ ಹಣ	ಮಂಗಳೂರಲ್ಲಿದ್ದ ಕೆಳದಿ ಅಧಿಕಾರಿ ಮುಖಾಂತರ ಸಲ್ಲುತ್ತಿತ್ತು -ಅದೇ-
10	1729 1730	,,	ನೀಲೇಶ್ವರ ಅರಸು	೨೧೨೦ ಇಕ್ಕೇರಿ ವರಹ ಆದಾಯದಲ್ಲಿ ರಾಮವರ್ಮ ರಾಜನಿಗೆ ೫೩೦ ಇಕ್ಕೇರಿ ವರಹ ಪೊಗದಿ ೧೫೯೦ ಇಕ್ಕೇರಿ ವರಹ.	–ಅದೇ– 380
11	1714 1739	,,	ಉಪ್ಪಿನಂಗಡಿ ಹಾಗೂ ಅಮರ ಸೂಳ್ಯ ಬಲ್ಲಾಳ	ಕೊಡಗು ದೊಡ್ಡವೀರಪ್ಪನಿಗೆ ೨ ವರಾಗಣೆ ೭೦೦೦ ಸೀಮೆ ಉಂಬಳಿಯಿತ್ತು ಪೊಗದಿ ಗೊತ್ತುಮಾಡಿದ್ದು.	ಅದೇ 405
12	1726	,,	ಚಂದ್ರಶೇಖರ ಚೌಟ	೪೧೫೯೪॥	ಕ. ಕೈಫಿಯತ್ತು ಪು. 293
13	1749 1769	ಇಮ್ಮಡಿ ಬಸಪ್ಪ ನಾಯಕ	3ನೇ ಚಂದ್ರಶೇಖರ ಚಿಕ್ಕರಾಯ ಚವುಟ	೧೩೭೯೨ ವರಹ ಮತ್ತು ಅರ್ಧಹಣದಲ್ಲಿ ದೇವತಾ ಉತ್ತಾರ ದೈವ ಉತ್ತಾರ ಕಳೆದು ೭೭೭೯ ವರಹ ೨॥ ಹಣ ೧॥ ಹಾಗ	ದ.ಕ.ಜಿ.ಪ್ರಾ.ಇ. –ಅದೇ–

1	2	3	4	5		6
14	1739 1754	,,	ಕೋಲತ್ತಿರಿ ಅರಸರು	ಯುದ್ಧದ ನಷ್ಟಕ್ಕಾಗಿ ನೀಡಿದ್ದು.	೧೦೦೦ ವರಹ	-ಅದೇ- ಅನುಬಂಧದಲ್ಲಿರುವ ಚಾರಿತ್ರಿಕ ದಾಖಲೆ ಯನ್ನೂ ನೋಡಿರಿ.
15	1749	,,	ಚಂದ್ರಶೇಖರ ಚಿಕ್ಕ ರಾಯ ಚವುಟ (ಮೊಮ್ಮಗ)	ಪೊಗದಿ ಈತನಿಗೆ ಬಿಟ್ಟಿದ್ದು	೬೦೦೯೦ ೭೭೯೨ ॥೧॥	ಕ. ಕೈಫಿಯತ್ತು ಪು. 293
				ಜುಂಲಾ	೧೩೭೯೨ ॥೧॥	
16(a)	1754 1757	ಚಿನ್ನಬಸಪ್ಪ ನಾಯಕ	ಪಾಂಡ್ಯಪ್ಪ ಅಜಿಲ	೨೫೦೦ ವರಹ		ಅದೇ, ಪು. 228
(b)		(ಕೆಳದಿ ಅರಸರು)	ಬೈಲಂಗಡಿ ಮೂಲರು (ಏಲಕ್ಕಿ ಮೂಲರು)	ಕೆಳದಿಗೆ ಏಲಕ್ಕಿಯನ್ನು ಸರಬರಾಜು ಮಾಡುತ್ತಿದ್ದರು.		ದ.ಕ.ಜಿ.ಪ್ರಾ.ಇ. -ಅದೇ-

ಕೆಳದಿ ರಾಜ್ಯದ ವಾಣಿಜ್ಯೋದ್ಯಮ ಮತ್ತು ಆಡಳಿತ

ಕ್ರಿ.ಶ. ೧೬೫೨ರಲ್ಲಿ ಮಂಗಳೂರು ಪೋರ್ಚುಗೀಸ್ ಸೇನಾನಿ ಸೆಬಾಸ್ಟಿಯೋ ಡಿ ಕಾರ್ವಾಲ್ಹೋ ವಶದಲ್ಲಿದ್ದುದನ್ನು ಕೆಳದಿ ಶಿವಪ್ಪನಾಯಕನು ಅವನನ್ನು ನಿಗ್ರಹಿಸಿ ತನ್ನ ಅಧೀನದಲ್ಲಿರಿಸಿಕೊಂಡನು. ಪೋರ್ಚುಗೀಸರ ಪ್ರಾರ್ಥನೆ ಮೇರೆಗೆ ಸೋಮಶೇಖರನಾಯಕನು ಹಲವು ಷರತ್ತುಗಳ ಮೇರೆಗೆ ಕಾರ್ಖಾನೆ ನಿರ್ಮಿಸಲು ಅನುಮತಿ ನೀಡಿದನು.[9] ಈತನ ಕಾಲದಲ್ಲಿ ಸೂರಪ್ಪಯ್ಯನು ಮಂಗಳೂರಿನಲ್ಲಿ ಅಧಿಕಾರಿಯಾಗಿದ್ದನು.[10] ಈತನ ಕೈಕೆಳಗೆ ವೀರಭದ್ರಯ್ಯ, ಸೂರಣ್ಣ, ಮಹದೇವಪುರದ ದೇವಪ್ಪಯ್ಯ ಇವರುಗಳು ಇದ್ದರು.[11] 1742–1756ರಲ್ಲಿ ದಕ್ಷಿಣ ಕೊಂಕಣದಲ್ಲಿ ಪ್ರಮುಖನಾಗಿದ್ದ ತುಳಾಜಿ ಆಂಗ್ರಿಯನು ಮಂಗಳೂರನ್ನು ಹಿಡಿಯಲು ಹೊಂಚು ಹಾಕಿದ್ದನು. ಸೋಮಶೇಖರನಾಯಕನ ಅಜ್ಞೆ ಮೇರೆಗೆ ದಿ. 1-9-1737—26-8-1737ರಲ್ಲಿ ಕೆಳದಿ ಮತ್ತು ಮಲಬಾರ್ ಗಡಿ ಶಾಂತಿ ಒಪ್ಪಂದದ ಚಾರಿತ್ರಿಕ ದಾಖಲೆಯೊಂದು ತಲಚೇರಿಯಲ್ಲಿದ್ದು ಗಮನಾರ್ಹವಾಗಿದೆ. (ಅನುಬಂಧ ನೋಡಿರಿ) ಕೆಳದಿ ಅರಸರ ಆಡಳಿತದ ನೆಮ್ಮದಿಯನ್ನು ಕುರಿತು ಪೂನಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ॥ ಚಿಟ್ನೀಸ್‌ರವರು ಸಮಕಾಲೀನ ಇತಿಹಾಸದ ಆಕಾರಗಳನ್ನು ಆಧರಿಸಿ ಈ ರೀತಿ ಹೇಳಿದ್ದಾರೆ.

Peace and order reigned supreme under the Keladi rulers. Law and justice were respected in the Keladi state and the people were on the whole happy and contented under their monarchs. About the security in the Keladi state, Alexander Hamilton has the following remarks to make ; The subject of this Country observe the laws so well, that Robbery or Murder are hardly heard of among them, And a stranger may pass through the country without being askt where he is going and what business he has.[12] About the law abiding habits of the people of Mangalore John Fryer says, "They have well constitnted laws and observe them obediently".[13] Mr. Stockes in his survey of Nagar Division remarks about the nature of the people of Keladi (Bidnur the capital of Keladi State) this : **I have no Where in India seen so much honesty and Veracity as Among the country People of Nagara.[14] The Ryots of Nagara Have Always prided Themselves on their Nationality.[15]**

ಇದನ್ನೇ ಕೆಳದಿ ನೃಪವಿಜಯದಲ್ಲಿ ಕವಿ ಲಿಂಗಣ್ಣನು–

ಪುಸಿ ಕಳವು ಪಾದರಂ ಬೇ
ವಸಮುಟ್ಟುಳಿ ದಾಳಿ ಠೌಳಿಯುಪಹೃತಿ ಮೋಸಂ।
ಪಿಸುಣನ್ಯಾಯ ಮೆನಿಪ್ಪೀ
ಪೆಸರ್ಗಳ್ ಪೆಸರ್ಗೊಂಬೊಡಿಲ್ಲವಂತಾ ನಾಡೊಳ್ ॥

ಎಂಬುದಾಗಿ ಕಾವ್ಯಧಾರೆಯಲ್ಲಿ ಕೊಂಡಾಡಿದ್ದಾನೆ. (ಆಶ್ವಾಸ 1)

ಮಂಗಳೂರಿನ ಇತಿಹಾಸ ಅವಶೇಷಗಳು

ಡಾಮ್ ಮೊರೇಸ್ "The Open eyes A Journey Through Karnataka' ದಲ್ಲಿ ಹೇಳಿದಂತೆ ಮಂಗಳೂರಿಗೆ ತನ್ನದೇ ಆದ ಇತಿಹಾಸವಿದೆ. ವಿಜಯನಗರ ಕಾಲದಿಂದ ಕ್ರಿ. ಶ. ೧೫೬೫ ರವರೆಗೆ ದಕ್ಷಿಣ ಭಾರತದಲ್ಲಿ ಮಂಗಳೂರು-ಬಾರಕೂರು ರಾಜ್ಯವೆಂದು ವಿಭಾಗಿಸಲ್ಪಟ್ಟಿದ್ದು. ಅನಂತರ ಇದು ಕೆಳದಿ ಅರಸರ ಸೇನೆ ಮತ್ತು ವಾಣಿಜ್ಯೋದ್ದಿಮೆ ಕೇಂದ್ರವಾಯಿತು. ಸಂಪದ್ಭರಿತ ಮಂಗಳೂರನ್ನು ಪೋರ್ಚು ಗೀಸರು ಹಾವಳಿಯನ್ನೆಸಗಿ ಅಗ್ನಿಗಾಹುತಿ ಮಾಡಿದರೂ ಕೆಳದಿ ಅರಸರು ಕಾಲ ಕಾಲಕ್ಕೆ ಇದನ್ನು ಜೀರ್ಣೋದ್ಧರಿಸಿದರು, ಮಂಗಳೂರಿನ ಐತಿಹಾಸಿಕ ಪರಂಪರೆಯ ಪರಿಸರ ವನ್ನು ಸಮಕಾಲೀನ ವಿದೇಶೀಯ ದಾಖಲೆಗಳು ಹೀಗೆ ಹೇಳುತ್ತವೆ.

Duarte Barbosa (Spain - 1516)

Netravati is great and very fair river, which discharges its waters into the sea, and here hard by the coast, towards the south, is very great town (Mangalore) where many ships take cargoes of Black rice to sell in the land of Malabar. The said river " is very pleasant and beautyful, full of groves of coconut palms..."

Della Valle (Italy 1623)

" ..... as salt water bay round and large on its joining sea... .." Its runs from North and other from South formed two rivers before its entrance to sea"

Dr. John Fryer (English Travellor 1675)

The entrance of the river was 8 ft. fathom above and water navigable on all sides. The river Netravathi according to Hamilton, is running from the mountain Ghats and proceedings from great rains and dews, pavering to them rushed towards the sea from the North, South and East and all joining together

near MANGALORE . . The fields in and near MANGALORE yielded two crops of corn in the plains, and the higher lands produce pepper betel-nut etc.,

ಇದೇ ರೀತಿಯಲ್ಲಿ ಬುಕನನ್ ಸಹ ಮಂಗಳೂರಿನ ಪ್ರಾಚೀನ ಪರಿಸರವನ್ನು ಸುಂದರವಾಗಿ ವರ್ಣಿಸಿದ್ದಾರೆ.

ಮಂಗಳೂರಿನಲ್ಲಿರುವ ಸ್ಮಾರಕಗಳು

ಪುರಾತನ ದೇವಾಲಯಗಳು, ಮಸೀದಿ, ಕೋಟೆ, ಇಗರ್ಜಿಗಳು ಮಂಗಳೂರಿನಲ್ಲಿ ಅಳಿದುಳಿದುದು ಇವೆ. ಇವುಗಳಲ್ಲಿ ಪ್ರಸಿದ್ಧವಾದ ಮಂಗಳಾದೇವಿ ದೇವಾಲಯು ಕ್ರಿ. ಶ. ೯೬೮ ರಲ್ಲಿ ಆಳುಪ ವಂಶದ ಇಮ್ಮಡಿ ಕುಂದವರ್ಮನು ಜೀರ್ಣೋದ್ಧರಿಸಿದುದನ್ನು ಕೆಳದಿ ಅರಸರು ಪುನರುದ್ಧರಿಸಿದರು. ಮೂಲಬಿಂಬವು ಹತ್ತನೇ ಶತಮಾನದಲ್ಲಿ ಮತ್ಸ್ಯೇಂದ್ರನಾಥ ಹಾಗೂ ಗೋರಖನಾಥ ಪಂಥದ ಅನುಯಾಯಿಗಳಿಂದ ಪ್ರತಿಷ್ಠಾಪಿಸಲ್ಪಟ್ಟಿತೆಂದು ಉಕ್ತವಾಗಿದೆ.[6]

ಮಂಗಳೂರಿನಲ್ಲಿ ಈ ಕೆಳಗಿನಂತೆ ನಾಲ್ಕು ಕೋಟೆಗಳಿವೆ.

೧. ಕೆಳದಿ ಬಸಪ್ಪನಾಯಕನಿಂದ ನಿರ್ಮಿತವಾದ ಮಂಗಳೂರು ಕೋಟೆ.

೨. ಲೈಟ್ ಹೌಸ್ ಬೆಟ್ಟದ ಕೋಟೆ.

೩, ಸಂತ ಸೆಬಾಸ್ಟಿಯನ್ ಕೋಟೆ.

೪. ಉರ್ವದ ಸಮೀಪದಲ್ಲಿರುವ ಬಂಗರ ಕೋಟೆ.

೫. ಮೂಲ್ಕಿಯ ಸಮೀಪದ ಸೀಮಂತೂರಿನಲ್ಲಿ ನಿರ್ಮಿಸಿದ ಕೆಳದಿ ವೆಂಕಟಪ್ಪ ನಾಯಕನ ಕೋಟೆ.

ಕವಿ ಲಿಂಗಣ್ಣನು ಕೆಳದಿ ನೃಪವಿಜಯದಲ್ಲಿ—

ಕಂ ॥ ಇಂದ್ರವಿಭವ ನಿಭವಿಭವನ
ರೇಂದ್ರಂ ತಾಂ ಮಂಗಲೂರ ತಾಣದೆ ಶಿವರಾ ।
ಜೇಂದ್ರಗಿರಿಯೆಂಬ ಗಡಮಂ
ಸಾಂದ್ರಯಶಂ ರಚನೆಗೆಯ್ಸಿದಂ ಪೊಸಬಗೆಯಿಂ ॥

ಇದರ ಪ್ರಕಾರ 1739–1757ರಲ್ಲಿ ಕೆಳದಿಯ ಅಧಿಪತಿ ಇಮ್ಮಡಿ ಬಸವಪ್ಪನಾಯಕನ ಕಾಲದಲ್ಲಿ ಇದು ನಿರ್ಮಾಣವಾಗಿರುತ್ತದೆ. ಪೋರ್ಚುಗೀಸರ ವಶದಲ್ಲಿದ್ದ ಸಂತ ಸೆಬಾಸ್ಟಿಯನ್ ಕೋಟೆ ಶಿವಪ್ಪನಾಯಕ ಆದಿಯಾಗಿ ಹಲವರಿಂದ ಪುನರುದ್ಧರಿಸಲ್ಪಟ್ಟಿತೆಂದು ಉಕ್ತವಾಗಿದೆ. ಕೆಳದಿ ಅರಸರ ಹಾಗೂ ಲೈಟ್ ಹೌಸ್ ಬೆಟ್ಟದ

ಕೋಟೆಯ ಅವಶೇಷಗಳು ಈಗಲೂ ಇವೆ.[17] ಸೀಮಂತೂರಿನಲ್ಲಿ ಕೆಳದಿ ವೆಂಕಟಪ್ಪನಾಯಕನು ಕಟ್ಟಿಸಿದ ಕೋಟೆಯನ್ನು ಈಗಲೂ ಕಾಣಬಹುದು. ಸಮೀಪ ದಲ್ಲಿರುವ ಗುರುಪುರ ಮಠ (ಮಠದ ಶಿಲ್ಪ ಸೌಂದರ್ಯ ಗಮನಾರ್ಹ), ಶ್ರೀ ವರದ ರಾಜ ವೆಂಕಟರಮಣ ದೇವಾಲಯಗಳಿದ್ದು ಪ್ರತಿ ವರ್ಷ ಕಾರ್ತೀಕ ಮಾಸದಲ್ಲಿ ದೀಪೋತ್ಸವ ಜರುಗುತ್ತದೆ. ಬಡವರಿಗೆ ಗಂಜಿ ದಾನ ಮಾಡುತ್ತಿದ್ದ ಗಂಜಿ ಮಠದ ಅವಶೇಷಗಳೂ ಕಂಡುಬರುತ್ತವೆ.

ಮಂಗಳೂರಿನ ಇಗರ್ಜಿಗಳು

ಧಾರ್ಮಿಕ ನೀತಿಯಲ್ಲಿ ಕೆಳದಿ ಅರಸರ ಧೋರಣೆ ಆದರ್ಶಪ್ರಾಯವಾದುದು. ತಾವು ವೀರಶೈವ ಮತಾವಲಂಬಿಯಾದರೂ ಮತೀಯ ದುರಭಿಮಾನಕ್ಕೆ ಒಳಗಾಗದೇ ಅನ್ಯ ಧರ್ಮೀಯರಿಗೂ ಆಶ್ರಯವಿತ್ತು ಪೋಷಿಸಿದರು. ಇಸ್ಲಾಂ ಧರ್ಮಕ್ಕೆ ಇವರು ಕಟ್ಟಿಸಿಕೊಟ್ಟ ಮಸೀದಿಯು ಈಗಲೂ ಕೌಲೇದುರ್ಗದಲ್ಲಿದೆ.[18] ಕ್ರೈಸ್ತ ಧರ್ಮೀಯರಿಗೂ ಕೆಳದಿ ಅರಸರು ಆಶ್ರಯವಿತ್ತುದು ಗಮನಾರ್ಹವಾದುದು. 1677ರಲ್ಲಿ ರೋಂ ನಿಂದ ಆಗಮಿಸಿದ ಫಾದರ್ ಥಾಮಸ್ ಡಿ ಕ್ಯಾಸ್ಟ್ರೋ ಪಾದ್ರಿಗೆ ಈ ಅರಸರು ಆಶ್ರಯ ನೀಡಿದರು. ಈ ಪಾದ್ರಿಯು ಮಂಗಳೂರಿಗೆ ಬಂದಾಗ ರುಜೇರಿಯೋ ಇಗರ್ಜಿಯು ಒಂದು ಫ್ಯಾಕ್ಟರಿಯಾಗಿತ್ತು. 1698ರಲ್ಲಿ ಕೆಳದಿ ರಾಣಿ ಚೆನ್ನಮ್ಮಾಜಿ ಇದನ್ನು ಜೀರ್ಣೋದ್ಧರಿಸಲು ಸಹಾಯ ಮಾಡಿದಳು. ಮಂಗಳೂರಿನ ಹಂಪನ ಕಟ್ಟೆ ಮಿಲಾಗ್ರಿ ಇಗರ್ಜಿ ಕಟ್ಟಿಸಲು ಉಂಬಳಿಯನ್ನಿತ್ತಳು.[19] ಬಂಟವಾಳದ ಇಗರ್ಜಿ 1702ರಲ್ಲಿ ಫಾದರ್ ಮಿಗ್ವೆಲ್ ಡೊಮೆಲ್ಲೊಗೆ ಲಭಿಸಿತು. ಬಿಷಪ್ ಕೆಸ್ಟ್ರೋವಿನ ಮರಣಾನಂತರ ಮಿಲಾಗ್ರಿ ಇಗರ್ಜಿ ಕೆಳದಿ ಆಡಳಿತಕ್ಕೆ ಸೇರಿತು. ಇದು 1698ರಿಂದ 1714ರ ವರೆಗೂ ಆಳಿದ ಬಸಪ್ಪನಾಯಕನವರೆಗೆ ಮುಂದುವರೆಯಿತು. ಇಮ್ಮಡಿ ಸೋಮಶೇಖರ ನಾಯಕನು ಧಾರ್ಮಿಕ ಕರಾರಿನ ಮುಖಾಂತರ ಕಟ್ಟುಪಾಡು ಮಾಡಿ ಮಿಲಾಗ್ರಿ ಇಗರ್ಜಿಯನ್ನು ಪುನರುದ್ಧರಿಸಿಕೊಟ್ಟನು.[20] 1623ರಲ್ಲಿ ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲವಲ್ಲೆ ತನ್ನ ಪ್ರವಾಸೀ ಕಥನದಲ್ಲಿ ದೆಲ್ ರೊಸೇರಿಯೊ (Del Roserio), ಲಾ ಮಿಸರಿಕೋರ್ಡಿಯಾ (La Miserikordia), ಸ್ಯಾನ್ ಫ್ರಾನ್ಸೆಸ್ಕೋ ಇಗರ್ಜಿಗಳು ಇದ್ದುದನ್ನು ನೋಡಿರುವುದಾಗಿ ಉಲ್ಲೇಖಿಸಿದ್ದಾನೆ. ಈಗ ಮಂಗಳೂರಿನಲ್ಲಿ ಬೋಳಾರದ ರೊಸೇರಿಯ ಹಾಗೂ ಬಲ್ಮಠದ ಶಾಂತಿ ಚರ್ಚುಗಳು ಮಾತ್ರ ಕಂಡುಬರುತ್ತವೆ.

ಉಪ ಸಂಹಾರ

ಕೆಳದಿ ರಾಜ್ಯಕ್ಕೆ ಮಂಗಳೂರು ಪ್ರಮುಖ ವಾಣಿಜ್ಯೋದ್ಯಮ ಕೇಂದ್ರವಾಗಿತ್ತು. ಪೋರ್ಚುಗೀಸರಾದಿಯಾಗಿ ಶತ್ರುಗಳ ಹಾವಳಿಗಳಿಂದ ತತ್ತರಿಸಿದ ಮಂಗಳೂರನ್ನು ವಿವಿಧ

ರೀತಿಗಳಲ್ಲಿ ಈ ಅರಸರು ರಕ್ಷಣೆ ಮಾಡಿ ಕಾಪಾಡಿದರು. ಮಂಗಳೂರು ಹೊನ್ನಾವರ ಮುಂತಾದ ಕಡಲ ತೀರಗಳಿಂದ ಮಸ್ಕಟ್, ಆಫ್ರಿಕಾ, ಪೋರ್ಚುಗಲ್, ಮಾಲ್ಡೀವ್ಸ್, ಯೂರೋಪ್ ಮತ್ತು ಅರೇಬಿಯಾದವರೆಗೂ ಅಕ್ಕಿ, ಮೆಣಸು, ಕಬ್ಬಿಣ, ಕೊಬ್ಬರಿ, ಕಬ್ಬು, ಬೆಲ್ಲ, ಹುಳಿ, ಗಂಧ, ದ್ರಾಕ್ಷಿ, ಅಡಕೆ, ಮೆಣಸು ಮುಂತಾದ ದವಸ ಧಾನ್ಯಗಳು ರಫ್ತಾಗುತ್ತಿದ್ದು ವಿದೇಶೀಯ ದಾಖಲೆಗಳಲ್ಲದೆ[21], 1745ರಲ್ಲಿನ ಮಂಜೇಶ್ವರದ ದಾಖಲೆಗಳು ಉಲ್ಲೇಖಿಸಿವೆ. ತಲಚೇರಿಯ ಇಂಗ್ಲೀಷ್ ದಾಖಲೆಗಳಲ್ಲಿ "ಹರಕಮತಿ" (ಹರಿ ಕಾಮತ್) 1740ರಲ್ಲಿ ಕೆಳದಿ ರಾಜ್ಯದ ವ್ಯಾಪಾರ ಪ್ರತಿನಿಧಿಯಾಗಿದ್ದನೆಂದು ತಿಳಿಸುತ್ತದೆ.[22] ವಿಮಾನಿನ ಲಾಂಛನವಿದ್ದ ನಾಣ್ಯ ಮಂಗಳೂರಿನಿಂದ ಅಚ್ಚಾಗುತ್ತಿದ್ದುದೂ ಕಂಡುಬರುತ್ತದೆ. ಕೆಳದಿ ಅರಸರ ಹಡಗಿಗೆ "ಈಶ್ವರೀ ಮಹಾಮಾಯೆ" ಎಂಬ ನಾಮಾಂಕಿತವಿತ್ತೆಂದು ಗೋವಾದ ದಿ। ಡಾ. ಬಿ. ಎಸ್. ಶಾಸ್ತ್ರಿ ತಿಳಿಸಿದ್ದಾರೆ.[23] ಕೆಳದಿ ಅರಸರ ರಾಜ್ಯದಲ್ಲಿ ನೆಮ್ಮದಿಯ ಆಡಳಿತವಿತ್ತೆಂಬುದನ್ನು ಕ್ರೈಸ್ತ ಇತಿಹಾಸಕಾರ ಸಿಲ್ವರವರ ಚಾರಿತ್ರಿಕ ದಾಖಲೆಯು ಸಮರ್ಥಿಸುತ್ತದೆ.[24] 1763ರಲ್ಲಿ ಕೆಳದಿ ರಾಜ್ಯ ನವಾಬ್ ಹೈದರನ ಧಾಳಿಗೆ ತುತ್ತಾಗದೇ ಇದ್ದಿದ್ದರೆ ಈಗಿನ ಬೆಂಗಳೂರು, ಮದರಾಸು, ಬೊಂಬಾಯಿಯಂತೆ ಭಾರತದ ನಕ್ಷೆಯಲ್ಲಿ ಮಧ್ಯಕಾಲೀನ ದೇಶೀಯ ಸಂಸ್ಥಾನದ ಇತಿಹಾಸದಲ್ಲಿ ಕೆಳದಿ ರಾಜ್ಯದ ವಾಣಿಜ್ಯೋದ್ಯಮ ಕೇಂದ್ರವಾಗಿ ಮಂಗಳೂರು ಪ್ರಮುಖ ಸ್ಥಾನ ಪಡೆದು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಈಗ ಗಳಿಸಿದ್ದುದಕ್ಕಿಂತಲೂ ಹೆಚ್ಚಿನ ಪ್ರಸಿದ್ಧಿ ಗಳಿಸಿ ಕೆಳದಿ ಸಂಸ್ಥಾನದ ಕೀರ್ತಿಗೆ ಕಳಶಪ್ರಾಯವಾಗುತ್ತಿತ್ತೆಂಬುದರಲ್ಲಿ ಉತ್ಪ್ರೇಕ್ಷೆ ಯಿರಲಾರದು.

Foot Notes

1 ಇತಿಹಾಸ ಆಕರಗಳನ್ನು ಕಾಪಾಡುವಲ್ಲಿ ಪೋರ್ಚುಗೀಸರ ಆಸಕ್ತಿ ಗಮನಾರ್ಹವಾದು ದೆಂದು ಗೋವಾದ ಡಾ. ಬಿ. ಎಸ್. ಶಾಸ್ತ್ರಿ ಹೇಳಿದ್ದಾರೆ (Studies in Indo-Portuguese History-Introduction ನೋಡಿರಿ).

2 ಕೆ.ನೃ.ವಿ. ಆಶ್ವಾಸ V ಮತ್ತು VI.

3 E.C VI Sg II.

4 Pando da Trindade, Conquista Espiritual do Oriente (II Lisbon 1964) 229-30.

5 ಕೆಳದಿ ರಾಜ್ಯದಲ್ಲಿ ಸೇನಾವ್ಯವಸ್ಥೆ ಕುರಿತು ಭಾರತ ಸರಕಾರದ ರಕ್ಷಣಾ ಇಲಾಖೆಯಿಂದ ಪ್ರಕಟವಾದ ಸೈನಿಕ ಸಮಾಚಾರ ಸಂ 3 ; ಸಂಚಿಕೆ 3,4,5 (6, 13, 20-1-1991) ರಲ್ಲಿ ಪ್ರಕಟವಾದ ನನ್ನ ಲೇಖನ ನೋಡಿರಿ.

6 Instrucoes No. 4 ; 1647 Folio 105.

7 (ಎ) ಬಂಘೇರ್ ಎಂಬುದು ಈಗ ಮಂಗಳೂರು ನಗರದೊಳಗೆ ಸೇರಿಹೋಗಿರುವ ಬೋಳಾರು ಪ್ರದೇಶವೆಂದು ಹೇಳಬಹುದು. ಬಹುಶಃ ಬೆಂಗೆರೆಯೇ ಆಗಿನ ಬೆಂಘೇರ್ ಇರಬೇಕು (ಸುದರ್ಶನ, ಪು. 84, ಎಚ್. ಎಲ್. ನಾಗೇಗೌಡರ ಲೇಖನ).

(ಬಿ) ಪೋರ್ಚುಗೀಸರ ಕಾಲದ ನಕ್ಷೆಯನ್ನು ನೋಡಿರಿ. (ಅನುಬಂಧ).

8 ಇಟಲಿಯ ತ್ರಿಯೇಸ್ತೆ ವಸ್ತುಸಂಗ್ರಹಾಲಯದಿಂದ ತರಿಸಿದ ಪಿಯುತ್ರೋಡೆಲ್ಲವಲ್ಲಿಯ ಹಲವು ಚಾರಿತ್ರಿಕ ದಾಖಲೆಗಳನ್ನು ಕೆಳದಿ ಇತಿಹಾಸ ಸಂಶೋಧನಾಲಯದಲ್ಲಿ ನೋಡಬಹುದು. ಇಟಲಿಯ ವಿದ್ವಾಂಸರೊಬ್ಬರು ಕೆಳದಿ ಇತಿಹಾಸ ಕುರಿತು ಸಂಶೋಧನೆ ಕೈಗೊಂಡಿದ್ದಾರೆ.

9 Tratados, T IV, PP 193 and 195, Damens Portuguese Records. 74-75.

10 Logan : A collection PT I-XXV, pp 31-32.

11 Ibid : XLIII, p 42.

12 Alexander Hamilton : A New account I p. 158 (ch II).

13 John Fryer: A New Account, p 150.

14 ಕೆಳದಿ ರಾಜಧಾನಿಯಾಗಿದ್ದ ಬಿದನೂರಿನ ಈಗಿನ ಸ್ಥಳನಾಮ.

15 Stoakes : Survey of Nagar Division. ನನ್ನ ಸಂಶೋಧನಾ ಸಮೀಕ್ಷೆಯಲ್ಲಿ ಮಂಗಳೂರು ಜಿಲ್ಲಾ ಕಲೆಕ್ಟರ್ ಆಫೀಸಿನ ಪತ್ರಾಗಾರದಲ್ಲಿ ಇಂತಹ ಚಾರಿತ್ರಿಕ ದಾಖಲೆಗಳಿರುವುದನ್ನು ಕೇಳಿದ್ದೇನೆ.

16 ಕೆಳದಿ ಇತಿಹಾಸ ಸಂಶೋಧನಾಲಯದಲ್ಲಿ ನಾಥ ಪಂಥ ಹಾಗೂ ಬೌದ್ಧ ಧರ್ಮ ಕುರಿತು ಪುರಾತನ ಓಲೆಗರಿ ಹಸ್ತಪ್ರತಿಯೊಂದಿದೆ.

17 ಪಡುಗಡ್ಯಲ ಸೀಮೆಯಲ್ಲಿ ಕೆಳದಿ ಅರಸರ ಕೋಟೆಗಳ ಸೂಚಿಯನ್ನು ಅನುಬಂಧದಲ್ಲಿ ನೋಡಿರಿ (ಕರ್ನಾಟಕ ಗೆಜೆಟೀರ್, ದ.ಕ. ಪು. 564-565).

18 ಕೆಳದಿ ಇತಿಹಾಸ ಸಂಶೋಧನಾಲಯದಲ್ಲಿ ಈ ಕುರಿತು ತಾಮ್ರ ಶಾಸನವೊಂದು ಇದೆ.

19 Severine da Silva : History of Christianity in Canara.

20 ಕ್ರೈಸ್ತ ಇತಿಹಾಸಕಾರ ಸಿಲ್ವಾ, ಆಶ್ರಯವಿತ್ತ ಕೆಳದಿ ಅರಸರನ್ನು ಕ್ರೈಸ್ತರು ಯಾವಾಗಲೂ ಕೃತಜ್ಞತೆಯಿಂದ ಸ್ಮರಿಸುತ್ತಿರಬೇಕೆಂದು ತಿಳಿಸಿದ್ದು, ಇಂತಹ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಆಕರಗಳು ನನ್ನ ಸಂಶೋಧನಾ ಸಮೀಕ್ಷೆಯಲ್ಲಿ ಇಗರ್ಜಿಗಳಲ್ಲಿರುವುದು ತಿಳಿದುಬಂದಿದೆ.

21 ಪೋರ್ಚುಗೀಸ್, ಡಚ್, ಇಂಗ್ಲಿಷ್ ಆಕರಗಳು ಅಪಾರವಿದ್ದು ಸಂಶೋಧನೆಗೆ ವಿಪುಲ ಅವಕಾಶಗಳಿವೆ.

22 ಡಾ. ವಸಂತ ಮಾಧವರ ಲೇಖನ, 'ಸುದರ್ಶನ', 1977 ಪು. 108.

23 National institute of Oceanography ಯಲ್ಲಿ ಹಡಗು ಸಂಶೋಧನೆಯಲ್ಲಿ ಕೆಳದಿ ಇತಿಹಾಸದ ಆಕರಗಳೂ ಇರುವುದಾಗಿ ಪುರಾತತ್ವಜ್ಞ ಡಾ. ಎಸ್. ಆರ್. ರಾವ್ ಹೇಳಿದ್ದಾರೆ.

24 Paper document quoted by Silva in his book History of Christianity in Canara ii, P. 14, PIHRE 1929, pp 36, 40.

ಅನುಬಂಧ

ಪಡುಗಡಲದಲ್ಲಿ ಕೆಳದಿ ಅರಸರ ನಿರ್ಮಿತ ಕೋಟೆಗಳ ಸೂಚಿ

ನಂ.	ಕಾಲ ಕ್ರಿ.ಶ.	ಅರಸ	ಕೋಟೆಗಳು	ಆಕರ ಗ್ರಂಥ
1	1583–1630	ಹಿರಿಯ ವೆಂಕಟಪ್ಪ ನಾಯಕ	ಬಾರ್ಕೂರು, ಕಲ್ಯಾಣಪುರ, ಮಲ್ಲಿಕಾರ್ಜುನಗಿರಿ, ಕಂಡ್ಲೂರು, (ಕಂಬೋಳಿಯಮ್), ಬೆಳ್ಳಾರೆ, ಹೊಸಂಗಡಿ, ಬಗ್ಗವಾಡಿ, ಚಿನ್ನಬಿದರೂರು	ಕೆ.ನೃವಿ., ಆV ದ. ಕ. ಜಿ. ಪ್ರಾ. ಇ. ಪು. 356, 405, 349.
2	1608	—,,—	ಕಾರ್ಕಳ, ಮೂಲಿಕೆ, ಕೊಡೆಯಾಲ, ಮೂಡಬಿದರೆ, ಉಳ್ಳಾಲ, ಮಂಜೇಶ್ವರ, ಕುಂಬಳೆ, ಕಾಸರಗೋಡು, ಚಂದ್ರಗಿರಿ, ಪಣಿಯೂಲ, ಕುಂಡಂಕುಯಿ, ಬಂದ್ಯಡ್ಕ, ಕಾಂತಮಂಗಲ, ಮೂಡುಕೊಡೆಯಾಲ, (ಬೆಳ್ಳಾರೆ ಹತ್ತಿರ). ಶಿಶಿಲ, ಪುದುಬೆಟ್ಟು, ಕೊಲ್ಲೂರುಬಾಚಿ, ಕಿದುಟು, ಸೀಮಂತೂರು	ಅದೇ, 191, 192 Heras : Aravidu Dynasty, I pp 416, 417, 427, Sewel : List of Antiquities I South Canara Manual Vol II Asia Portuguesa II Pyard de Laval Travels I Yule : Cathay III Pietro Della Valle Travels.

1	2	3	4	5
3	1652	ಶಿವಪ್ಪ ನಾಯಕ	ಬಸ್ರೂರು (Barcelore) ಕುಂದಾಪುರ, ಗಂಗೊಳ್ಳಿ, ಮಂಗಳೂರು	ಅದೇ VII ಅದೇ 356 Asia Portuguese II
4	1742–43	ಇಮ್ಮಡಿ ಬಸಪ್ಪ ನಾಯಕ	ಮಲ್ಪೆ, ದರಿಯಾಬಾದಿನ ಗಡ, ತೋನಸೆ, ಬೆಣ್ಣೆಗೆರೆ, ಕಾಪಿನ ಮನೋಹರ ಗಡ, ಮಲ್ಲಾರಿ, ಕುಂದಾಪುರ, ಮಂಗಳೂರು. ತೊಳಹಾರ ಅರಸನಿಗೆ ಅರಮನೆ ಸಹ ಕಟ್ಟಿಸಿಕೊಟ್ಟನು.	ಅದೇ XI ಅದೇ 204, 418
5	1729–30 1737	ಸೋಮಶೇಖರ ನಾಯಕ	ಕಾಂಞಂ ನಾಡು ಗ್ರಾಮ	ದ. ಕ. ಪ್ರಾ. ಇ.ಪು. 380

ವಿ. ಸೂ : ಇದು ಅಪೂರ್ಣ ಪಟ್ಟಿ

ಅನುಬಂಧ

Logan : A Collection pt I, XXX pp 33-34

"That from the fort of Madday Westward, to urbelly southward and to the hills, eastward with all the territories, northward, boarding on the river, I resign to the king of Bednur (KELADI), to be enjoyed by him accordingly, as I am to do with what remains to the southward".

ಕನ್ನಡ ಸಾರಾಂಶ

ಮಾಡಾಯಿ ಕೋಟೆಯಿಂದ ಪಶ್ಚಿಮಕ್ಕೆ ಊರಬಳ್ಳಿವರೆಗೆ ದಕ್ಷಿಣಕ್ಕೆ, ಪೂರ್ವಕ್ಕೆ ತಳಿಪರಂಬಾ ನದಿ ಹೇಗೆ ಗುಡ್ಡದಿಂದ ಹರಿದು ಬಂದದೋ ಅಲ್ಲಿಯವರೆಗೆ ಇರುವ ರಾಜ್ಯ ಬಿದನೂರಿಗೆ (ಕೆಳದಿಗೆ) ಸೇರತಕ್ಕದ್ದು. ಇದರ ದಕ್ಷಿಣಕ್ಕೆ ಬಾಕಿ ಉಳಿದ ರಾಜ್ಯವು ಕೋಲತ್ತರಸನಿಗೆ ಇರತಕ್ಕದ್ದು. ಇಬ್ಬರಲ್ಲಿ ಯಾರೊಬ್ಬರೂ ಒಬ್ಬನ ರಾಜ್ಯದಲ್ಲಿ ಇನ್ನೊಬ್ಬನು ಕೈಹಾಕಕೂಡದು. ಇದಕ್ಕೆ ಆಧಾರವಾಗಿ ನಾನು ತಲಚೇರಿಯ ಇಂಗ್ಲೀಷ್ ಅಧಿಕಾರಿ ಮತ್ತು ಕೌನ್ಸಿಲಿನ ಮುಂದೆ ಈ ಕರಾರನ್ನು ಒಪ್ಪಿಸಿದ್ದೇನೆ.

ದಸ್ಕತು–ಸೂರಪಯ್ಯ
(ಕೆಳದಿ) ಸೈನ್ಯದ ಜನರಲ್.

ಕೇರಳ ಸರಕಾರದ ಶ್ರೀ ಸಿ. ವಾಸುದೇವನ್ ಐ.ಎ.ಎಸ್. (ಕಾರ್ಯದರ್ಶಿಗಳು) ರವರು ಇಂತಹ ಆಕರಗಳನ್ನು ನನಗೆ ದೊರಕಿಸಿಕೊಟ್ಟುದಕ್ಕಾಗಿ ಕೃತಜ್ಞತೆಗಳು. ಮೇಲ್ಕಂಡ ಈ ಕರಾರಿನಲ್ಲಿ ಕೆಳದಿ ಅರಸ ಸೋಮಶೇಖರ ನಾಯಕನ ದಸ್ಕಾತು ಮೊಹರಾಗಿ ತಲಚೇರಿಯಲ್ಲಿರುವ ಇಂಗ್ಲೀಷ್ ಅಧಿಕಾರಿಗಳಲ್ಲಿ ಒಬ್ಬನಾದ ವಿಲಿಯಂ ಜೇಸಪನ ಹತ್ತಿರ ದಿ. 26–2–1739 (–40) ರಂದು ಕೊಡಲ್ಪಟ್ಟಿತು. ಆ ಕಾಲದಲ್ಲಿಯೇ ಆಗಿರುವ ಒಪ್ಪಂದದ ಮೇರೆಗೆ ಕರ್ನಾಟಕ–ಕೇರಳ ಗಡಿಯನ್ನು ನಿರ್ಧರಿಸಿ ಕಾಸರಗೋಡು ಕಣ್ಣಾನೂರು ಪ್ರದೇಶಗಳನ್ನು ಕನ್ನಡಾಂಬೆಗೆ ಕೆಳದಿ ಅರಸರೇ ದೊರಕಿಸಿಕೊಟ್ಟಿರುವುದು ಹೆಮ್ಮೆಯ ಸಂಗತಿಯಲ್ಲವೇ : ಇದಕ್ಕನುಸಾರ ವಾಗಿ ನಮ್ಮ ಪ್ರದೇಶಗಳನ್ನು ನಮ್ಮದಾಗಿಸಿಕೊಳ್ಳಲು ಕೆಳದಿ ಅರಸರೇ ತಳಹದಿ

ಹಾಕಿಕೊಟ್ಟಿದ್ದರಿಂದ ಕನ್ನಡ ಜನತೆ ಕೆಳದಿ ರಾಜ್ಯಕ್ಕೆ ಹಾಗೂ ಈ ಇತಿಹಾಸಕ್ಕೆ ಕೃತಜ್ಞರಾಗಿರಬೇಕೆಂಬುದನ್ನು ಮರೆಯಬಾರದು.

ಮಹಾಜನ ವರದಿಯ ಬೇಗುದಿಯಲ್ಲಿ ಕನ್ನಡ ಮಕ್ಕಳು ಅನ್ಯಭೂಮಿಯಲ್ಲಿ ಬಾಳನ್ನು ಸವೆಸಿ ತನ್ನತನವನ್ನು ಕಳೆಯುವುದಕ್ಕಿಂತ ಇತಿಹಾಸವನ್ನು ಈ ಕೆಳಗಿನ ಗಾದೆಯಂತೆ ಸ್ಮರಿಸಿಕೊಂಡು ಈಗಲಾದರೂ ಎಚ್ಚೆತ್ತುಕೊಳ್ಳುವರೇ ?

"Study the Past
Live in the Present
Work for the future"

ಕನ್ನಡ ನವೋದಯ ನಾಟಕಗಳು : (ಟಿಪ್ಪಣಿಗಳು)

ಕ. ವೆಂ. ರಾಜಗೋಪಾಲ

ಪ್ರವೇಶ: ಕನ್ನಡ ನಾಟಕವನ್ನು ಕುರಿತು ಈ ವೇಳೆಗೆ ಹಲವರು ವಿದ್ವಾಂಸರು ಪ್ರಸಿದ್ಧರಾಗಿದ್ದಾರೆ. ಅವರ ಬರಹಗಳು ಸಾಕಷ್ಟು ಪ್ರಕಟವಾಗಿ ಜನಪ್ರಿಯವಾಗಿವೆ. ಆದುದರಿಂದ ಈಗ ಕೆಲವು ಟಿಪ್ಪಣಿಗಳನ್ನು ಬರೆಯುತ್ತಿದ್ದೇನೆ.

1. **ನಾಟಕವು** ನಟನಿಂದಾಗಿ (ರಂಗಭೂಮಿಯ) ಪ್ರಯೋಗವಾಗುತ್ತದೆಯಲ್ಲದೆ ಜೀವಂತವಾಗುತ್ತದೆ. ನಟನಲ್ಲಿ ನಾಟಕವು ಅಭಿವ್ಯಕ್ತವಾಗುವುದರಿಂದ ರಂಗಭೂಮಿಯ 'ಪ್ರೇಕ್ಷಕ'ರು ಅದರ ಗುರಿಯಾಗುತ್ತಾರೆ.

ಕಾಳಿದಾಸನ ಮಾತು 'ನಾಟ್ಯಂ ಭಿನ್ನರುಚೈರ್ಜನಸ್ಯ ಬಹುದಾಪ್ಯೇಕಂಸಮಾರಾಧನಂ' ಎನ್ನುವುದನ್ನು ಮರೆಯಬಾರದು. ನಟನು ಕೂಡ ನಾಟಕಕಾರನಿಗೆ ಋಣಿಯಾಗಿರುತ್ತಾನೆ. ಆದರೆ ತನ್ನ ಜನ-ಬದುಕು-ಸಂಸ್ಕಾರಗಳಿಗೆ ಹೊಣೆಗಾರನಾಗಿರುತ್ತಾನೆ. ವಿಮರ್ಶೆಯಲ್ಲಿ ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡಿರಬೇಕಾದುದು ಒಂದು ಸಾಮಾಜಿಕ ಹೊಣೆಗಾರಿಕೆ. Drama is a social product and so an art form.

2. ನವೋದಯ ನಾಟಕವನ್ನು ಪರಿಶೀಲಿಸಲು ಅನುಕೂಲವಾಗುವಂತೆ ಅದರ ಕಾಲವನ್ನು ಸ್ವಾತಂತ್ರ್ಯೋದಯದವರೆಗೆಂದು ಗುರುತಿಸಲಾಗಿದೆ. ಇದರಲ್ಲಿಯೂ ಮೂರ ಹಂತಗಳನ್ನು ಕಾಣಬಹುದು. 1900ರ ಹಿನ್ನೆಲೆಯಲ್ಲಿ ಉದಯವಾದರೂ 1919-20 ರವರೆಗೆ ನಾಟಕದ ಪ್ರಾಯೋಗಿಕ ಸಮಯವಾದರೆ-ಎರಡನೆಯದಾಗಿ 1920 ರಿಂದ 1930 ರವರೆಗೆ ನಂತರದ ಮೂರನೆಯ ಫಲದಾಯಕ ಸ್ತರವಾಗಿದೆ.

ಈ ಮೂರು ಹಂತಗಳಿಗೆ ಕನ್ನಡ ನಾಟಕದಲ್ಲಿ ಹೊಸಗನ್ನಡವು ಬಳಕೆಯಾದ ಅನುವಾದಗಳ ಕಾಲ. ಇದರಲ್ಲಿ ಪ್ರೇರಣೆಗಳೂ ಮತ್ತು ರಂಗಭೂಮಿಯೂ ಕಂಡುಕೊಂಡ 'ಜಾಡು' ಮುಖ್ಯ. ಈ ಸಮಯದಲ್ಲಿ ಆಂಗ್ಲಭಾಷೆಯ ಅಧ್ಯಯನ ಮತ್ತು ಒತ್ತಡಗಳು – ಇವುಗಳನ್ನು ಹಲವಾರು ವಿದ್ವಾಂಸರು ಗಮನಿಸಿ, ವಿವೇಚಿಸಿದ್ದಾರೆ. ಆದುದರಿಂದ ಒಂದು ಆಂಗ್ಲ ಸಾಹಿತ್ಯದಿಂದ ಕನ್ನಡ ನಾಟಕವು ಹುಟ್ಟಿ ಸಾಹಿತ್ಯಕವಾಗಿ ಅಭಿವೃದ್ಧಿಯನ್ನು ಕಂಡಿತು ಎಂಬುದು. ಆಂಗ್ಲ ಸಾಹಿತ್ಯದ ಮತ್ತು ಸಂಸ್ಕೃತಿಯ

ಪ್ರಭಾವಗಳಿಗೆ ನಮ್ಮ ಪೂರ್ವಿಕರು ನೇರವಾಗಿ ಗುರಿಯಾದುದಲ್ಲದೆ ಮೇಲುವರ್ಗವು ವಿದ್ಯಾವಂತಿಕೆಗಾಗಿಯೇ ಪ್ರಭಾವವನ್ನು ಸ್ವೀಕರಿಸಿದೆ. ಇದರಿಂದಾಗಿ ನಮ್ಮ ಸಾಹಿತ್ಯದ ಎಲ್ಲಾ ಪ್ರಕಾರಗಳೂ ಹೊಸ ಹೊಸ ರೂಪ ತಾಳಿವೆ, ಪ್ರಸಿದ್ಧವೂ ಆಗಿವೆ. ಜನಸಾಮಾನ್ಯರ ಬದುಕನ್ನೂ ತಟ್ಟಿವೆ. ಇದರಿಂದ ಸಾಕಷ್ಟು ದೂರವಾಗುವುದಕ್ಕೆ ನಾವೀಗಲೂ ಹೆಣಗುತ್ತಿದ್ದೇವೆ. ಕನ್ನಡ ಭಾಷೆಗೆ 'ಒತ್ತು' ಬಂದಿರುವುದು ಹೀಗೆ ಸಾರ್ಥಕವೆನ್ನಿಸಿದರೂ ಆಗಿರುವ ಪ್ರಭಾವವು ರಕ್ತಗತವಾಗಿ 'ನಮ್ಮತನ'ವು ಇನ್ನೂ ಗಟ್ಟಿಯಾಗಬೇಕಾಗಿದೆ.

ಟಿಪ್ಪಣಿ ಎರಡು

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಶ್ಚಿಮಾತ್ಯ ಪ್ರಭಾವವು ಒತ್ತಾಯವಾದಂತೆ ಭಾಷೆಯ ಅಭಿಮಾನದಿಂದ ಹಿಡಿದು ಅಧ್ಯಯನವು ಮುಖ್ಯವಾದಂತೆ ಒಂದು ಕೃತಕವಾದ ವರ್ಗವು ನಿರ್ಮಾಣವಾಗತೊಡಗಿತಷ್ಟೆ. ನಮ್ಮ ಸಂಸ್ಕೃತಿಯ ಮತ್ತು ಸಂಸ್ಕಾರಗಳ ಪುನರ್ವಿಮರ್ಶೆಯು ಪ್ರಾರಂಭವಾದುದು ಹೀಗೆ- ಇಂಗ್ಲಿಷ್ ಭಾಷೆಯ ಪರದೇಶಗಳಲ್ಲಿ ನಾಟಕವು ರಂಗಭೂಮಿಯಾಗಿಯೇ ಅಭಿವೃದ್ಧಿಯಾಗುತ್ತಿದ್ದು Opera ಎಂಬ ಸಂಗೀತ (.) ಬಗೆಯು ರಂಗಭೂಮಿಯಾಗಿದ್ದು ನಮ್ಮ ವಿದ್ವಾಂಸರನ್ನೂ ಆಕರ್ಷಿಸಿತ್ತು. ಅಂಥ 'ಬಗೆಗಳು' ನಮಗೆ ಬೇಕಾದಾಗ ಅನುಕರಣೆ ಮತ್ತು ಅನುವಾದಗಳು ಮುಖ್ಯವಾದುವು. ಇಲ್ಲಿ ರಂಗಪ್ರಯೋಗಗಳು, ಅನುಕರಣೆಯಂತೆ ಬಂದರೂ ನಮ್ಮ ಅಥವಾ ನಾವು ನಟರಾದವರು. ಅಭಿನಯಿಸುವವರೂ ಆಗಿರುವುದು ಅನಿವಾರ್ಯ, ನಮ್ಮ ಈವರೆಗಿನ ಸಂಂಸ್ಕೃತಿಯೂ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡೂ ಅತ್ಯವಶ್ಯ ಮಾಧ್ಯಮಗಳೇ ಆಗಿದ್ದುವು. ಆದುದರಿಂದ ಸಂಸ್ಕೃತದ ನಾಟಕಗಳ ಅನುವಾದ ಮೊದಲಾಯಿತು. ಅದರಲ್ಲೂ ಶಾಕುಂತಲದ ಅನುವಾದ–

1. ಉತ್ತರ ಕರ್ನಾಟಕವು ಮರಾಠಿಯ ಪ್ರಭಾವದಲ್ಲಿದ್ದುದರಿಂದ ಚುರಮುರಿಯವರ 'ಶಾಕುಂತಲ ನಾಟಕ' 1869 ರಲ್ಲಿ ರಚಿತವಾಗಿದೆ. ಇದು ನೇರ ಅನುವಾದವಾಗಿರದೆ ಜಾನಪದಕ್ಕೆ ವಾಲಿದ ರಚನೆ. "ಜಾನಪದ ಸಂಸ್ಕಾರ"ದಿಂದ 'ಖಚಿತವಾಗಿ'ರುವುದಲ್ಲದೆ ನಾಟಕ ಸನ್ನಿವೇಶಗಳಿಗೆ (ಹೀಗೆ) ಜಾನಪದ ಸ್ವರೂಪವನ್ನು ತಂದುಕೊಡುವಲ್ಲಿ ಎಲ್ಲ ಗೀತೆಗಳೂ ಸಮರ್ಥವಾಗಿವೆ"- ಎಂದು ಕೀರ್ತಿನಾಥ ಕುರ್ತಕೋಟಿಯವರು ಬರೆದಿದ್ದಾರೆ. ಆದರೂ ಇದರ ಅನುವಾದದ ಬಗೆಯಲ್ಲಿ ಅವರ ಅಸಮಾಧಾನವೂ ಖಚಿತವಾಗಿದೆ. ಇದಕ್ಕವರು ಬೇಂದ್ರೆಯವರ 'ಮೇಘದೂತ'ವನ್ನು ಉದಾಹರಿಸಿದ್ದಾರೆ.

ಚುರಮುರಿಯವರ ಅನುವಾದವು ರಂಗಭೂಮಿಯ ಪ್ರಯೋಗಕ್ಕಾಗಿಯೇ ಹೊರತು ಭಾಷಾಭಿಜ್ಞತೆಯನ್ನು ಮೆರೆಯುವುದಕ್ಕೆ ಸೀಮಿತವಲ್ಲ ಎಂಬುದನ್ನು ಅವರ

ಮಾತುಗಳಿಂದಲೇ ಅರಿಯಬಹುದಾಗಿದೆ. ಇದನ್ನೇ ರಂಗಭೂಮಿಯ ಧೋರಣೆ ಎಂದು ಗುರುತಿಸಬೇಕಾಗಿದೆ.

ಎರಡನೆಯ ಅನುವಾದವು ಮೈಸೂರಿನ ಅರಮನೆಯ ರಂಗಭೂಮಿಗಾಗಿ ಬಸಪ್ಪ ಶಾಸ್ತ್ರಿಗಳು ಮಾಡಿದುದು-ವಿದ್ವಾಂಸರಿಂದ ಹೊಗಳಿಸಿಕೊಂಡಿದೆಯಷ್ಟೆ. ಇದರಲ್ಲಿ ಅನಸೂಯ ಮತ್ತು ಪ್ರಿಯಂವದೆಯರ ಪಾತ್ರಗಳು ಮೂಲದಿಂದ ಅದಲು-ಬದಲಾದಂತಿರುವುದು (ಇದನ್ನು ರಂಗಪ್ರಯೋಗದಲ್ಲಿ ಕೂಡ ದೋಷವೆನ್ನಲಾಗುವುದಿಲ್ಲ). ಆದರೆ ರಂಗಪ್ರಯೋಗಕ್ಕೆ ನಾಟಕಕಾರರೇ ವೃತ್ತಗಳನ್ನು ಗೀತಗಳನ್ನಾಗಿಸಿ ಒದಗಿಸಿದ್ದಾರೆ–ಏಕೆಂದರೆ ಮುಂಬಯಿಯಿಂದ ಬಂದು ಬೆಂಗಳೂರಿನಲ್ಲಿ ಪ್ರದರ್ಶನವಾದ 'ಇಂದ್ರಸಭಾ' ಎಂಬ ಶುದ್ಧ Opera ಆಧಾರವಾಗಿದೆ. ಕೆಲವು ರಾಗಗಳಲ್ಲಿ ಇಂದ್ರಸಭಾದ ಡ್ಯೂಯೆಟ್‌ಗಳು ಮತ್ತು ಪಾರ್ಸೀರಾಗದ ಅನುಕರಣೆ ಕೂಡ ಕಂಡುಬರುತ್ತದೆ.

ಇದರ ಪ್ರಯೋಗವು ಮೈಸೂರಿನ ಅರಮನೆಯ ರಂಗದ ತೊಟ್ಟಿಯಲ್ಲಿ ಮೊದಲು 'ನಾಟಕವನ್ನು ಐದು ಘಂಟೆಗಳ ಕಾಲದಲ್ಲಿ ಆಡುವುದಕ್ಕೆ ಅನುಕೂಲವಾಗಿಯೂ ನಾಟಕ ಸಂವಿಧಾನ ಕೆಡದಂತೆಯೂ ಕೆಲವು ವರ್ಣನಾಂಶವನ್ನು ಬಿಟ್ಟು-ಗಾನಯೋಗ್ಯಗಳಾದ ಪದಗಳಿಂದ ಕೂಡಿ ಪಂಡಿತ ಪಾಮರ ರಂಜಕವಾಗಿರುವಂತೆ ಕರ್ಣಾಟಕ ಭಾಷೆಯಲ್ಲಿ ಸಂಕ್ಷೇಪವಾಗಿ ರಚಿಸಿದರು' ಎಂದು ಬಿ. ಮಲ್ಲಪ್ಪನವರು ಬರೆದಿರುತ್ತಾರೆ – 1883. (ಅಜ್ಜಾದುದು) ಇದರ ಪ್ರಯೋಗದಿಂದ ನಮ್ಮ 'ಸಂಗೀತ ನಾಟಕ'ವು ರೂಪತಾಳಿತು.

ಮೇಲಿನ ಎರಡೂ ಅನುವಾದಗಳು ರಂಗಭೂಮಿಗಾಗಿ ರೂಪಾಂತರವಾದಂಥವೇ ಆಗಿವೆ.

2. ಇಂದ್ರಸಭಾ ನಾಟಕದ ಅನುವಾದಗಳು ಹಿಂದಿಯಿಂದ ಮರಾಠಿ (?) ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಿಗೆ ಆಗಿವೆ. ಕನ್ನಡದಲ್ಲಿ ಹತ್ತಾರು ಬಗೆಗಳೂ ಇವೆ. ಆದರೂ ಅವರ ರಂಗಪ್ರಯೋಗ ಮಾತ್ರ ಸಂಗೀತ ನಾಟಕವು 'ಕಂಪನಿ'ಗಳಾಗಿವೆ. (ಉತ್ತರ ಕರ್ನಾಟಕದಲ್ಲಿ) ಸಾಮಾನ್ಯವಾಗಿ 'ನಾಟಕ ಮಂಡಳಿ' ಗಳೆಂದು ಕರೆಯಲಾಗಿವೆ. ಬೆಂಗಳೂರು-ಮೈಸೂರು ಭಾಗಗಳಲ್ಲಿ (ಹಳೆಯ ಮೈಸೂರು) ನಾಟಕ ಕಂಪನಿಗಳಾಗಿವೆ. ಉದಾ. 'ಗುಬ್ಬಿ ಕಂಪನಿ'. 'ಇಂದ್ರ ಸಭಾ' ಅನುವಾದದಲ್ಲಿ 'ಜಾವಳಿ'ಗಳೇ ತುಂಬಿಹೋಗಿವೆ. ಇವು ಶೃಂಗಾರ ಗೀತೆಗಳಿಗೆ ಹೇಳಿದ 'ಹೆಸರು'–ವಿಪ್ರಲಂಭ ಶೃಂಗಾರಕ್ಕೆ ಹೆಸರಿತ್ತಿದುದೂ ಆಗಿದೆ. ಇನ್ನೊಂದು ಹಾಡಿನ ಬಗೆಯೆಂದರೆ 'ಕಂದ'ಗಳು (ದಿ. ವರದಾಚಾರ್ಯರು ಇದಕ್ಕೆ ಪ್ರಸಿದ್ಧರು. ನೋಡಿ ವೀ.ಸಿ.ಯವರ ಲೇಖಗಳು).

ಅನುವಾದವು ಮಾತಿನ ಧಾಟಿಗೆ ಹತ್ತಿರವೆನ್ನಬಹುದಾದ 'ಗದ್ಯ'ವಾಗಿದೆಯಷ್ಟೆ– ಸಂಗೀತದ ಪ್ರಾಧಾನ್ಯತೆಯು ಸಂಭಾಷಣೆಯನ್ನೂ 'ಸ್ಟೈಲೈಸ್'ಗೊಳಿಸಿದೆ.

ಇಂಥ ಪ್ರಯೋಗಗಳನ್ನು ಅನುಸರಿಸಿದಂತೆ ಸಿದ್ಧವಾದ ಅನುವಾದಗಳು, ರೂಪಾಂತರಗಳು, ಮತ್ತು ಸ್ವತಂತ್ರ್ಯ ಕೃತಿಗಳನ್ನು ಗುರುತಿಸಬಹುದು'. ಈ ವಿಷಯ ದಲ್ಲಿ ಬಹಳಷ್ಟು ನಷ್ಟವಾಗಿರುವುದರಿಂದ ಕೆಲವನ್ನು ಮಾತ್ರ ಗುರುತಿಸಬಹುದು—

ಇಂದ್ರಸಭಾ-ಸಂಪ್ರದಾಯಕ್ಕೆ ಸೇರಿದಂತೆ, ಬೆಂಗಳೂರಿನಲ್ಲಿ 'ಉಪ ರಂಗ ಭೂಮಿ'ಯೊಂದು ಮೊದಲಾಗಿ 'ಶಾಕುಂತಲ'ವನ್ನೂ ಕಿರಿದಾಗಿ ರಚಿಸಲು ಆಧಾರ ವಾಗಿದೆ (ಡಿ. ಶಾಮರಾಯರೆಂಬವರು ಇದನ್ನೂ ಮಾಡಿದ್ದಾರೆ). ಇವುಗಳೆಲ್ಲವೂ 'ಪೌರಾಣಿಕ' ಕಥಾನಕಗಳನ್ನು ಬಳಕೆಗೆ ತಂದವಾಗಿವೆ. ಗುಬ್ಬಿ ಕಂಪನಿಯಲ್ಲಿ ಪಾರ್ಸೀ ಕಂಪನಿಯ 'ಗುಲೇಬಕಾವಲಿ'ಯೂ ನಾಟಕ ರೂಪ ತಾಳಿದೆ. ಆದರೂ 'ಸಾಮಾ ಜಿಕ'ವೆನ್ನಬಹುದಾದವು ಇರಲಿಲ್ಲ. ಅದು 'ಕೈಲಾಸಂ'ರವರಿಗಾಗಿ 1918ರ ವರೆಗೂ ಕಾಯಬೇಕಾಯಿತಷ್ಟೆ—

ಆದರೂ ಶುದ್ಧ ಸಾಮಾಜಿಕವೆನ್ನಬಹುದಾದ ಒಂದು ನಾಟಕ-ಪ್ರಜಾಪಕಾರಿ ಕಂಪನಿಗಳ ನಾಟಕ'–ಎಂಬ ವಿಡಂಬನಾತ್ಮಕ ಕೃತಿಯು 1981ರಲ್ಲಿ ಬೆಂಗಳೂರಿನಲ್ಲಿ ಅಚ್ಚಾಗಿದೆ. ಐದು ಅಂಕಗಳ ಈ ನಾಟಕವು ರಚನೆಯಲ್ಲಿ ಇಂದ್ರಸಭಾದಂತೆ ಇದೆ. ಹಾಡುಗಳು ಮುಖ್ಯವಾಗಿ 'ಶೃಂಗಾರ-ಹಾಸ್ಯ' ಕೂಡಿದಂತೆ ಮೋಸ ಮಾಡುವ 'ಬ್ಯಾಂಕಿಂಗ್ ಸಂಸ್ಥೆ'ಯನ್ನು ಬೆರಳು ಮಾಡಿ ತೋರಿಸುವಂತೆ ಇವೆ. ಇದರ ಪಾತ್ರ ಗಳಲ್ಲಿ ಬ್ರಾಹ್ಮಣರು, ವೈಶ್ಯರು, ಸಾಮಾನ್ಯ ವರ್ಗದ ಸ್ತ್ರೀ ಪುರುಷರು ಬರುತ್ತಾರೆ. ಇದನ್ನು ರಚಿಸಿದವರು. ಸಾಮಾನ್ಯ ಪಾತ್ರಗಳಿಗಾಗಿ ಪ್ರಾದೇಶಿಕವಾದ ಬಳಕೆಯ 'ತೆಲುಗು' ಭಾಷೆಯನ್ನೂ ಬಳಸಿದ್ದಾರೆ (ಕೆಲವು ಹಾಡುಗಳೂ ಇವೆ). ರಾಗದ ಮಟ್ಟುಗಳಾಗಿ ಶಾಕುಂತಲ ಮೊದಲಾದ ಕಂಪನಿ ನಾಟಗಳಿಂದ ಆಯ್ದುಕೊಳ್ಳಲಾಗಿದೆ.

ಪ್ರಜಾಪಕಾರ ಕಂಪನಿಗಳ ನಾಟಕಂ-ಇದನ್ನು ಚಿಕ್ಕಬಳ್ಳಾಪುರದ ತಾಲ್ಲೋಕು ಪೆರೇಸಂದ್ರದ ಬ್ರಂ ॥ ಶ್ರೀ ॥ ಅಚ್ಚಪ್ಪನವರ ಕುಮಾರ ಸುಬ್ಬರಾಯರವರಿಂದ ಪ್ರಕೃತ ಕನ್ನಡ ಭಾಷೆಯಲ್ಲಿ ಸಕಲ ಜನರಿಗೂ ಸುಲಭವಾಗಿ ತಿಳಿಯುವಂತೆ ನೂತನ ವಾಗಿ ರಚಿಸಿದ್ದನ್ನ ತೂಬಿಗೆರೆ ಟಿ. ವೆಂಕಟೇಶಯ್ಯನಿಂದ ಪರಿಶೋಧಿಸಲ್ಪಟ್ಟು ಅದರ ವಿಶಿಷ್ಟ ಹಕ್ಕನ್ನು ಬೆಂಗಳೂರು ಬುಕ್ ಸೆಲರ್ ಚಿಕ್ಕಬಳ್ಳಾಪುರದ ಎಂ. ವೆಂಕಟ ರಾಮಯ್ಯನವರಿಗೆ ಕೊಡಲ್ಪಟ್ಟು ಡಿಜೋಯವರಿಂದ ಪ್ರಕಟಿಸಲ್ಪಟ್ಟಿತು. All Rights Reserved 1891. ಕ್ರಯ ೭ ಆಣೆ, ಟಪ್ಪಾಲು ಹಾಕಲು ೧ ಆಣೆ.

3. ಈಗ ಅನುವಾದದ ಪರಂಪರೆಗೆ ಸೇರಿದ ರಾಮವರ್ಮ-ಲೀಲಾವತಿ (ಷೇಕ್ಸ್ ಪಿಯರನ Romeo and Juliet) –ಇದನ್ನು ಎ. ಆನಂದರಾವ್- ಮೈಸೂರಿನ ಚೀಫ್ ಕೋರ್ಟಿನ ಅಡ್ವೊಕೇಟ್ ಮತ್ತು ಮುನಿಸಿಪಲ್ ಕಮಿಷನರು ಅವರು ಅನುವಾದ ಮಾಡಿದ್ದಾರೆ. ಸ್ವತಹ ಕನ್ನಡದಲ್ಲಿ ವಿಶೇಷ ಪ್ರಭುತ್ವವಿರದಿದ್ದ

ಕಾರಣ ಅರಮನೆಯ ವಿದ್ವಾಂಸರಾದ ಜಯರಾಮಾಚಾರ್ಯರ ನೆರವು ಪಡೆದಿರುವುದಾಗಿ ಹೇಳಿಕೊಂಡಿದ್ದಾರೆ. ಅದೂ ಅರಮನೆಯ ನಾಟಕ ಸಂಸ್ಥೆಗಾಗಿ. ಆದುದರಿಂದ ಶಾಕುಂತಲದ ನಂತರ ಇದೇ ಮೊದಲ (1884) ಮತ್ತು ಇಂಗ್ಲೀಷ್‌ನಿಂದ ಬಂದ ನಾಟಕವಾಗಿದೆ. ಅರಮನೆಯ ಕಂಪನಿಯಲ್ಲಿದ್ದ ಮಂಡ್ಯಂ ರಂಗಾಚಾರ್ಯರು ಇದರ ಸಿದ್ಧತೆಯನ್ನು ಮಾಡಿರಬಹುದು. ಈ ದುರಂತ ನಾಟಕವು ಅರಮನೆಯ ಪ್ರೇಕ್ಷಕರಿಗಾಗಿ ಮಂಗಳಾಂತವಾಗುತ್ತದೆ. ಅಂತ್ಯದಲ್ಲಿ ನಾರಾಯಣನು ಪ್ರತ್ಯಕ್ಷನಾಗಿ ಒಂದು ಕಂದ ವನ್ನು ಹಾಡುತ್ತಾನೆಯಷ್ಟೆ—

> ಈ ವನಿತೆಯ ಸಾಧ್ವೀತ್ವದ । ಭಾವಕೆ ನಾಂ ಮೆಚ್ಚುತೀಗಲಿವಳಿಗುಮಿವಳಾ ॥
> ಜೀವಿತ ಪತಿಗುಂ ಪುನರು । ಜ್ಜೀವನವಂ ಕರುಣಿಸಿರ್ಪೆನೇಳಿಸು ಬೇಗಂ ॥—

ನಂತರ ಸೂತ್ರಧಾರನು ಒಂದು ಭರತವಾಕ್ಯವನ್ನು ಹಾಡುತ್ತಾನೆ. ಅಲ್ಲದೆ ಮುಗಿತಾಯವು ಮತ್ತೊಂದು 'ಕಂದ' ಪದ್ಯದಿಂದ ಆಗುತ್ತದೆ.

> ಕಂದ ॥ ಅವರಿಸುತಿದಂ ಸುಜನಂ । ಮೋದದಿನಿವಲೋಕಿಪಂತೆ ದಯೆಯಿಂದೆ ವಿರಾ ॥
> ಟ್ಮ್ರೀದಯ ಹರಿ ಮಾಡುತೆವರ । ವೇದೇಡ್ಯಂ ಚಿತ್ರಚರಿತ ನೋವುಗೆ ಸತತಂ ॥

ಇದೇ ಅನುವಾದವು ಮುಂದಿನದಕ್ಕೆಲ್ಲ ತಳಪಾಯವಾಯಿತು. ಇದರ ಮಟ್ಟುಗಳು ಮುಂದಿನ ಎಲ್ಲಾ ಕಂಪನಿ ನಾಟಕಗಳಲ್ಲೂ ಕಾಣಿಸಿಕೊಂಡಿವೆ.

ಇದರ ಅನುವಾದದ ವೈಖರಿಯನ್ನು ಗುರುತಿಸುವಲ್ಲಿ ಆಶ್ಚರ್ಯವೂ ಆದೀತು. ಕನ್ನಡದ ಗದ್ಯದಲ್ಲಿ ವಾಕ್ಯರಚನೆಗಳು-ಸಂಭಾಷಣೆಗಳಾಗುವಲ್ಲಿ ನಟನಿಗೆ ತನ್ನ ಶೈಲಿಗಾಗಿ ಅವಕಾಶ ಮಾಡಿಕೊಟ್ಟಂತೆ ಆದೀತಷ್ಟೆ.

ಒಂದು ನಾಟಕದ ಸಂಪ್ರದಾಯವು ಯಾವುದೇ ಭಾಷೆಗಾಗಲಿ ಇಲ್ಲದಿರುವಾಗ ಅನುಕರಣೆಯು ಮುಖ್ಯವಾದೀತು. ಭಾಷೆಯ ಸೂಕ್ಷ್ಮಗಳಂತೂ ಕಾಣಿಸಲಾರವು.

ಉದಾ. ನೋಡಿ. ಪುಟ ೮೮.

ಲಲಿ – (ಒಳಗಿನಿಂದ) ಪುತ್ರಿಯೆ ಎದ್ದೆಯಾ ?

ಲೀ – ಯಾರು ನನ್ನನ್ನು ಕರೆಯುವರು ! ನನ್ನ ಮಾತೃವೋ ! ಇದುವರೆಗೆ ಮಲಗಲೇ ಇಲ್ಲವೋ ! ಅಥವಾ ಇಷ್ಟು ಬೇಗನೆ ಎದ್ದಳೋ ? ಯಾವ ಅತಿಶಯವಾದ ಕಾರಣವು, ಇಲ್ಲಿ ಬರುವಂತೆ ಮಾಡಿರುವುದು ?

(ಲಲಿತಾಂಗಿ ಪ್ರವೇಶಿಸುವಳು)

ಲಲಿ – ಲೀಲಾವತಿ ಇದೇನು ?

ಲೀ – ಪೂಜ್ಯಳೆ ನನಗೆ ಮೈಯಲ್ಲಿ ಸ್ವಾಸ್ಥ್ಯವಿಲ್ಲ. ಯಾವಾಗಲೂ ನಿನ್ನ ಸೋದರ ಮಾವನ ಮರಣವನ್ನು ಕುರಿತು ವ್ಯಾಕುಲಪಡುತ್ತಿರುವೆ. ನಿನ್ನ ನೇತ್ರೋದಕ ಪ್ರವಾಹದಿಂದ, ಅವನ ದೇಹವು ಕೊಚ್ಚಿಹೋಗುವಂತೆ ಮಾಡುವೆಯೋ ! ಹ್ಯಾಗಾದರು ಅವನು ಬದುಕಿ ಬರುವುದಿಲ್ಲ. ಆದ್ದರಿಂದ ಸಾಕು ಬಿಡು, ಸ್ವಲ್ಪ ದುಃಖವು ಪ್ರೀತಿಯನ್ನು ಸೂಚಿಸುವುದು, ಅತಿ ದುಃಖವು ಅವಜ್ಞತೆಯನ್ನು ಪ್ರದರ್ಶಿಸುವುದು.

ಲೀ. ಇಂಥಾ ನಷ್ಟಕ್ಕಾಗಿಯೇ ವ್ಯಸನ ಪಡುತ್ತಿರುವೆನು.

ಈ ಕೃತಿಯು ಪ್ರಯೋಗವಾದ ಮೇಲೆ ಅನುವಾದಕರಿಂದ ತಿದ್ದಲ್ಪಟ್ಟುದಾಗಿ 1889ರಲ್ಲಿ ಪ್ರಕಟವಾದಂತೆ ತಿಳಿದುಬರುತ್ತದೆ (Printed at the Government Branch Press). ಉತ್ತರ ಕರ್ನಾಟಕದ ನಾಟಕ ಪರಂಪರೆಗೆ, ಗುಂಡೋ ಕೃಷ್ಣಚುರಮುರಿಯವರು ಒಥೆಲೋ ನಾಟಕವನ್ನು 1885ರಲ್ಲಿ ಕೊಟ್ಟಿದ್ದಾರೆ. ಅದರ ಪ್ರಯೋಗವೂ ಆಗಿರುವುದೆಂದು ತಿಳಿದುಬರುತ್ತದೆ. ಇದೇ ಮೊದಲ ರೂಪಾಂತರ ನಾಟಕವೂ ಆದೀತು-ಆದರೆ ಮೂಲದ ದುರಂತವನ್ನು ಉಳಿಸಲಾಗಿದೆ.

4 ಅನುವಾದದಿಂದ ಸ್ವತಂತ್ರ ನಾಟಕವಾದ 'ವಿರಾಟಪರ್ವ ನಾಟಕವು' ಯಂ.ಜಿ. ತಮ್ಮಯ್ಯ ಶಾಸ್ತ್ರಿಗಳಿಂದ ರಚಿತವಾಗಿದೆ. ಇದನ್ನು ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭಾ ವ್ಯವಸ್ಥಾಪಕರೂ ಅಭಿನಯಕಾರರೂ ಆಗಿದ್ದವರು (ಇವರು) ರೂಪಿಸಿದ್ದಾರೆ. ಆದುದರಿಂದ ಮಟ್ಟುಗಳು ನೇರವಾಗಿ 'ಶಾಕುಂತಲ'ದಂತೆ ಇವೆ. ಇದರ ದ್ವಿತೀಯ ಮುದ್ರಣವು 1935ರಲ್ಲಿ ಆಗಿದ್ದರೂ ರಾಮವರ್ಮ ಲೀಲಾವತಿಯಂತೆ ಅರಮನೆಯಲ್ಲಿ ಪ್ರಯೋಗಗೊಂಡಿವೆ, ಕೀಚಕನು (ಒಂದು ಸಂದರ್ಭ) ದ್ರೌಪದಿಯನ್ನು ಕಂಡಾಗಿನದು.

—ಅಃ ಇದೊ ! ಆ ಸುಂದರಿಯು ಇಲ್ಲೇ ಬರುವಳು

(ಎದುರಾಗಿ ಬಂದು)

ರಾಗ-ಜಲಾಪ್ ಆದಿತಾಳ

ಪೋಗುವೆಯೆಲ್ಲಿಗೆ । ನಾಗವೇಣಿಯೆ ಮಿಗೆ /
ಪೊಗಣಿಯಾನು ಹಗೆ । ಯಾಗಿಹನೆನಗೆ ॥ ಪಲ್ಲವಿ ॥

ಸುಡುವುದು ಕಾಮನ ।ಜಡಜ ಬಾಣವದೆನ್ನ ।
ತಡೆಯಲಾರೆನು ಮನ । ಸಿಡು ನೀಂಮುನ್ನ ॥೧॥

ಮಾತುತನೆನ್ನನು । ಮಾಣುತ ನೀನು ।
ಚೀರುವರೇನು । ನೀರೆ ನಮಿಪೆನು ॥೨॥

ಸೈರಿಸಲಾರೆ । ನಾರಿಯೆ ಬಾರೆ ।
ಮೀರಿದ ಸುಖವನು । ತೋರುವ ನೀರೆ ॥೩॥

ದ್ರೌಪದಿ— ಅಯ್ಯೋ ಮುಂದೇನು ಗತಿ ! ಎಲೆ ನೀಚ! ದೂರದಲ್ಲಿ ನಿಲ್ಲು! ನನ್ನನ್ನು ಅಪೇಕ್ಷಿಸಿ ಸದ್ಗತಿಯನ್ನು ಹೋಗಲಾಡಿಸಿಕೊಂಡು ನಾಶವನ್ನು ಹೊಂದಬೇಡ (ಕೋಪದಿಂದ ಪೋಗುವಳು).

ಕೀಚಕ — (ಎದುರಾಗಿ ಬಂದು ಕೈಮುಗಿದು) ಎಲೇ ಮೋಹನಾಂಗಿಯೇ ! ಸತ್ಯವಾಗಿಯೂ—

ಕಂದ : ಮಾರ ಜ್ವರವಂ ಸೈಸೆನು ।
ನಾರಿಯೆ ನಿನ್ನಧರ ಸುಧೆಯು ನಿಪ್ಪೌಷಧಮಂ ।
ವೇರಿಸುದಯವಂತಾಳುತ ।
ಮಾರಿದೆ ನಿನಗೀಗಲೆನ್ನ ತನು ಮನ ಧನವಂ ॥೧॥

1. ಹೀಗೆ ಅಭಿನಯವು ಸಂಗೀತ ಪ್ರಧಾನವಾಗಿ ಮುಂದುವರಿಯುವುದು.

2. ಭಾವುಕತೆಗೆನ್ನುವಂತೆ 'ಕಂದ'ವನ್ನು ರಾಗಗಳಲ್ಲಿ-ಬೇಹಾನ್, ನಾದನಾಮ ಕ್ರಿಯೆ, ದೇಶಿಕಾಪಿ, ಕವಾಟ್, ದರ್ಬಾರು, ಮುಖಾರಿ, ಧನಾಸರಿ, ತೋಡಿ, ಜಲಾಷ್, ಬರಹರಪ್ರಿಯ, ಕಾಪಿ(ಮತ್ತೆರವಿಾಜ್)-ಕಾಂಬೋಡಿ, ಜಂಜೋಟಿ, ವರಾಳಿ (ಮತ್ತೆ ಜಂಜೋಟಿ), ಮತ್ತೆ ನಾದನಾಮ ಕ್ರಿಯೆ, ವಠಾಂಜಿ, (ಪತ್ರೆ ವಠಾಂಜಿ,) ವಸಂತ, ದೇಶಿ ಕಾಪಿ, ಅಸಾವೇರಿ, (ಕಂದಗಳು) ಪೀಲು, ಬರಹರಪ್ರಿಯ, ಶಂಕರಾಭರಣ, (ಮತ್ತೆ ಬರಹಪ್ರಿಯ-ಕಂದ) ತೋಡಿ, (ಕಂದ - ನಾದನಾಮ ಕ್ರಿಯೆ), ಹೀಗೆ ಎರಡು ಮುಗಿಯುವುದರಲ್ಲಿ ರಾಗಗಳು, ಕಂದಗಳು ಬಳಕೆಯಾಗಿ ಐದು ಅಂಕಗಳಾಗುತ್ತವೆ. ಮೂರನೆ ಅಂಕದಲ್ಲಿ 20 ಹಾಡುಗಳು – ನಾಲ್ಕರಲ್ಲಿ 20 ಹಾಡುಗಳು, ಐದರಲ್ಲಿ 25 ಭರತ ವಾಕ್ಯ ಮತ್ತು ಮಂಗಳ. ಒಟ್ಟು 113. ಇಲ್ಲಿ ಕಂದಗಳು ಶೃಂಗಾರಕ್ಕಾಗಿ ಕೀಚಕನಿಗೆ ವಿಾಸಲಾದಂತೆ ತೋರಬಹುದು. ಭರತವಾಕ್ಯವು ಕಂದ ಮತ್ತು ಮಂಗಳವು 'ದೇಸಿ-ಕಾಪಿ'ಯಿಂದ ಮುಗಿಯುತ್ತದೆ. ಒಟ್ಟು 113 ಹಾಡುಗಳಿರುವುದನ್ನು ಇಲ್ಲಿ ಗಮನಿಸ ಬಹುದು. ಇದರ ಮಟ್ಟುಗಳನ್ನು ಮುಂದಿನ ನಾಟಕಗಳಲ್ಲಿಯೂ ಕಾಣಬಹುದು.

ಆದುದರಿಂದ ಸಂಭಾಷಣೆಗಿಂತ ಸಂಗೀತವೇ ನಾಟಕದ ಸ್ವಾರಸ್ಯವನ್ನು ಹಿಡಿದಿರುವಂತೆ ಕಂಡು ಬರುತ್ತದೆ.

ಕಥಾ ಭಾಗವನ್ನು (ಕುಮಾರ ವ್ಯಾಸ :) ಭಾರತದಿಂದ ಆಯ್ದುಕೊಳ್ಳಲಾಗಿದೆ. ಎರಡು ಅಂಶಗಳಲ್ಲಿ ಕೀಚಕನ ವಧೆಯಾಗಿ ನಾಟಕವು ಮುಂದಿನ ಮೂರು ಅಂಕಗಳಲ್ಲಿ ಬೆಳೆಯುವುದರಿಂದ ಗೋಗ್ರಹಣದ ನಂತರ ಪಾಂಡವರು ವೇಷಾಂತರದಿಂದ ಹೊರಬಂದು ವಿರಾಟನಿ ಶರಣಾದಂತೆ ನಾಟಕವು ಮುಗಿಯುವುದು. ಆದುದರಿಂದ ಇದರ ಕಥಾನಕವು ಕೀಚಕನ ವಧೆಗೆ ನಿಲ್ಲದೆ (ಶೃಂಗಾರವೀರ ರಸಗಳಿಗೆ ಅವಕಾಶವಾಗಿ)

ಮುಂದುವರಿಯುವುದು. ಅಲ್ಲದೆ, ಮಂಗಳಾಂತದಲ್ಲಿ (ಒಂದು ಘಟ್ಟವಾಗಿ) ಭರತ ವಾಕ್ಯವನ್ನು ಕಾಣುವುದು.

5. ೧) ನವೋದಯ ನಾಟಕ ಪರಂಪರೆಗೆ ಇಂಥಾ ಅಂದರೆ ಸಂಗೀತ ಪ್ರಧಾನ ವಾದ ಅಭಿನಯುವನ್ನು ಗುರುತಿಸಬೇಕಾಗುತ್ತದೆ. ಸಂಗೀತವೇ ನಾಟಕದ ಸಂಭಾಷಣೆ ಯನ್ನು ಪ್ರಭಾವಿಸುವುದರಿಂದಾಗಿ ನಾಟಕದ ನಿಜವಾದ ಅನುಭವವನ್ನು ನಿಶ್ಚಯಿಸ ಲಾಗುವುದಿಲ್ಲ. ಅದಕ್ಕೆ ನಿಶ್ಚಿತ ವಿಶ್ವಾಸವಿಲ್ಲವೆಂದರೂ ಸರಿಯೆ.

೨. 'ವಿರಾಟಪರ್ವ'ದ ನಾಟಕಕಾರರಾದ ತಮ್ಮಯ್ಯಶಾಸ್ತ್ರಿಗಳ ಸುಧನ್ವ ಚರಿತ್ರೆ, ಬಬ್ರುವಾಹನ ಚರಿತ್ರೆ, ಗಿರಿಜಾ ಕಲ್ಯಾಣ, ಕಳಿಂಗದಾಸನ ಮದುವೆ (ಹಾಸ್ಯರಸ), ದ್ರೌಪದೀ ಸ್ವಯಂವರ, ಕಬೀರದಾಸ ಚರಿತ್ರೆ ಮುಂತಾದುವನ್ನೂ ಸುವಾಸಿನಿಯರು ಹೇಳುವ ಹಾಡುಗಳನ್ನೂ ರಚಿಸಿದ್ದಾರೆ (ಎ. ನಾರಾಣಪ್ಪ, ಕಾಳಮ್ಮನಗುಡಿ ಬೀದಿ, ಮೈಸೂರು).

೩. ಇವರ ನಾಟಕಗಳನ್ನು ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭಾ, ಶಾಕುಂತಲ ಕರ್ಣಾಟಕ ನಾಟಕ ಸಭಾ, ವರದಾಚಾರ್ಯರವರ ರತ್ನಾವಳಿ ಥಿಯೇಟರ್ಸ್ ಮತ್ತು ಗುಬ್ಬಿ ವೀರಣ್ಣನವರ ಕಂಪನಿ—ಇಂಥ ಪ್ರಸಿದ್ಧ ಸಂಸ್ಥೆಗಳಲ್ಲಿ ಪ್ರದರ್ಶನಕ್ಕೆ ಬಳಸಲಾಗಿದೆಯಂತೆ. ಆದುದರಿಂದ ಈ ನಾಟಕಕಾರರು ಕಂಪನಿ ನಾಟಕಗಳ ಮುಖ್ಯ ನಾಟಕಕಾರರೆಂದೇ ಪರಿಗಣಿಸಬಹುದು.

೪. ಇದರಲ್ಲಿ ಎರಡು ಅಂಕಗಳಲ್ಲಿ (ಪೂರ್ವ) ಕೀಚಕನ ಪ್ರಾಮುಖ್ಯತೆ ಬರುತ್ತದೆ. ಅವನ ವಧೆಯ ನಂತರ ಮೂರು ಅಂಕಗಳು ಬೆಳೆಯುತ್ತವೆ. ಕಥೆಗೆ ಪ್ರಾಮುಖ್ಯತೆ ಯನ್ನು ಕೊಟ್ಟ ಕಾರಣದಿಂದ ನಾಟಕ ಶಿಥಿಲವಾಗುತ್ತದೆ. ಹೀಗೆ ಕಂಪನಿ ನಾಟಕಗಳು farmಗಿಂತ ಕಥೆಯನ್ನು ಆಧರಿಸಿದಂತೆ ಸಡಿಲವಾದ ಬಂಧನವಾಗಿವೆ !

6. ಷೇಕ್ಸ್‌ಪಿಯರ್ ನಾಟಕಗಳ ಅನುವಾದದಲ್ಲಿ ಮೈಸೂರಿಯನ್ ಎಂಬ ಅ. ಆನಂದರಾವ್ ಅನುವಾದಿಸಿದ ಹ್ಯಾಮ್‌ಲೆಟ್ (1905 ಕ್ರಿ.ಶ.) ಮೊದಲನೆಯದು. ಮುಂದೆ ಅನೇಕರಿಂದ (ಹೊಸಗನ್ನಡದ ಕಾಲದಲ್ಲೂ) ಅನುವಾದಗೊಂಡಿದೆ. ಇವರಲ್ಲಿ ಮಾಸ್ತಿ ಹೆಸರಾದವರು. ಶ್ರೀಕಂಠೇಶಗೌಡರು ಪ್ರತಾಪರುದ್ರದೇವ (1896) ಮತ್ತು ಪ್ರಮೀಳಾರ್ಜುನೀಯಂ (1898) ಎಂದು ತಮ್ಮ ಕಂಪನಿಯ ಪ್ರಯೋಗ ಕ್ಕಾಗಿ ಅನುವಾದಿಸಿದ್ದಾರೆ. ಕೆರೂರು ವಾಸುದೇವಾಚಾರ್ಯರ ಅನುವಾದಗಳು ವಾಸುದೇವ ವಿನೋದಿನಿ ಸಭಾ ಎಂಬ ಅಮೆಚ್ಯೂರ್ ಸಂಸ್ಥೆಗಾಗಿ ಬಳಕೆಯಾಗಿವೆ. ಹೇಮಚಂದ್ರ ರಾಜ ವಿಲಾಸ (ಕಿಂಗ್ ಲೀರ್ ಎಂಬ ನಾಟಕದ ಭಾಷಾಂತರ 1895) ಎಂ, ಎಸ್. ಪುಟ್ಟಣ್ಣನವರು ಅನುವಾದ ಮಾಡಿದ್ದಾರೆ. ಆನಂದರಾವ್‌ರು ಷೇಕ್ಸ್ ಪಿಯರ್‌ನ ಮರ್ಚೆಂಟ್ ಆಫ್ ವೆನಿಸ್ ನಾಟಕವನ್ನು ಪಾಂಚಾಲೀ ಪರಿಣಯಂ ಎಂದು

1890 ಕ್ರಿ.ಶ. ರ ವೇಳೆಗೆ ಅನುವಾದಿಸಿದ್ದಾರೆ. ಕೆ. ಲಕ್ಷ್ಮಣರಾವ್-ಷೇಕ್ಸ್‌ಪಿಯರ್‌ನ ಟೇಮಿಂಗ್ ಆಫ್ ದಿ ಷ್ರ್ಯು-ಚಂಡೀ ಮದಮರ್ಧನ ನಾಟಕಂ (1910) ಎಂದು ಅನುವಾದಿಸಿದ್ದಾರೆ. ಇದು ಕರ್ನಾಟಕ ಗ್ರಂಥ ಮಾಲೆಯ 58ನೇ ಪ್ರಕಟಣೆಯಾಗಿದೆ. (ಇದೇ ನಾಟಕವು ಪರ್ವತವಾಣಿ ಯವರ ಬಹದ್ದೂರ್ ಗಂಡ ಎಂಬ ಪ್ರಸಿದ್ಧ ರೂಪಾಂತರವಾಗಿದೆ).

7. ಎಚ್. ಚಿದಂಬರಯ್ಯ 1899 ರಲ್ಲಿ ಸುಶೀಲಾಪರಿಣಯಂ ಎಂಬ ಕೃತಿಯನ್ನು ರಚಿಸಿದ್ದಾರೆ. ಸಂಪ್ರದಾಯದಂತೆ ಕಥಾ ಭಾಗದಲ್ಲಿ ಮುದ್ರಿಸಿದ ಕಂದ ವೃತ್ತಗಳು ವಾಚಕರಿಗೋಸುಗವಾಗಿವೆ. ಇಲ್ಲಿ ಮುದ್ರಿಸಿದ ಹಾಡುಗಳು ನಾಟಕವನ್ನಾಡುವವರರ ಸಲುವಾಗಿ ಇವೆ. ಕಂದ ವೃತ್ತಗಳ ಬದಲು ಈ ಹಾಡುಗಳನ್ನು ನಾಟಕವನ್ನಾಡುವವರು ಉಪಯೋಗಿಸಬೇಕೆಂದು ನಮ್ಮ ಸೂಚನೆಯಿದೆ. ಇವು ಒಟ್ಟು 35 ಆಗಿವೆ. ಇವರ ಶ್ರೀಕೃಷ್ಣಮಹೇಶ್ವರೀ ಎಂಬ ಐತಿಹಾಸಿಕ ನಾಟಕವು 1910 ರ ವೇಳೆಗೆ ರಚಿತವಾಗಿದೆ. (ಇದು ಶುದ್ಧ ಗದ್ಯ ನಾಟಕವಾಗಿದೆ. ಹೈದರಲ್ಲಿ ಇಲ್ಲಿಯ ಒಂದು ಮುಖ್ಯ ಪಾತ್ರವೂ ಆಗಿದೆ).

8. ಶುದ್ಧ ಗದ್ಯ ನಾಟಕಗಳಲ್ಲಿ ಮೊದಲನೆಯದೇ ಪರಾಪಕಾರಿ ಕಂಪನಿಗಳ ನಾಟಕ(ಈ ಮೊದಲೇ ತಿಳಿಸಿದೆ. ಇವರ ಕಾಲ 1891). ಇಂಗ್ಲಿಷ್‌ನಿಂದ ಶಿರಿಡನ್‌ನ ಸ್ಕೂಲ್ ಫರ್ ಸ್ಕ್ಯಾಂಡಲ್ ಮೋಹಿನೀ ಅಥವಾ ನಿಂದಕರ ನಡವಳಿ ಎಂಬುದನ್ನಾಗಿ 1911 ರಲ್ಲಿ ಧಾರವಾಡದ ಅದಿಗಯ್ಯಾ ಹುಟ್ಟಯ್ಯಾ ಹೊನ್ನಾಪುರ ಮಠ ಎಂಬುವರು ರಚಿಸಿದ್ದಾರೆ. 'ಈ ಸಾಮಾಜಿಕ ನಾಟಕವನ್ನು ಇನ್ನೂವರೆಗೆ ಮಹಾರಾಷ್ಟ್ರ ಭಾಷೆಯಲ್ಲಿ ಯಾರೂ ಬರೆದಿಲ್ಲ' ಎಂದಿದ್ದಾರೆ, ಧಾರವಾಡದ ವಾಗ್ಭೂಷಣ ಪತ್ರಿಕೆಯಲ್ಲಿ ಇದು ಅಚ್ಚಾಗಿದೆ.

ಅನುವಾದಗಳಲ್ಲಿ ಗದ್ಯ ನಾಟಕಗಳು ಕಂಪನಿ ನಾಟಕಗಳಿಗೆ ಸೇರದಂಥವು, ಶಾಲಾ ಕಾಲೇಜುಗಳಲ್ಲಿ ಪ್ರಯೋಗ ವಾಗುವಂಥವು ಎಂದು ಮೋಹಿನೀ ಮೊದಲಾದುವನ್ನು ಗುರುತಿಸಬೇಕಾಗುತ್ತದೆ. ಬಂಗಾಲದ ದ್ವಿಜೇಂದ್ರ ಲಾಲ ರಾಯರ ದುರ್ಗಾದಾಸ ಎಂಬುದನ್ನು ಆರ್. ವ್ಯಾಸರಾವ್ ಅನುವಾದಿಸಿದ್ದಾರೆ (1914 ರಲ್ಲಿ).

ಕುಳತಿಯಾಕ ಗುಡಿಯು ಕಂಬಕ

ಶಿವಾನಂದ ಹೊಂಬಳ

ಕುಳತಿಯಾಕ ಗುಡಿಯು ಕಂಬಕ
ಏಯ್ ನನ್ನ ಚುಂಬಕ
ಇದ್ದೆನಾ ನನ್ನಷ್ಟಕ ಸುಮಾಕ
ಬಲಿಬೀಸಿ ನನ್ನ ಸೆಳೆದಿಯಾಕ
ಎಳದಿಯಾಕ
ಎದಿಯೊಳಗ ಅಬ್ಬರದಲೆ ಎಬ್ಬಿಸಿದೆಯಾಕ ಸುಮುಸುಮಾಕ.

ಇದ್ದಾಂವಾ ನಾ ಗಾಳ್ಯಾಗ ಗಾಳಿಯು ಥರಾ
ಬಿದ್ದಾಂವಾ ನಾ ಬೆಟ್ಟದಾಗ ಬಂಡಿಯು ಪರಾ
ಇದ್ದಿಲ್ಲ ನನ ಚಿತದಾಗ ನಿನ್ನ ಚಿತರ
ಬಂದಾಕೆ ನೀ ಬರಬರಾ
ಸೀಳಿದೆಯಲ್ಲಾ ನನ್ನೆದೆಯು ಹರಹರಾ

ಸೃಷ್ಟಿಸಿದೆ ನನ್ನೊಳಗ ಸೃಷ್ಟಿಯು ಮೂಲ
ತಿರಗಿಸಿದೆ ಮೂಲಕ್ಕೆ ಗಿರಗಿರನೆಕಾಲ
ಮೂಲಕ್ಕೆ ಕಾಲ ತಾಕಿ ಕಾರಿತ್ತು ಹಾಲಾಹಾಲ
ಅಣುಅಣುವಿನೊಳಗೂ ಎಂಥಾ ಕೋಲಾಹಲ
ನಡೆದಾಗ ನನ್ನೊಳಗ ಇಂಥ ಅಲ್ಲೋಲ ಕಲ್ಲೋಲ
ಕೈಹಾಕಿದಿ ನೀ ಬರೀ ಎಲಿ ಅಡಕಿ ಚೀಲ.

ಮೂಲ ಕಾಲನ ಮೂಲಿಗುಂಪಿ ಮಾಡಿ
ಹಾಲಾಹಲ ಕೋಲಾಹಲಗಳ ಕೋಲಮಾಡಿ
ಅಲ್ಲೋಲ ಕಲ್ಲೋಲಗಳ ಅಡಕೀ ಚೀಲದಿ ಹಾಕಿ
ಕುಳತಿಯಾಕ ಗುಡಿಯು ಕಂಬಕ
ಏಯ್ ನನ್ನ ಚುಂಬಕ

ಅಧಿಜಾನಪದ : ಪರಿಕಲ್ಪನೆ, ಅರ್ಥವಿಸ್ತರಣೆ*

ಟಿ. ಗೋವಿಂದರಾಜು

ಜಾನಪದ ಸಂಗ್ರಹಕಾರ್ಯ ಹಾಗೂ ಅಧ್ಯಯನ ವಿಧಾನಗಳು ಕಾಲಕಾಲಕ್ಕೆ ಹೆಚ್ಚುಹೆಚ್ಚು ವೈಜ್ಞಾನಿಕವಾಗುವ ದಿಸೆಯಲ್ಲಿ ಸಾಗಿವೆ. ಹಿಂದಿನ ಸಂಗ್ರಾಹಕರು ಜಾನಪದವನ್ನು ಕೇವಲ ಸಾಹಿತ್ಯಕ ಮೌಲ್ಯದ ದೃಷ್ಟಿಯಿಂದ ನೋಡುತ್ತಿದ್ದುದರಿಂದ ಅವರು ಕೇವಲ 'ಪಠ್ಯ'ಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದರು. 'ಚಾರಿತ್ರಿಕ ಭೌಗೋಳಿಕ ತತ್ತ್ವ'ದವರಿಗೆ ಜನಪದ ಸಾಹಿತ್ಯದ ಜೊತೆಗೆ ಆ ವಕ್ತೃವಿನ ಸ್ಥಳ ಮತ್ತು ಕಾಲದ ವಿವರಗಳಷ್ಟೇ ಮುಖ್ಯವಾಗುತ್ತಿದ್ದವು. ಈ ಹಳೆಯ ಕ್ರಮಗಳು ಅಪೂರ್ಣ ಹಾಗೂ ಅವೈಜ್ಞಾನಿಕ ಎಂಬ ನಿಲುವು ಈಚಿನವರದು. 'ಪಠ್ಯ'ದ ಜೊತೆಗೆ ಅದರ 'ಸಂದರ್ಭ' ಹಾಗೂ 'ಅರ್ಥ'ವನ್ನೂ ದಾಖಲಿಸುವುದು ಅತ್ಯಂತ ಅಗತ್ಯ ಎಂಬ ನಿಲುವಿಗೆ ಈಗ ಬರಲಾಗಿದೆ. ಈ ಬಗ್ಗೆ ಮೊಟ್ಟಮೊದಲಿಗೆ ಅಧ್ಯಯನಕಾರರ ಗಮನ ಸೆಳೆದವರು ಪ್ರೊ. ಮಲಿನೊವ್‌ಸ್ಕಿ. ಇವರು ತಮ್ಮ "Myth in primitive psychology" (1926) ಎಂಬ ಪ್ರಬಂಧದಲ್ಲಿ ಹೇಳಿರುವ ಮಾತುಗಳು ಈ ಸಂದರ್ಭದಲ್ಲಿ ಉಲ್ಲೇಖನೀಯವಾಗಿವೆ. "The text, ofcourse is extremely important, but without the context it remains lifeless"[1] ಮುಂದೆ ಬಾಸ್ಕಂ ಎಂಬ ವಿದ್ವಾಂಸನೂ (1954) ಈ ಬಗ್ಗೆ ಅಧ್ಯಯನಕಾರರ ಗಮನ ಸೆಳೆದಿದ್ದಾನೆ.[2]

ಆದರೂ ಹೀಗೆ 'ಸಂದರ್ಭ' ಸಹಿತ ಜಾನಪದ ಸಂಗ್ರಹಿಸುವ ಬಗ್ಗೆ ಹೆಚ್ಚಿನ ವಿದ್ವಾಂಸರು ಗಮನ ಹರಿಸಿದಂತೆ ಕಂಡುಬರುವುದಿಲ್ಲ. ಅಲೆನ್ ದಂಡೆಸ್ ಅವರೇ ಆ ವಿಚಾರವಾಗಿ ಹೆಚ್ಚಿನ ಆಸಕ್ತಿ, ವಿವರಗಳೊಂದಿಗೆ ವಿದ್ವಾಂಸರ ಗಮನವನ್ನು ತೀವ್ರವಾಗಿ ಈ ಕಡೆ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ತಮ್ಮ "Meta folklore and Oral Literary Criticism" ಎಂಬ ಪ್ರಬಂಧದಲ್ಲಿ 'ಸಾಂದರ್ಭಿಕ ಸಿದ್ಧಾಂತ' (Contextual Theory) ದ ಜೊತೆಗೆ ಅಷ್ಟೇ ಮುಖ್ಯವಾದ 'ಮೌಖಿಕ ಸಾಹಿತ್ಯ ವಿಮರ್ಶೆ' (Oral Literary Criticism)ಯ ಅಗತ್ಯವನ್ನೂ ಕುರಿತು ಪ್ರತಿಪಾದಿಸಿದ್ದಾರೆ. ಅವರ ಪ್ರಕಾರ "One cannot always guess the meaning from

---

* International workshops in folkloristicsಗಾಗಿ ಬರೆದು ಒಪ್ಪಿಸಿದ (21–4–88) ಲೇಖನ.

Context, for this reason, foiklorists must actively seek to elicit the meaning of folklore from the folk".[3]

ಕನ್ನಡದಲ್ಲಿ ಪ್ರೊ. ರೈ ಅವರು ಈ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿರುವ ಮಾತುಗಳು ಹೀಗಿವೆ : "ಬದುಕು ಮತ್ತು ಜಗತ್ತಿನ ಬಗ್ಗೆ ಇರುವ ಜನಪದ ದೃಷ್ಟಿಕೋನಗಳನ್ನು ಪಡೆಯಲು ಜಾನಪದ ಸಾಮಗ್ರಿಗಳ ಸಾಂದರ್ಭಿಕ ಅಧ್ಯಯನ ಮತ್ತು ಮೌಖಿಕ ಸಾಹಿತ್ಯವಿಮರ್ಶೆಯ ಸಂಗ್ರಹ ಬಹಳ ಅಮೂಲ್ಯವಾದ ಆಕರಗಳು".[4] ಸಂಗ್ರಹಿತ 'ಪಠ್ಯ'ದ ಅರ್ಥದ ಬಗ್ಗೆ ಸಂಗ್ರಾಹಕ ಏನು ಅಭಿಪ್ರಾಯ ಪಡುತ್ತಾನೆ ಎಂಬುದಷ್ಟೇ ಮುಖ್ಯವಾದುದು, ಅದರ ವಕ್ತೃ ಅಥವಾ ಇತರ ಜನಪದರು ಏನು ಅಭಿಪ್ರಾಯ ಪಡುತ್ತಾರೆ ಎಂಬುದು. ಜಾನಪದದ ಬಗ್ಗೆ ಹೀಗೆ ಜನಪದರು ಏನು ಅರ್ಥವಿವರಣೆ ನೀಡುತ್ತಾರೆ ಎಂಬುದೇ 'ಮೌಖಿಕ ಸಾಹಿತ್ಯ ವಿಮರ್ಶೆ' (Oral Literary Criticism). ಇದು ಜನಪದ 'ಪಠ್ಯ'ದ ಹಾಗೆ ಕಾಲ, ದೇಶ, ತಲೆಮಾರುಗಳನ್ನು ಅನುಸರಿಸಿ ಬದಲಾಗುತ್ತಾ ಹೋಗುತ್ತದೆ. ಆದ್ದರಿಂದ ಆಯಾ ಕಾಲದಲ್ಲೇ ಆಯಾ ವಕ್ತೃವಿನಿಂದಲೇ ಸಂಬಂಧಿಸಿದ ಅರ್ಥ-ವಿವರಣೆಗಳನ್ನು ಸಂಗ್ರಹಿಸಿಡುವುದು ಅಗತ್ಯವಾಗಿ, ತುರ್ತಾಗಿ ಆಗಬೇಕಾದ ಕೆಲಸ.

'ಮೌಖಿಕ ಸಾಹಿತ್ಯ ವಿಮರ್ಶೆ'ಯನ್ನು ವಿವರಿಸುವ ಸಂದರ್ಭದಲ್ಲೇ ದಂಡೆಸ್ 'Mela folklore' ಎಂಬ ಇನ್ನೊಂದು ಪರಿಕಲ್ಪನೆಯನ್ನು ಪರಿಚಯಿಸಿಕೊಡುತ್ತಾರೆ. ಈ ಶಬ್ದವನ್ನು ಕುರಿತು ಹೇಳುತ್ತಾ "As there is a term 'meta language' to refer to linguistic statements about language, so we may suggest 'meta folklore' to refer to folkloristic statements about folklore" ಎಂದು ಅಭಿಪ್ರಾಯ ಪಡುತ್ತಾರೆ.[5]

Metafolkore ಎಂಬುದು ಒಂದು ಮಾತಿನಲ್ಲಿ ಹೇಳುವುದಾದರೆ "Folklore of folklore", "Proverbs about proverbs, Jokes about Joke cycles, folksongs about folksongs and the like" ಎಂದು ವಿವರಿಸುವ ದಂಡೆಸ್ ಮುಂದುವರೆದು, "Metafolklore is not necessarly intragenre" ಎನ್ನುವ ಮಾತನ್ನೂ ಹೇಳುತ್ತಾರೆ.6

ಅಲನ್ ದಂಡೆಸ್ ಮತ್ತು ಎ. ಕೆ. ರಾಮಾನುಜನ್ ಅವರು Meta folklore ಬಗ್ಗೆ ನೀಡಿರುವ ವಿವರಣೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ಪೀಟರ್ ಕ್ಲಾಸ್ ಮತ್ತು ಫ್ರಾಂಕ್‌ಕೊರೋಂ ಅವರು "... But in our view meta folklore is an appropriate over arching lable for a number of types of folk commentary about folklore, including Dundes Oral, literary

criticism, by which term he would label folk interpretation and Commentry on folklore and which we would rather term "Folk exegesis", and any example of a piece of a folklore that depends upon on knowledge and under standing of another piece of folklore".[7]

'Meta folklore'-ಶಬ್ದದ ಅರ್ಥ–ಸ್ವರೂಪದ ಬಗ್ಗೆ ಕ್ಲಾಸ್ ಮತ್ತು ಕೊರೋಂ " the term "meta" meaning not only "above on" but "alongwith", "following", "dependant on" ಎಂಬಂತಹ ಅರ್ಥ ವ್ಯಾಪ್ತಿಯನ್ನೂ ಪಡೆದುಕೊಳ್ಳುವ ಬಗ್ಗೆ ಹೇಳಿರುವುದು ಗಮನಿಸಬಹುದಾಗಿದೆ (ಅದೇ).

ಈ ಮಾಹಿತಿಗಳ ಹಿನ್ನೆಲೆಯಲ್ಲಿ 'ಅಧಿಜಾನಪದ' (Metafolklore) ವನ್ನು ನಾವು ಹೀಗೆ ಅರ್ಥೈಸಿಕೊಳ್ಳಬಹುದು :

ಜಾನಪದವನ್ನು ಕುರಿತು ಜನಪದರ ಯಾವುದೇ ವಿವರಣೆ, ಅನಿಸಿಕೆಯನ್ನು 'ಮೌಖಿಕ ಸಾಹಿತ್ಯ ವಿಮರ್ಶೆ' ಎಂದು ಕರೆಯಬಹುದು. ಆದರೆ 'ಅಧಿಜಾನಪದ' ಎಂಬುದು ಜಾನಪದದ ಯಾವುದೇ ಪ್ರಕಾರ, ಅಥವಾ ಘಟಕ ಕುರಿತು ಜನಪದರು ಪ್ರತಿಕ್ರಿಯಿಸಿದ 'ಕಲಾತ್ಮಕ ರೂಪ'ವಾಗಿರುತ್ತದೆ. ಇದು ಒಂದು ರೀತಿ ಆ 'ಪ್ರಕಾರ' ಕುರಿತು ಅವರದೇ ವಿಮರ್ಶೆ, ಟೀಕೆ, ಟಿಪ್ಪಣಿ, ಅಡ್ಡ ಉಲ್ಲೇಖ (Cross Reference) ಈ ಯಾವುದೂ ಆಗಿರಬಹುದು. ಆದರೆ, ಹೀಗೆ ವ್ಯಕ್ತಮಾಡುವ 'ಸಾಹಿತ್ಯಕ ಪ್ರತಿಕ್ರಿಯೆ' ಅದೇ ಪ್ರಕಾರದಲ್ಲಿಯೂ ಇರಬಹುದು ; ಭಿನ್ನ ಪ್ರಕಾರವೂ ಆಗಿರಬಹುದು. ಅಂದರೆ, 'ಗಾದೆ' ಬಗ್ಗೆ 'ಗಾದೆ'ಯೂ ಆಗಬಹುದು ; 'ಗಾದೆ' ಬಗ್ಗೆ 'ಹಾಡು', 'ಕತೆ' ಇತ್ಯಾದಿಯೂ ಆಗಬಹುದು. ಅಂತೂ, ಜಾನಪದದ ಇತರ ಅಭಿವ್ಯಕ್ತಿ ಪ್ರಕಾರದಂತೆಯೇ 'ಅಧಿ ಜಾನಪದ' ಸಹ ವಕ್ತೃವಿನ ಸೃಜನಶೀಲ ಸೃಷ್ಟಿಕ್ರಿಯೆಯಾಗಿರುತ್ತದೆ.

ಕನ್ನಡ ಜಾನಪದ ಅಧ್ಯಯನದಲ್ಲಿ ಈ 'ಸಾಂದರ್ಭಿಕ ಸಿದ್ಧಾಂತ, 'ಮೌಖಿಕ ಸಾಹಿತ್ಯ ವಿಮರ್ಶೆ' ಹಾಗೂ 'ಅಧಿ ಜಾನಪದ' ಪರಿಕಲ್ಪನೆಗಳು ತೀರಾ ಹೊಸತಾದುವು. ಆದರೂ ನಮ್ಮ ಅಧ್ಯಯನಕಾರರು ಈ ಶಬ್ದ ಪರಿಕಲ್ಪನೆಗಳ ಅರಿವಿನ ಹೊರತಾಗಿಯೂ ಸ್ವಯಂ ಪ್ರೇರಣೆ, ಅಧ್ಯಯನಾಸಕ್ತಿಯಿಂದ ಈ ಪರಿಕಲ್ಪನೆಗಳಿಗೆ ಸಂಬಂಧಿಸಿದ ಮಾಹಿತಿ ಈಗಾಗಲೇ ಸಂಗ್ರಹಿಸಿ ಪ್ರಕಟಿಸಿರುವುದು, ಅಧ್ಯಯನ-ವಿಶ್ಲೇಷಣೆ ಮಾಡಿರುವುದು ಉಲ್ಲೇಖನೀಯವಾಗಿದೆ. 'ದಂಡಿನ ಶಿವರದ ಹೊನ್ನಾದೇವಿ ಜಾತ್ರೆ'ಕುರಿತು ಈ ಅಧ್ಯಯನಕಾರ ನಡೆಸಿರುವ 'ಅಭ್ಯಾಸ'ದಲ್ಲಿ 'ಸೋಮು'ಗಳಿಗೆ ಸಂಬಂಧಿಸಿದ ಭಾಗದಲ್ಲಿ ಇಂತಹ ಮಾಹಿತಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಬಳಸಿಕೊಂಡಿರುವುದು ಅಂತಹ ಒಂದು ನಿದರ್ಶನವಾಗಿದೆ.[8]

ಇನ್ನು 'ಅಧಿಜಾನಪದ'ಕ್ಕೆ ಸಂಬಂಧಿಸಿದಂತೆ ಕನ್ನಡ ಜಾನಪದದಲ್ಲಿ ಅಭಿವ್ಯಕ್ತವಾಗಿರುವ ಕೆಲವು ಮಾದರಿಗಳನ್ನೂ ಇಲ್ಲಿ ಗಮನಿಸಬಹುದಾಗಿದೆ :

ಜಾನಪದ : ಕನ್ನಡದಲ್ಲಿ 'ಜಾನಪದ'ಶಬ್ದದ ಬಗ್ಗೆಯೇ ಯಾವ ನೇರವಾದ ಟೀಕೆ-ಟಿಪ್ಪಣಿಯಂತಹ 'ಅಧಿ ಜಾನಪದ' ಹುಟ್ಟಿಕೊಂಡದ್ದು ಕಂಡುಬಂದಿಲ್ಲ. ಈ ಶಬ್ದ-ಪರಿಕಲ್ಪನೆ ತೀರಾ ಈಚಿನದಾದುದೂ ಇದಕ್ಕೆ ಕಾರಣವಿರಬಹುದು. ಆದರೆ, ಜನಪದರನ್ನೂ, ಅವರ ಪ್ರತಿಭಾ ಸಾಮರ್ಥ್ಯವನ್ನು ಕುರಿತು ಶ್ರೀವಿಜಯನಂತಹ ಕವಿ ನೂರಾರು ವರ್ಷಗಳ ಹಿಂದೆಯೇ "...ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್...."ಎಂದು ಪ್ರಶಂಸಿಸಿರುವುದು ಉಲ್ಲೇಖನೀಯವಾಗಿದೆ. ಇನ್ನು ಜನಪದವೇ ತಮ್ಮ ಅಗಾಧ ಗೀತ ಸಾಹಿತ್ಯ, ನೆನಪಿನ ಸಾಮರ್ಥ್ಯ ಕುರಿತು ಸಾಂದರ್ಭಿಕವಾಗಿ ಹೆಮ್ಮೆ ತೋರಿಕೊಂಡಿರುವುದುಂಟು :

"ಹತ್ತು ಸಾವಿರ್ಪದವ ಎತ್ತಿನ್ಮೇಲೇರ್ಕ್ಕೊಂಡು
ಮತ್ತೆ ಸಾವಿರವ ಕೈಯಲ್ಲಿ ಹಿಡಿದು
ಬಂದಿವ್ನಿ ಬಾರೋ ಬಸವಣ್ಣ ಸಭೆಗೆ"[9]

ಹೀಗಿದ್ದರೂ ಜನಪದ ಹಾಡು, ಕತೆಗಳನ್ನು ಕುರಿತು ಶಿಷ್ಟರು ಒಂದು ರೀತಿ ತಾತ್ಸಾರವಾಗಿ ಅವುಗಳನ್ನು "ಅಜ್ಜಿ ಕತೆ", "ಕಟ್ಟುಕತೆ", "ಕಾಗಕ್ಕ-ಗುಬ್ಬಕ್ಕನ ಕತೆ" ಎಂದು ಟೀಕೆ ಮಾಡಿರುವುದೂ ಉಂಟು. ಇನ್ನು, ಸ್ನಾತಕೋತ್ತರ ಕೇಂದ್ರಗಳಲ್ಲಿ ಇತರ 'ವಿಷಯ'ಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು 'Folklore' ಶಬ್ದ ಕುರಿತು **'ಪೂಕ್‌ಲೋರ್'** (Sexlore) ಎಂದು ಕಟಕಿಯಾಡುವುದು, ಇದು ಹೇಗೆ ಅನರ್ಥಕ್ಕೆ ಗುರಿಯಾಗಿದೆ ಎನ್ನುವುದರ ನಿದರ್ಶನವೇ ಆಗುತ್ತದೆ.

ಜನಪದಗೀತೆ : ಜನಪದಗೀತೆ-ಸಾಹಿತ್ಯದ ಜೀವನ ಮೌಲ್ಯ, ಪ್ರತಿಭಾ ಸಂಪತ್ತನ್ನು ಕಂಡೂ ಕಾಣದಂತೆ, ಉದ್ದೇಶಪೂರ್ವಕವಾಗಿ ಟೀಕಿಸಿ ಪದಕಟ್ಟಿದವರಲ್ಲಿ ಬಹುಶಃ ಮಧುರ ಕವಿಯೇ ಮೊದಲಿನವನಾಗಿರಬೇಕು. ಅವನ "ಪಂಡಿತರುಂ ವಿವಿಧ ಕಳಾಮಂಡಿತರುಂ..." ಕಂದ ಪದ್ಯ ಈ ದೃಷ್ಟಿಯಿಂದ ಸದಾ ಸಾಹಿತ್ಯಾಭ್ಯಾಸಿಗಳ ಮನಸ್ಸಿನಲ್ಲಿ ಅಸಹನಾಪೂರ್ವಕವಾಗಿಯೇ ಉಳಿಯುತ್ತದೆ.

ಗೀತೆ-ಗೀತೆ. ನಂಬಿಕೆ : ಜನಪದ ಗೀತೆಗಳನ್ನು ಕಲಿತವರು, ಕೇಳುಗರು ಅಪೇಕ್ಷಿಸಿದಾಗ ಹಾಡಬೇಕು. ಹಾಗೆ ಹಾಡಿದ್ದನ್ನು ಶ್ರೋತೃಗಳು ಮನವಿಟ್ಟು ಕೇಳಿ ಅದರ ಲಾಭ ಪಡೆಯಬೇಕು ; ಹಾಡುಗಾರರಿಗೆ ಗೌರವ ತೋರಬೇಕು. ಹಾಗೆ ಮಾಡದಿದ್ದರೆ ಅದು 'ಪಾಪ' ದೋಷಕ್ಕೆ ಕಾರಣವಾಗುತ್ತದೆ ಎಂಬ ಎಚ್ಚರಿಕೆಯ ಮಾತುಗಳು ಹಾಡಿನ ಪ್ರಸ್ತಾವನೆಗಳಲ್ಲಿ ಕಾಣಿಸಿಕೊಳ್ಳುತ್ತವೆ.

"ಹಾಡು ಹಾಡೆಂದರೆ ಹಾಡದಿದ್ದರೆ ಪಾಪ
ಹಾಡಿದ ಹಾಡ ಕಿವಿಗೊಟ್ಟು ಕೇಳದಿದ್ದರೂ ಪಾಪ'- ಈ ಅರ್ಥದ ನುಡಿಗಳು
ಜನಪದರಲ್ಲಿವೆ.

ಜನಪದ ಸಾಹಿತ್ಯ ಎಂಬುದು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ನಿರಂತರ ವರ್ಗಾವಣೆಯಾಗುತ್ತಿರಬೇಕು. ಆಗ ಮಾತ್ರ ಅದು ಉಳಿಯುತ್ತದೆ. ಇಲ್ಲವಾದರೆ ನಾಶವಾಗಿ ಹೋಗುತ್ತದೆ. ಹೀಗಾಗದಂತೆ ನೋಡಿಕೊಳ್ಳಬೇಕಾದುದು ಹಾಡುಗಾರನ ಕರ್ತವ್ಯ. ಅವನು ತಾನು ಇನ್ನೊಬ್ಬರಿಗೆ ಕೇಳಿಸಿ, ಕಲಿಸಿ ತಾನು ಗುರುವಿಂದ ಕಲಿತ ಋಣದಿಂದ ಮುಕ್ತನಾಗಬೇಕು. ಈ ಕ್ರಿಯಾಶೀಲ, 'ಸೃಜನಶೀಲ' ನಂಬಿಕೆಯನ್ನು ತ್ರಿಪದಿಯೊಂದು ವರ್ಣಿಸುವುದು ಹೀಗೆ :

"ಹೊಟ್ಟೆಯೊಳಗಿನ ಹಾಡ ಬಿಟ್ಟು ಬಿಡದಲೆ ಹಾಡಿ
ಮುಟ್ಟಿಸಬೇಕು ಕಲಿತ ಋಣ/ಇಲ್ಲದಿರೆ
ಹಾಡು ಹಿಂಗ್ಯಾವ ಬಾಯಾಗ"[10]

ಗೀತೆ-ಗಾದೆ : ಸಾಹಿತ್ಯದಲ್ಲಿ ಸಂಖ್ಯಾ ಪ್ರಮಾಣಕ್ಕಿಂತ ಗುಣಮೌಲ್ಯ ಮುಖ್ಯ ಎಂಬುದನ್ನು ಒಂದು ಗಾದೆ "ಅರ್ಥವಿಲ್ಲದ ಹಾಡು ಸಾಸಿರಿದ್ದರೂ ವ್ಯರ್ಥ" ಎಂದು ನಿರ್ಣಯಿಸುತ್ತದೆ.[11]

ಗೀತೆ–ಕತೆ : ಜನಪದ ಹಾಡು, ಕತೆಗಳನ್ನು ಇತರ ವರ್ಗಗಳಿಗಿಂತ ದಲಿತರೇ ಹೆಚ್ಚಾಗಿ ಹಾಡುವುದು ನಮ್ಮಲ್ಲಿ ಸಾಮಾನ್ಯವಾಗಿ ಕಂಡುಬರುವ ವಿದ್ಯಮಾನ. ಇದಕ್ಕೆ ನಾಗರಿಕತೆಯ ಪ್ರಭಾವ ಮತ್ತಿತರ ಸಾಮಾಜಿಕ ಅಂಶಗಳೂ ಕಾರಣವಿರಬಹುದು. ಆದರೂ ಅದನ್ನು ಅವರು ಸಮರ್ಥಿಸಿಕೊಳ್ಳುವುದೇ ಬೇರೆ ರೀತಿ. ಅದಕ್ಕೊಂದು 'ಅಧಿ ಜಾನಪದ'ವಾಗಿ ಕತೆಯನ್ನು ಕಟ್ಟಿದ್ದಾರೆ. ಅದರ ಪ್ರಕಾರ-ಬಹಳ ಹಿಂದೆ ಈ ಅಗಾಧ ಹಾಡು, ಕತೆಗಳ ಮೂಟೆಯನ್ನು ಗಾಡಿಯಲ್ಲಿ ತುಂಬಿಕೊಂಡು ಬರುತ್ತಿರುವಾಗ ಮಾದಿಗರ ಮನೆ ಮುಂದೆ ಆ ಗಾಡಿ ಅಚ್ಚು ಮುರಿಯಿತಂತೆ. ಆಗ ಅವರು ಅದನ್ನು ಬಾಚಿ ತಮ್ಮ ಮನೆಯಲ್ಲಿ ತುಂಬಿಕೊಂಡು ಬಿಟ್ಟರಂತೆ!

ಅಕ್ಷರ ಕಲಿಕೆಯಿಂದ ವಂಚಿತರಾದ, ದೂರವಿದ್ದ ವರ್ಗದಲ್ಲಿ ಆ ಕನಸು ಕತೆಯಾಗಿ ಬಂದದ್ದು ಎಷ್ಟು ಮಾರ್ಮಿಕವಾಗಿದೆ!

ಕತೆ–ಕತೆ : ಹಿಂದೆ ಉಲ್ಲೇಖಿಸಿದ ನಿದರ್ಶನದಂತೆ, ಜನಪದ ಗೀತೆಗಳ ಹಾಗೆ ಕತೆಗಳನ್ನು ಕಲಿತವರು ಇನ್ನೊಬ್ಬರಿಗೆ ಹೇಳಬೇಕು. ಹೊರಗೆ ಬಿಡದೆ ತಮ್ಮಲ್ಲೇ ಮರೆಸಿಟ್ಟುಕೊಳ್ಳ ಹೋದರೆ ಅವು ಅವರಿಗೇ ಮುಳುವಾಗುತ್ತವೆ. 'ರಾಜನ್ ಕಿವಿ,

ಕತ್ತೆಕಿವಿ' ಕತೆ; ಮೂರು ಕತೆ ಕಲಿತಿದ್ದೋನು ಅವನ್ನು ಯಾರಿಗೂ ಹೇಳದೇ ಹೋದಾಗ, ಆ ಸಿಟ್ಟಿಗೆ ಆ ಕತೆಗಳೇ ಮೂರು ಗಂಡುಗಾರೆ ಮುಳ್ಳುಗಳಾಗಿ ಅವನನ್ನು ಸಾಯಿಸಲು ಯತ್ನಿಸಿದ ಕತೆಗಳು ನಮ್ಮಲ್ಲಿ ಜನಪ್ರಿಯವಾಗಿದ್ದು. ಅವೆಲ್ಲಾ ಇದೇ ಸಂದೇಶವನ್ನು ಸಾರುತ್ತವೆ.

ಕತೆ-ಪ್ರಾಸ : ಮಕ್ಕಳು ಕೇಳಿದಾಗಲೆಲ್ಲಾ ಕತೆ ಹೇಳೀ ಹೇಳೀ ಬೇಸರವಾದ ಹಿರಿಯರು ಅವರನ್ನು ಹಾಸ್ಯಮಾಡಿ ದೂರ ಮಾಡುವ ಉಪಾಯವಾಗಿ 'ಕತೆ ಹೇಳು ತಾತಾ'-ಎಂದ ಎಳೆಯನಿಗೆ, 'ನನ್ನ ಎದುರಿಗೆ ಕೈಕಟ್ಟಿ ಕೂತು ನಾನು ಹೇಳಿದಂತೆ ಹೇಳು'—ಎಂದು ಈ ಪ್ರಾಸ ಹೇಳಿಕೊಡುವುದುಂಟು; ಕತೆ ಕೇಳುವ ಉತ್ಸಾಹದಲ್ಲಿ ಆ ಮಗು ಒಂದೊಂದೇ ಸಾಲನ್ನು ಮುಗ್ಧವಾಗಿ ಒಪ್ಪಿಸುತ್ತದೆ :

"ಕತೆ ಕತೆ ಕಾರುಂಡ
ದೀಪದ ನಂಜುಂಡ
ನಿಮ್ ತಾತ್ ಬಾದು
ನಿಮ್ ತಾತುನ್ ತೊಲ್ಡುಂಡ.!"[12]

ಇದರಲ್ಲಿ ಕೊನೇ ಸಾಲುಗಳನ್ನು ಮಗು 'ನಮ್ ತಾತ್ ಬಂದು ನಿಮ್ ತಾತುನ್ ತೊಲ್ಡುಂಡ...' ಎಂದೂ ಹೇಳಿಬಿಡುವುದುಂಟು. ಅಥವಾ ಮೊದಲೆ ಆ ಹಿರಿಯ 'ನಮ್ ತಾತ ಬಂದು... ..' ಎಂದೂ ಹೇಳಿಕೊಡಬಹುದು. ಒಟ್ಟಾರೆ ಕೊನೆ ಸಾಲುಗಳನ್ನು ಈ ಎಳೆಯ ಹೇಳಿದಾಗ ಆ ತಾತ ಗೊಳ್ಳನೆ ನಕ್ಕುಬಿಡುತ್ತಾನೆ. ತಾನು ಏನೋ ತಪ್ಪುಮಾಡಿದೆನೆಂದು ಆ ಮಗು ತಬ್ಬಿಬ್ಬಾಗುತ್ತದೆ. ಪದೇ ಪದೇ ಒತ್ತಾಯಿಸಿದಾಗಲೂ ಹೀಗೇ ಆಗಿ, ಕೊನೆಗೆ ಮುಖ ಭಂಗವಾದಂತಾಗಿ ಮಗು ಅಲ್ಲಿಂದ ಜಾಗ ಖಾಲಿ ಮಾಡುತ್ತದೆ.

ಕತೆ-ಗಾದೆ : ಕತೆ ಹೇಳುವುದಕ್ಕೂ, ಕೇಳುವುದಕ್ಕೂ ಒಂದು ಸೂಕ್ತವಾದ ಪ್ರಶಾಂತವಾದ ವಾತಾವರಣವಿರಬೇಕು. ಹಾಗಿಲ್ಲದಿದ್ದರೆ ಕತೆ ಮುಂದೆ ಸಾಗುವುದೇ ಇಲ್ಲ. ನಮ್ಮೂರಲ್ಲಿ ಒಮ್ಮೆ ಒಬ್ಬಾಕೆ ತೀರಿ ಹೋದಾಗ, ಆ ರಾತ್ರಿ ಹೆಣದ ಕಾವಲು ಮಾಡಬೇಕಾಗಿ ಬಂದು, ಕಾಲ ಹರಣಕ್ಕಾಗಿ ಸಾಧು ಹನುಮಯ್ಯ ಅವರನ್ನು ಕರೆಸಿದರು. ಆತ ಎಂದಿನ ಧಾರ್ಮಿಕ ಆಸಕ್ತಿ, ಉತ್ಸಾಹಗಳಿಂದ 'ಕಲ್ಯಾಣದಣ್ಣ, ಬಾರೋ ಬಸವಣ್ಣ......' ಎಂದು ಕಥಾ ಪ್ರಾರಂಭ ಮಾಡಿದರು. ಬಂಧುವನ್ನು ಕಳೆದುಕೊಂಡ ದುಃಖ ಮರೆಯಲೋ, ರಾತ್ರಿಯೆಲ್ಲಾ ಜಾಗರಣೆ ಮಾಡಲು 'ಶಕ್ತಿ'ಗಾಗಿಯೋ ಅಥವಾ ನಿತ್ಯದ ಅಭ್ಯಾಸ ಬಲದಿಂದಲೋ ಆಗಾಗಲೇ 'ಪರಮಾತ್ಮನ ಸೇವೆ' ಮಾಡಿಬಂದಿದ್ದ ಹಟ್ಟಿಯ ಕೆಲ ಪಡ್ಡೆ ಹುಡುಗರು 'ಅಪ್ಪ ಸೋಗಿನಂತೆ' ಅಥವಾ 'ಶಿವ ಪೂಜೆಯಲ್ಲಿ ಕರಡಿಯನ್ನೇ ಬಿಟ್ಟಂತೆ' ಮಧ್ಯೆ ಮಧ್ಯೆ ಕತೆಗಾರನಿಗೆ

ಏನೇನೋ ಪ್ರಶ್ನೆ ಹಾಕತೊಡಗಿದರು. ಪಾಪ! ಕತೆಗಾರ ಮೊದಮೊದಲು ಒಂದೆರಡು ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನ ಮಾಡಿದರೂ, ಮತ್ತೆ ಮತ್ತೆ ಎದಿರಾದ ಪ್ರಶ್ನೆಗಳು ಕೇವಲ ಕೀಟಲೆಯು, ಉಪಾಧ್ಯಾಪದ ವರ್ತನೆಯುವು ಎಂದು ಅರಿವಾಗಿ, ಮನನೊಂದು ಕೊನೆಗೆ—'ಬರಬಾರದಿನ್ನಿಂಥಾ ಕತೆಗೆ 'ಎಂದು ಅದನ್ನೇ ಹಾಡುವಹಾಡಿ ಹೇಳುವ ಪ್ರಯತ್ನ ಮಾಡುತ್ತಿದ್ದರು. ಹನುಮಯ್ಯನ ಕತೆಯು ಮಾದರಿ ಗಮನಿಸುವ ಆಸಕ್ತಿಯಿಂದ ದೂರದಲ್ಲಿ ನಿಂತಿದ್ದ ನಾನು, ಇನ್ನೂ ಇಲ್ಲೇ ಇದ್ದರೆ 'ಕತೆಯೂ ಕೇಡು; ನಿದ್ದೆಯೂ ಕೇಡು' ಎಂದುಕೊಂಡು ಮನೆಗೆ ಹಿಂದಿರುಗಿದೆ.

ಬಹುಶಃ ಇಂತಹ ಅನುಭಾವದ ಹಿನ್ನೆಲೆಯಲ್ಲಿಯೇ ಇರಬೇಕು—"ಕತೆ ಹೇಳೋ ತಾವ ಕಬ್ಬಕ್ಕಿ ಕಾಟ"[13] ಎಂಬ ಗಾದೆ ಹುಟ್ಟಿಕೊಂಡಿರುವುದು.

ಹೀಗೆ ಉಳಿದ ಮಾದರಿಗಳಿಗೂ ಹಲವು ನಿದರ್ಶನಗಳನ್ನು ನಮ್ಮ ಸ್ವಂತ ಅನುಭವದಿಂದಲೋ, ಇತರ ಸಂಗ್ರಹ ಕೃತಿಗಳಿಂದಲೋ ಹೆಕ್ಕಿ ಕೊಡಬಹುದು.

II

ಆದರೆ, ಪ್ರಸ್ತುತ ಪ್ರಸ್ತಾಪಿಸಬೇಕಿರುವ ಮುಖ್ಯ ಅಂಶ ಕೆಲವಿದೆ ;

'ಅಧಿಜಾನಪದ' ಎಂಬುದು ಜಾನಪದದ ಒಂದು ಸಾಹಿತ್ಯ ಪ್ರಕಾರ ಕುರಿತು ಅದೇ ಅಥವಾ ಅನ್ಯ ಸಾಹಿತ್ಯ ಪ್ರಕಾರಗಳ ಮೂಲಕ ಅಭಿವ್ಯಕ್ತಿಸಿದ ಪ್ರತಿಕ್ರಿಯೆ ಅಷ್ಟೇ ಆಗ ಬೇಕೇ? ಅಥವಾ, ಪ್ರತಿಕ್ರಿಯಾತ್ಮಕ 'ಅಂಗಿಕ ಅಭಿನಯಗಳೂ ಅಧಿ ಜಾನಪದದಲ್ಲಿ ಸೇರಬಹುದೇ? ಹಾಗೆಯೇ, ಜನಪದ ಸಾಹಿತ್ಯಿಕ ಪ್ರಕಾರಗಳಲ್ಲದೆ, ಜಾನಪದದ ಕ್ರಿಯಾತ್ಮಕ ಬಗೆಗಳು ಅಥವಾ ಇತರ ಅಂಶ (ಘಟಕ)ಗಳ ಬಗೆಗೆ ಅಭಿವ್ಯಕ್ತಗೊಂಡ ಕಲಾತ್ಮಕ ಪ್ರತಿಕ್ರಿಯೆಗಳನ್ನು 'ಅಧಿಜಾನಪದದಲ್ಲಿ ಸೇರಿಸಿ ಅಧ್ಯಯನ ಮಾಡಬಹುದೆ ?

—ಈ ಬಗ್ಗೆ ಹಿಂದಿನ/ಇತರ ವಿದ್ವಾಂಸರು ಪ್ರಸ್ತಾಪಿಸಿದ್ದು ಕಂಡುಬಂದಿಲ್ಲ. ನಮ್ಮಲ್ಲಿ ಇದಕ್ಕೆ ಸಂಬಂಧಿಸಿದ ಅನೇಕ ನಿದರ್ಶನಗಳಿವೆ. ಆದ್ದರಿಂದ, ಅವುಗಳನ್ನು ಗಮನಿಸಿ ಚರ್ಚಿಸುವ, ಆ ಮೂಲಕ ಈ ಪರಿಕಲ್ಪನೆಯನ್ನು ಹಿಗ್ಗಿಸಿ ತೋರಿಸುವ ಪ್ರಯತ್ನವನ್ನು ಈ ಮುಂದೆ ಮಾಡಲಾಗಿದೆ :

ಜಾನಪದದಲ್ಲಿ ಭಾಷಿಕ ಬಗೆ, ಕ್ರಿಯಾತ್ಮಕ ಬಗೆ ಮೊದಲಾದ 'ಬಗೆ'ಗಳಿದ್ದು ಅವುಗಳಲ್ಲಿ ಹಾಡು, ಕತೆ, ನೃತ್ಯ ಇತ್ಯಾದಿ ಪ್ರಕಾರಗಳು ಇರುವಂತೆ ಗ್ರಾಮ, ಜಾತಿ,

ಕಸುಬು ಇತ್ಯಾದಿ 'ಘಟಕ'ಗಳೂ ಇವೆ. ಭಾರತೀಯ ಸಮಾಜ ಇನ್ನೂ ಸಾಂಪ್ರದಾಯಿಕ ಜಾತಿ ಪರಿಕಲ್ಪನೆಯಿಂದ ಹೊರಬಂದಿಲ್ಲ. ಜಾತಿ ಆಧಾರಿತ ಕಸುಬುಗಳು ಒಂದು ಕಾಲದಲ್ಲಿ ನಮ್ಮಲ್ಲಿ ಪ್ರಮುಖವಾಗಿದ್ದವು. ಈಗ ಅವುಗಳ ಪ್ರಮಾಣ ಕಡಿಮೆಯಾಗಿದ್ದರೂ ನಗಣ್ಯವಾಗಿಲ್ಲ, ಹಾಗೂ ಒಂದು ಕಾಲಕ್ಕೆ ಅವುಗಳನ್ನು ಆಧರಿಸಿ ಹುಟ್ಟಿಕೊಂಡ ಜಾನಪದ ಅಭಿವ್ಯಕ್ತಿಗಳು, ನಂಬಿಕೆ-ನಡವಳಿಗಳು ಇನ್ನೂ ನಮಗೆ ಲಭ್ಯವಾಗುತ್ತವೆ. ಹಾಗೆಯೇ ಜಾನಪದೀಯ ಅಧ್ಯಯನದಲ್ಲಿ 'ಗ್ರಾಮ'ಗಳೂ ಪ್ರಮುಖ ಸ್ಥಾನ ತಡೆಯುತ್ತದೆ. ಹೀಗೆಯೇ ಇತರ 'ಘಟಕ' ಗಳಿಗೂ ಅಧ್ಯಯನದಲ್ಲಿ ಗಮನ ಕೊಡಬೇಕಾಗುತ್ತದೆ.

ಈವರೆಗಿನ ಜಾನಪದೀಯ ಅಧ್ಯಯನದಲ್ಲಿ ಈ 'ಬಗೆ'ಗಳು, 'ಪ್ರಕಾರ'ಗಳು ಅಥವಾ 'ಘಟಕ'ಗಳನ್ನು ಕುರಿತ ಜಾನಪದೀಯ ಅಧ್ಯಯನಗಳಲ್ಲಿ ಆಯಾ ವಿಷಯಗಳಿಗೆ ಸಂಬಂಧಿಸಿದ ಇತರ ಜಾನಪದ ಮಾಹಿತಿಗಳನ್ನು ಅಳವಡಿಸಿಕೊಂಡಿದ್ದರೂ ಅವುಗಳಿಗೆ ಸಂಬಂಧಿಸಿದ 'ಅಧಿ ಜಾನಪದ' ಅಂಶಗಳಿಗೆ ಆದ್ಯತೆ ನೀಡಿದ್ದು ಕಂಡುಬಂದಿಲ್ಲ. ಉದಾ.ಗೆ- ಜನಪದ ನೃತ್ಯ ಪ್ರಕಾರದಲ್ಲಿ ಕೋಲಾಟ ಕುರಿತ ಅಧ್ಯಯನದಲ್ಲಿ ಕೋಲಾಟದ ಬಗೆಗಳು, ಅವುಗಳನ್ನು ಆಡುವ ಕ್ರಮ, ಸಲಕರಣೆಗಳು, ಹಾಡುಗಳು...ಇತ್ಯಾದಿಗಳನ್ನು ಸಂಗ್ರಹಿಸಿ ವಿವರಿಸುವುದಕ್ಕೆ ಗಮನವನ್ನು ಕೊಟ್ಟಂತೆ ಕೋಲಾಟ ಕುರಿತು ಇದ್ದಿರಬಹುದಾದ ಗಾದೆ [ಉದಾ.ಗೆ- 'ಆಟಾಟಕ್ಕೆಲ್ಲ ಕೋಲಾಟ ಲೇಸು'][14] ಹಾಡು, ಕತೆ...ಇತ್ಯಾದಿಗಳನ್ನೂ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸುವ, ಆ ಮೂಲಕ ಅಂತಹ ನೃತ್ಯದ ಬಗ್ಗೆ ಜನಪದರು ಹೇಗೆ, ಏಕೆ ಪ್ರತಿಕ್ರಿಯಿಸಿದ್ದಾರೆ ಎಂಬುವನ್ನು ವಿಮರ್ಶಿಸುವ ಅಗತ್ಯವಿರುತ್ತದೆ. ಇಂತಹ 'ಅಧಿಜಾನಪದ' ಅಂಶಗಳು ನಮ್ಮಲ್ಲಿ ಸಾಕಷ್ಟು ಇರುವುದರಿಂದ ಮತ್ತು ಅವುಗಳಿಗೂ ಅಧ್ಯಯನದಲ್ಲಿ ಸ್ಥಾನ ದೊರಕಿಸಿಕೊಡುವ ಅಗತ್ಯವಿರುವುದರಿಂದ ನಾವು ಈ ಬಗ್ಗೆಯೂ ಹೆಚ್ಚಿನ ಗಮನ ನೀಡಬೇಕಿದೆ.

ಇಂತಹ ಅಧ್ಯಯನದ ಸಾಧ್ಯತೆ. ವ್ಯಾಪ್ತಿ ಮತ್ತು ಮಹತ್ವವನ್ನು ಮನದಟ್ಟು ಮಾಡಿಕೊಡುವ ಸಲುವಾಗಿ ಇಲ್ಲಿ ನಿದರ್ಶನಕ್ಕೆ 'ಆಹಾರ'ವನ್ನು ಕುರಿತು ದೊರೆಯುವ ಅಂತಹ ಕೆಲ ಅಧಿಜಾನಪದೀಯ ಅಂಶಗಳನ್ನು ಪ್ರಸ್ತುತಪಡಿಸಲಾಗಿದೆ:

ಆಹಾರ : ಜನಪದ ಸಂಪ್ರದಾಯಗಳಲ್ಲಿ 'ಆಹಾರ ಪದ್ಧತಿ'ಗೂ ಪ್ರಾಶಸ್ತ್ಯ ನೀಡಿ ಅಭ್ಯಾಸ ಮಾಡಲಾಗುತ್ತದೆ. ಬದುಕಿನ ಮೂಲ ಅವಶ್ಯಕತೆಗಳಲ್ಲಿ ಒಂದಾದ 'ಆಹಾರ'ವನ್ನು, ಅದರ ಗುಣ ವಿಶೇಷಗಳನ್ನು ಕುರಿತು ಜನಪದರು ಜಾಣ ಬಗೆಯಾಗಿ ಪ್ರತಿಕ್ರಿಯಿಸಿದ್ದಾರೆ.

ಆಹಾರ-ಗಾದೆ : ಮನುಷ್ಯ 'ಬದುಕುವುದಕ್ಕಾಗಿ ಉಣ್ಣಬೇಕೇ ಹೊರತು, ಕೇವಲ ಉಣ್ಣುವುದಕ್ಕಾಗಿಯೇ ಬದುಕಬಾರದು'. ಹೊಟ್ಟೆಬಾಕತನದಿಂದಲೋ ಜಿಹ್ವಾಲಾಲಸೆಯಿಂದಲೋ ಅತಿಯಾಗಿ ತಿನ್ನುವವನಿಗಾಗಿ 'ಹೊಟ್ಟೆಬಾಕ' ಎಂಬ ನುಡಿಗಟ್ಟೇ ಹುಟ್ಟಿಕೊಂಡಿದೆ. ಅಂತಹವನನ್ನು ಕುರಿತು 'ನಿನ್ನದೇನು ಒಡ್ಲೋ ? ಪಡ್ಡರ ಗುಡ್ಲೋ !' ಎಂದು ಮೂದಲಿಸಲಾಗುತ್ತದೆ.

ಬದುಕಿಗೆ ಆಹಾರ ಎಷ್ಟೇ ಅನಿವಾರ್ಯವಾದರೂ ಅದರ ಮಿತಿ ಮೀರಿದ ಬಳಿಕ, ಲಾಲಸೆ ಹೇಗೆ ರೋಗ-ಸಾವುಗಳಿಗೂ ಕಾರಣವಾಗುತ್ತದೆ ಎಂಬ ಸೂಕ್ಷ್ಮವನ್ನು ಮನವರಿಕೆ ಮಾಡಿಕೊಡುವ ಸಲುವಾಗಿ ಈ ಗಾದೆ ಮಾತನ್ನು ಕಟ್ಟಲಾಗಿದೆ:

'ಒಪ್ಪತ್ತುಂಡವ ಯೋಗಿ
ಎರಡೊತ್ತುಂಡುವ ಭೋಗಿ
ಮೂರೊತ್ತುಂಡವ ರೋಗಿ
ನಾಲ್ಕೊತ್ತುಂಡವನನ್ನ ಹೊತ್ಕೊಂಡೋಗಿ!'

ಜನಪದರು ಬಳಸುವ ಒಂದೊಂದು ಧಾನ್ಯಕ್ಕೂ ಒಂದೊಂದು ಗುಣ ವಿಶೇಷಗಳಿರುತ್ತವೆ. ಜನಪದ ಆಹಾರ 'ತಜ್ಞ'ರಿಗೆ ಅದರ ಅನುಭವವಿದೆ. ಜನಸಾಮಾನ್ಯರಿಗೆ ಆ ಸೂಕ್ಷ್ಮವನ್ನು ಮನದಟ್ಟಾಗುವಂತೆ, ಸದಾ ಮನಸ್ಸಿನಲ್ಲಿ ಉಳಿಯುವಂತೆ ತಿಳಿಹೇಳುವ ಅಗತ್ಯವಿದೆ. ಆದರೆ, ಅದನ್ನು ತೀರಾ ವೈಜ್ಞಾನಿಕ ಅಂಕಿ–ಅಂಶಗಳೊಂದಿಗೆ ವ್ಯಾಖ್ಯಾನಿಸಿದರೆ ಸಾಮಾನ್ಯರು ಅದನ್ನೆಲ್ಲಾ ಗ್ರಹಿಸುವುದು ಕಷ್ಟ. ಆದರೆ, ಅದನ್ನೇ ನಿತ್ಯ ಪರಿಚಯದ ಹೋಲಿಕೆಗಳೊಂದಿಗೆ ಹೇಳಿದರೆ ಸುಲಭ ಗ್ರಾಹ್ಯ; ಮನಸ್ಸಿನಲ್ಲೂ ಉಳಿಯುತ್ತದೆ. ಅಂತಹ ಒಂದು ಗಾದೆ ಇದು :

'ಅಕ್ಕಿಯನು ತಿಂಬವನು ಹಕ್ಕಿಯಂತಾಗುವನು
ಜೋಳವನು ತಿಂಬವನು ತೋಳನಂತಾಗುವನು
ಕಡಲಿಯನು ತಿಂಬವನು ಕೊಡಲಿಯಂತಾಗುವನು'[15]

—ಇದು ತಮ್ಮ ಆಹಾರ ವಿಶೇಷದ ಸಮರ್ಥನೆಯೂ ಆಗಬಹುದು.

ಆಹಾರ-ಗೀತೆ : ಮಗುವಿಗೆ ತಾಯ ಎದೆ ಹಾಲಿನ ಶ್ರೇಷ್ಠತೆಯ ಬಗ್ಗೆ ಈಚೆಗೆ ವೈದ್ಯರು ವೈಜ್ಞಾನಿಕ ಸಮರ್ಥನೆಯೊಂದಿಗೆ ಪ್ರಚಾರ ಮಾಡುತ್ತಿದ್ದಾರೆ. ಆದರೆ, ಈ ಅಂಶವನ್ನು ನಮ್ಮ ಗ್ರಾಮೀಣ ತಾಯಂದಿರು ಎಂದೋ ಮನವರಿಕೆ ಮಾಡಿಕೊಂಡಿರುವುದನ್ನು ತ್ರಿಪದಿಮಾಡಿ ಹಾಡಿದ್ದಾರೆ :

ಹಾಲು ಅನ್ನಕಿನ್ನ ಜೇನುತುಪ್ಪಕಿನ್ನ
ಹಾಲ್ಯಾಡಿ ಬೆಳದುವೋ ರಸಬಾಳೆ/ಹಣ್ಣಿಗಿನ್ನ
ತಾಯಮ್ಮ ನಿನ್ನಾಲು ಕಡುರುಚಿ[16]

ಆಹಾರ ಬೈಗುಳ : ಆಹಾರದ ಗುಣ ಲಕ್ಷಣಗಳನ್ನು ಬೈಗುಳದ ಮೂಲಕವೂ ವಿಮರ್ಶಿಸಿರುವುದು ಕಾಣಬರುತ್ತದೆ. ಚನ್ನಾದೇವಿ ಅಗ್ರಹಾರದಲ್ಲಿ ದೃಢಕಾಯನಲ್ಲದ "ಹೇತಲಾಂಡಿ" ವ್ಯಕ್ತಿಯನ್ನು "ಹಾಲೇಡಿ" ಎಂದೋ "ಅಪ್ಪಾಲೆಪ್ಪ" ಎಂದೋ ಮೂದಲಿಸುವುದುಂಟು. ಅವಸರಕ್ಕಾಗಿ, ಹೆಚ್ಚು ಶ್ರಮವಿರದೆ, ಮೊಸರಿಗೇ ಒಗ್ಗರಣೆ ಹಾಕಿ ಮಾಡುವ ಸಾರು. ಇದು ಕಾಳುಗಳು, ಮಸಾಲು ಹಾಕಿ ಮಾಡಿದ ಸಾರಿನಷ್ಟು 'ಗರಂ' ಅಲ್ಲ; ಅಂತಹ ಸತ್ವಪೂರ್ಣವೂ ಅಲ್ಲದ ಸಾಮಾನ್ಯ ಸಾರು ಎಂಬ ಭಾವನೆ ಜನಪದರಲ್ಲಿದ್ದಂತಿದೆ.

ಜಾತಿ/ಜನಾಂಗವನ್ನು ಒಂದು ಘಟಕವಾಗಿ ಇಟ್ಟುಕೊಂಡು ಅಧ್ಯಯನ ಮಾಡುವಾಗಲೂ ಅದಕ್ಕೆ ಸಂಬಂಧಿಸಿ ಅನೇಕ 'ಅಧಿಜಾನಪದ' ಅಭಿವ್ಯಕ್ತಿಗಳು ಕಂಡುಬರುತ್ತವೆ. 'ನೇಯೋನ ತಿಕ ಬತ್ಲು' ಎಂಬ ಜನಪ್ರಿಯ ಗಾದೆ ತನ್ನ ನೇಯ್ಗೆಯಿಂದ ಎಲ್ಲರ ಮಾನ ಕಾಪಾಡುವ ನೇಕಾರ ಸ್ವತಃ ತಾನೇ ಸೂಕ್ತವಾದ ಬಟ್ಟೆ ಧರಿಸಲಾರದ ಆರ್ಥಿಕ ದುಃಸ್ಥಿತಿಯಲ್ಲಿರುವ ಸಾಮಾಜಿಕ ಅಸಾಂಗತ್ಯದ ಬಗ್ಗೆ ಮಾರ್ಮಿಕವಾಗಿ ಪ್ರತಿಕ್ರಿಯಿಸಿದೆ.

ಜನಾಂಗ-ಗೀತೆ : ಒಂದು ಜನಾಂಗದ ಬಗೆಗೆ ಇತರ ಜನಾಂಗದವರು ಗಾದೆ, ಒಗಟು, ನುಡಿಗಟ್ಟು ಮೊದಲಾದವುಗಳ ಮೂಲಕ ಹಲವು ರೀತಿಯ ಟೀಕೆ, ಹಾಸ್ಯ ಮಾಡುವುದು ಸಾಮಾನ್ಯ. ಆದರೆ, ಕೆಲವೊಮ್ಮೆ ತನ್ನ ಜನಾಂಗದ ಗುಣ-ದೋಷಗಳ ಬಗ್ಗೆ ತಾನೇ ಹಾಡು, ಕತೆ ಕಟ್ಟಿ ವರ್ಣಿಸಿಕೊಳ್ಳುವ ನಿದರ್ಶನಗಳೂ ಕಂಡುಬರುತ್ತವೆ. ಇಲ್ಲಿ ಅಂತಹ ಒಂದು ನಿದರ್ಶನವನ್ನು ಆಯ್ದುಕೊಡಲಾಗಿದೆ. ನೋಡಿ :

ತುಳು ನಾಡಿನ ದಲಿತವರ್ಗವಾದ ನಲಿಕೆಯವರು ಸುಗ್ಗಿಯಲ್ಲಿ ಮನೆಮನೆಗೆ ಹೋಗಿ ಕುಣಿದು, ಹಾಡಿ, ಅವರಿಂದ ಏನನ್ನಾದರೂ ದಾನ ಪಡೆಯುವ ನಡವಳಿ ಇದೆ. ಅಂತಹ ಒಂದು ಹಾಡಿನ ಅನುವಾದ ಹೀಗಿದೆ :

> "ತಲೆ(ಕೂದಲು) ಬಿಟ್ಟವನಿಗೆ ಎಣ್ಣೆದಾನ ಮಾಡಬೇಕು
> ಹಸಿವು ಕಟ್ಟಿದವರಿಗೆ ಅನ್ನದಾನ ಮಾಡಬೇಕು
>
> ....
> ಕೋಳಿಯ ಕಾಲಿಗೆ ಗೆಜ್ಜೆ ಕಟ್ಟಿದರೆ ಮನೆಯ ಸುತ್ತ ಬಂದೀತು
> ಕಾಗೆಯ ಕಾಲಿಗೆ ಗೆಜ್ಜೆ ಕಟ್ಟಿದರೆ ನಾಲ್ಕು ಊರಿಗೆ ಹೆಸರಲ್ಲವೆ ?"[17]

ಇದು ನಲಿಕೆಯವರ ವೇಷದ ಜೊತೆಗೆ ಅವರ ಬದುಕಿನ ವರ್ಣನೆಯೂ ಆಗಿದೆ. ಕೊನೆಯ ಸಾಲುಗಳಂತೂ ನಲಿಕೆಯವರು ತಮ್ಮ ಬಗ್ಗೆ ತಾವೇ ರೂಪಕಾತ್ಮಕವಾಗಿ ಮಾಡಿಕೊಂಡ ವರ್ಣನೆಯಾಗಿ ಗಮನ ಸೆಳೆಯುತ್ತವೆ. ಈ ಬಗೆಗೆ ಪ್ರೊ. ರೈ ವ್ಯಾಖ್ಯಾನಿಸುವುದು ಹೀಗೆ :

"ನಲಿಕೆಯುವರು ತಮ್ಮನ್ನು ಕಾಗೆಗೆ ಹೋಲಿಸಿರುವುದು ಧ್ವನಿಪೂರ್ಣ ಮತ್ತು ಮಾರ್ಮಿಕ. ಕಾಗೆಯಂತೆ ನಲಿಕೆಯುವರ ಮೈಬಣ್ಣವೂ ಕಪ್ಪು. ಕಾಗೆಯಂತೆ ಅವರು ಊರು ಊರುಗಳಲ್ಲಿ ತಿರುಗುತ್ತಾರೆ... ದಾನ ಮಾಡಿದ ವ್ಯಕ್ತಿಯ ಗುಣಗಾನ ಮಾಡುತ್ತಾರೆ... ಕಾಗೆಯ ಕಾಲಿಗೆ ಗೆಜ್ಜೆ ಕಟ್ಟಿದ ವೈದೃಶ್ಯ ಅನುಪಮವಾಗಿದೆ..." (ಅದೇ ಪು. ೨೮೮)

—ಇಂತಹ ಕಾವ್ಯಾತ್ಮಕ ಅಭಿವ್ಯಕ್ತಿಯಿಂದಾಗಿ ಈ ಗೀತೆ 'ನಲಿಕೆ' ಯುರವನ್ನು ಕುರಿತ ಒಂದು ಅಧಿಜಾನಪದವೂ ಆಗುತ್ತದೆ.

ಕ್ರಿಯಾತ್ಮಕ ಅಧಿಜಾನಪದ : ಈವರೆಗೆ ನೋಡಿದ ನಿದರ್ಶನಗಳು ಕೇವಲ ಸಾಹಿತ್ಯ ರೂಪದಲ್ಲಿಯೇ ಇವೆ. ಹೀಗೆ, 'ಅಧಿಜಾನಪದ' ಅಭಿವ್ಯಕ್ತಿಗಳೆಲ್ಲ ಶಾಬ್ದಿಕ ರೂಪದಲ್ಲಿಯೇ ಇರಬೇಕೇ . ಅವು ಕ್ರಿಯಾತ್ಮಕ (ಆಂಗಿಕ) ರೂಪದಲ್ಲಿ ಇರುವುದಿಲ್ಲವೇ ? ಒಂದು ವೇಳೆ ಹಾಗೆ ಇದ್ದರೆ ಅವುಗಳನ್ನು ಅಧಿಜಾನಪದದ ಒಂದು ವಿಧವಾಗಿ ಗುರುತಿಸಲು ಸಾಧ್ಯವಿಲ್ಲವೇ ? ಎಂಬುದು ಚರ್ಚಾರ್ಹ.

ಈ ಶಿಶುಪ್ರಾಸ ಓದಿರಿ :

"ಕಳ್ಳ ಬಂದ
ಕದ್ಕೊಂಡ್ ಹೋದ;
ಪೋಲೀಸ್ ಬಂದ
ಕಿತ್ಕೊಂಡ್ ಹೋದ!"[18]

ಇದು ಒಂದು ಸನ್ನಿವೇಶವನ್ನು ವರ್ಣಿಸುವಂಥಾದ್ದು—ಸುಲಭವಾಗಿ ವೇದ್ಯವಾಗುತ್ತದೆ. ಅದೂ ಕಳ್ಳ-ಪೊಲೀಸರ ನಿತ್ಯ ವ್ಯವಹಾರ ಕುರಿತಾದ್ದು—ಎಂಬುದೂ ಅರಿವಾಗುತ್ತದೆ. ನಮ್ಮ ಆಡಳಿತದಲ್ಲಿ ಪೊಲೀಸರಿಗೆ ಪ್ರಮುಖ ಕರ್ತವ್ಯವಿದೆ. ಆಧುನಿಕ ಸಂದರ್ಭದಲ್ಲಿ ಕಳ್ಳ, ಪೊಲೀಸರೂ ಜಾನಪದ ಸಮಾಜದ ಒಂದು ಭಾಗವೇ ಆಗುತ್ತಾರೆ. ಹೀಗಾಗಿ, ಇವರನ್ನೂ ಇವರ ಕಾರ್ಯವೈಖರಿಯನ್ನೂ ಕುರಿತು ಹುಟ್ಟಿಕೊಂಡ ಈ ಪ್ರಾಸವೂ ಜಾನಪದವೇ ಆಗುತ್ತದೆ.

ಈ ಪ್ರಾಸವನ್ನು ಕೇವಲ ಶಾಬ್ದಿಕವಾಗಿ ಓದಿಕೊಂಡಾಗ—ಅಥವಾ ಶ್ರಾವ್ಯವಾಗಿ—ಕೇಳಿಸಿಕೊಂಡಾಗ 'ಕಳ್ಳ ಕದ್ದುಕೊಂಡು ಹೋದದ್ದನ್ನು ಪೊಲೀಸ್ (ಅವನಿಂದ) ಕಿತ್ತುಕೊಂಡು ಹೋದ'—ಎಂಬಂತೆ ಅರ್ಥವಾಗುತ್ತದೆ. ಇದರಲ್ಲಿ ಅಂತಹ ವಿಶೇಷವೇನಿದೆ—ಎಂಬುದು ಗ್ರಹ್ಯವಾಗುವುದಿಲ್ಲ. ನಮ್ಮ ವ್ಯವಸ್ಥೆಯಲ್ಲಿ ಕಳ್ಳನಿಂದ ಕದ್ದ ಮಾಲನ್ನು ವಶಪಡಿಸಿಕೊಳ್ಳುವುದು ಅಷ್ಟು ಸುಲಭವೇ ? ಅಥವಾ, ನಮ್ಮ ಪೊಲೀಸು ಬಲ ಅಷ್ಟು ಸಮರ್ಥವಿದೆಯೇ : ಇಷ್ಟೊಂದು ಚುರುಕಾಗಿ ಯಶಸ್ವಿಯಾಗಿ ಕಾರ್ಯಾಚರಣೆ ಮಾಡುವಂತಿದ್ದರೆ ಈ ಪ್ರಮಾಣದಲ್ಲಿ ಕಳ್ಳತನ, ದರೋಡೆಗಳೇ

ಆಗುತ್ತಿರಲಿಲ್ಲ—ಅಲ್ಲವೇ? ಹಾಗಿದ್ದರೆ, ಈ ಪ್ರಾಸದಲ್ಲಿ ಹೇಳುತ್ತಿರುವ 'ದನಿ' ಯಾವುದು? ಇದನ್ನು ಬಲ್ಲ ಒಬ್ಬ ಗ್ರಾಮೀಣ ಬಾಲಕನಿಗೆ ಕೇಳಿದರೆ, ಆತ ಕೈಕಟ್ಟಿ ನಿಂತು, ಶಿಸ್ತಾಗಿ ಈ ಪ್ರಾಸದ ಬಾಯಿಪಾಠ ಒಪ್ಪಿಸುವುದಿಲ್ಲ. ಬದಲಿಗೆ ಆತ ಅದನ್ನು ಹೀಗೆ ಸಾಭಿನಯಪೂರ್ವಕವಾಗಿ ಪ್ರದರ್ಶಿಸುತ್ತಾನೆ:

"ಕಳ್ಳ ಬಂದ...." ಎಂದು ತನ್ನ ಹಣೆ ತೋರಿಸಿ,

"ಕದ್ಕೊಂಡ್ ಹೋದ..." ಎನ್ನುವಾಗ ಅದೇ ತೋರು ಬೆರಳಿಂದ ತನ್ನ ಎದೆ ತೋರಿಸುತ್ತಾನೆ. ಮುಂದುವರೆದು,

"ಪೋಲೀಸ್ ಬಂದ" ಎನ್ನುವಾಗ ಎದೆಯಿಂದ ಹೊಟ್ಟೆಯತ್ತ ಕೈತೋರಿಸಿ, ಕೊನೆಯ ಸಾಲು–

"ಕಿತ್ಕೊಂಡೋದ!" ಎಂದು ಹೇಳುವಾಗ ಸಲೀಸಾಗಿ ತನ್ನ ಮರ್ಮಸ್ಥಾನವನ್ನು ತೋರಿಸಿಬಿಡುತ್ತಾನೆ! ಅಂದರೆ, ಇಲ್ಲಿ ಮಾತಿಗೆ ಕೊಡುವಷ್ಟೇ ಪ್ರಾಮುಖ್ಯವನ್ನು ಅಭಿನಯ-ಕ್ರಿಯೆಗೂ ನೀಡುತ್ತಾನೆ. ಕಿವಿಯಲ್ಲಿ ಅವನ ಮಾತುಗಳನ್ನು ಕೇಳಿಸಿಕೊಂಡು, ದೃಷ್ಟಿಯನ್ನು ಅವನ ಕೈಯತ್ತ ಕೇಂದ್ರೀಕರಿಸಿದರೆ ಆಗ ಈ ಇಡೀ ಪ್ರಾಸ ನೀಡುವ ಅರ್ಥವೇ ಬೇರೆಯಾಗುತ್ತದೆ, 'ಧ್ವನಿ' ವಿಶೇಷವೇ ಭಿನ್ನವಾಗಿ, ಕಳ್ಳರನ್ನು ಹಿಡಿಯುವಲ್ಲಿ ನಮ್ಮ ಪೊಲೀಸರು ಎಷ್ಟು 'ದಕ್ಷರು' ಎಂಬುದು ಹೊಳೆದು ನಗೆಯುಕ್ಕಿ ಬಿಡುತ್ತದೆ.

ಹೀಗಾಗಿ, ನಮ್ಮ ಪೊಲೀಸ್ ವ್ಯವಸ್ಥೆಯನ್ನು ಕುರಿತ ಜನಪದರ ವಿಡಂಬನೆಯಾಗುವ ಈ ಶಿಶು ಪ್ರಾಸ ಕ್ರಿಯಾತ್ಮಕ ಅಧಿಜಾನಪದಕ್ಕೊಂದು ಉತ್ತಮ ಮಾದರಿಯಾದಂತಾಗುತ್ತದೆ. ಮತ್ತು ಈ ಹಿನ್ನೆಲೆಯಲ್ಲಿ ಇಂತಹ ಇತರ ಮಾದರಿಗಳನ್ನು ಶೋಧಿಸಿಕೊಳ್ಳಲು ಮಾರ್ಗದರ್ಶಿಯಾಗುತ್ತದೆ.

ಹೀಗೆ, 'ಅಧಿಜಾನಪದ' ಎಂಬುದು ನಮಗೆ ಪಾಶ್ಚಾತ್ಯರಿಂದ ಬಂದ ಹೊಸ ಪರಿಕಲ್ಪನೆಯಾದರೂ, ಕನ್ನಡದಲ್ಲಿ ಲಭ್ಯವಿರುವ ಅಸಂಖ್ಯ-ವೈವಿಧ್ಯಮಯ ಮಾದರಿಗಳನ್ನು ಆಧರಿಸಿ ಈ ಪರಿಕಲ್ಪನೆಯ ಅರ್ಥವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಸಾಧಿಸಿ ತೋರಿಸಬಹುದಾಗಿದೆ.

ಅಡಿಟಿಪ್ಪಣಿಗಳು

1. Bronislaw Malinowski: Magic, Science and Religion (ಪು. ೧೦೪) ಇಂದ ಉದ್ಧೃತ: ಅಲೆನ್ ಡಂಡೆಸ್: "Meta Folklore and Oral Literary Criticism"; Essays In Folkloristics.

2. William R. Bascom : Four Functions of Folklore : Journal of American Folklore ಉದ್ಧೃತ ಅಲೆನ್ ದಂಡೆಸ್: Essays in folkloristics.
3. ಅದೇ ಪು. ೪೦.
4. ವಿವೇಕ ರೈ. ಬಿ. ಎ.: ಅನ್ವಯಿಕ ಜಾನಪದ, ಪು. ೮೧.
5. ಅಲೆನ್‌ದಂಡೆಸ್ : ಪು. ೪೨.
6. ಅದೇ
7. Lecture notes for April 20, 1988 (International work shops in folkloristics) P-1
8. ಗೋವಿಂದರಾಜು, ಟಿ. 'ಜಾನಪದ ಜಗತ್ತು', ಮೇ, 1981, ಇದರಲ್ಲಿ "ಸಂಶೋಧಕರಿಗೆ ಸವಾಲೆನಿಸುವ ಸೋಮುಗಳು" ಲೇಖನ, ಹಾಗೂ 'ಜಾನಪದ ಜಗತ್ತು. ಸೆಪ್ಟೆಂಬರ್ ೧೯೮೧, ಪು. ೪೪.
9. ಗೊರೂರು ರಾಮಸ್ವಾಮಿ ಅಯ್ಯಂಗಾರ್ : ಜನಪದ ಜೀವನ ಮತ್ತು ದರ್ಶನ : ಪು. ೧೦೪
10. ಅದೇ
11. ನಾಯಕ ಎಸ್. ಎಂ., ಕನ್ನಡಗಾದೆ ಮಾತುಗಳು, ಪು. ೬೫.
12. ಬಾಲ್ಯದಲ್ಲಿ ಈ ಲೇಖಕನ ತಾತ ಹನುಮಂತಯ್ಯ ಅವರಿಂದ ಕೇಳಿದ ಪ್ರಾಸ ; ಸ್ವಅನುಭವ
13. ಸುಧಾಕರ : ನಮ್ಮ ಸುತ್ತಿನ ಗಾದೆಗಳು. ಪು. ೩೫.
14. ಅದೇ, ಪು. ೧೩.
15. ನಾಯಕ ಎಸ್. ಎಂ. ಕನ್ನಡ ಗಾದೆ ಮಾತುಗಳು ಪು. ೭೬.
16. ಗೋವಿಂದರಾಜ ಟಿ. : ಚನ್ನಾವೇವಿ ಅಗ್ರಹಾರ, ಜಾನಪದೀಯ ಅಧ್ಯಯನ, ಪು. ೨೯೬.
17. ಡಾ॥ ವಿವೇಕ ರೈ ಬಿ.ಎ. : ತುಳು ಜನಪದ ಸಾಹಿತ್ಯ ; ಪು. ೨೮೭
18. ಬಾಲ್ಯದಲ್ಲಿ ಓರಗೆಯವರಿಂದ ಈ ಲೇಖಕ ಕಲಿತದ್ದು.

ಔಷಧೀಯ ಸಸ್ಯಗಳ ಸಂರಕ್ಷಣೆ

ಅನಿಲ್‌ಪುರೋಹಿತ್ ಮತ್ತು ರವಿಕುಮಾರ್

ನಮ್ಮ ಭಾರತದೇಶವು ಅಪಾರವಾದ ನೈಸರ್ಗಿಕ ಸಂಪತ್ತುಗಳ ತವರು. ನದಿಗಳು, ಅರಣ್ಯಗಳು, ವೃಕ್ಷಗಳು, ಪ್ರಾಣಿಗಳು ಎಲ್ಲವೂ ಇಲ್ಲಿ ಯಥೇಚ್ಛವಾಗಿ ಇವೆ. ಒಂದು ದೇಶದ ಸಂಪತ್ತನ್ನು ಅಳೆಯುವುದು ಈ ಸಂಪತ್ತುಗಳನ್ನು ಗಮನಕ್ಕೆ ಇಟ್ಟುಕೊಂಡೆ. ನಮ್ಮಲ್ಲಿ ಬೆಳೆಯುವ ಸಸ್ಯಸಿರಿ ವೈವಿಧ್ಯಮಯ. ಅಲ್ಲದೆ, ಅವುಗಳಿಂದ ಸಾಕಷ್ಟು ಪ್ರಯೋಜನಗಳಿವೆ. ಅಂತಹ ಉಪಯೋಗಗಳಲ್ಲಿ ಔಷಧದ ಗುಣ ಧರ್ಮಗಳಿರುವ ಸಸ್ಯಗಳು ಅನೇಕ. ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ನಾವು ನಮ್ಮ ದೇಶದಲ್ಲಿ ಕಾಣುವಷ್ಟು ಪ್ರಮಾಣದ ಔಷಧೀಯ ಸಸ್ಯಗಳು ಇರಲಾರವು ಎಂಬ ಮಾತು ಉತ್ಪ್ರೇಕ್ಷೆ ಎನಿಸಬಹುದು. ನಮ್ಮ ಪೂರ್ವಜರು ಈ ಸಸ್ಯಗಳಿಂದ ಅನೇಕ ರೋಗಗಳನ್ನು ಗುಣಪಡಿಸುವ ಕಲೆ ಮತ್ತು ವಿಜ್ಞಾನವನ್ನು ರಕ್ತಗತಮಾಡಿಕೊಂಡಿದ್ದರು. ಇದಕ್ಕೆ ಸಂಬಂಧಿಸಿದ ಉಲ್ಲೇಖಗಳು ನಮ್ಮ ರಾಮಾಯಣ, ಮಹಾಭಾರತಗಳಂತಹ ಅತೀ ಪುರಾತನ ಕೃತಿಗಳಿಂದಲೂ ದೊರೆಯುತ್ತವೆ. ಜನಜನಿತವಾಗಿ, ವಂಶಪಾರಂಪರ್ಯವಾಗಿ ನಮ್ಮ ಗ್ರಾಮೀಣ ಜನತೆ, ಆದಿವಾಸಿಗಳು ಈ ಸಸ್ಯಗಳ ಪರಿಪೂರ್ಣ ಅರಿವನ್ನು ಹೊಂದಿದವರಾಗಿದ್ದು ಅಸಂಖ್ಯಾತ ರೋಗಗಳಿಗೆ ರಾಮಬಾಣವಾಗಿ ಈ ದಿವ್ಯವಾದ ಸಸ್ಯಗಳನ್ನು, ಅವುಗಳ ಉತ್ಪನ್ನಗಳನ್ನು ಪ್ರಯೋಗಿಸುತ್ತಿದ್ದರು. ಸಣ್ಣಪುಟ್ಟ ತರಚುಗಾಯಗಳನ್ನು ವಾಸಿಮಾಡುವುದರಿಂದ ಹಿಡಿದು ಮಹಾಮಾರಿಯಂತಹ ರೋಗಗಳನ್ನು ಹೇಳ ಹೆಸರಿಲ್ಲದೆ ಓಡಿಸುವ ಗುಣವಿರುವ ಈ ಸಸ್ಯ ಸಂಕುಲಗಳು ಇತ್ತೀಚಿನ ದಿನಗಳಲ್ಲಿ ಅತಿ ವಿರಳವಾಗುತ್ತಿವೆ. ಇವುಗಳ ಅತಿಯಾದ ಬಳಕೆ, ಅರಣ್ಯಗಳ ನಾಶ, ಸಾಕುಪ್ರಾಣಿಗಳ ಮೇಯಿಸುವಿಕೆ, ಕಾಂಕ್ರಿಟ್ ಕಾಡುಗಳ ಹೆಚ್ಚಳ, ಕಾಳ್ಗಿಚ್ಚು, ಪ್ರವಾಹ ಈ ಎಲ್ಲಾ ವೈಪರೀತ್ಯಗಳೊಡನೆ ಜನಸಂಖ್ಯಾ ಸ್ಫೋಟದ ಪ್ರಭಾವದಿಂದ ಇವುಗಳ ಸಂಕುಲ ಅತಿವೇಗವಾಗಿ ಕುಸಿಯುತ್ತಿದೆ. ಇದೇ ರೀತಿ ಇವುಗಳನ್ನು ನಾಶವಾಗಲು ಬಿಟ್ಟರೆ ಮುಂದೊಂದು ದಿನ ನಮ್ಮ ಮುಂದಿನ ಪೀಳಿಗೆಗೆ ಇವುಗಳ ಫೋಟೋ, ಸ್ಲೈಡ್ ಅಥವಾ ಚಿತ್ರಗಳನ್ನು ಮಾತ್ರ ತೋರಿಸಬೇಕಾದ ವಿಷಾದನೀಯ ಪರಿಸ್ಥಿತಿ ನಮ್ಮದಾಗಬಹುದು. ಇಂತಹ ಅಭೂತಪೂರ್ವವಾದ ಸಂಪತ್ತು ಕೇವಲ ಯಾವುದೋ ಒಂದು ತಲೆಮಾರಿನ ಸ್ವತ್ತಲ್ಲ! ಅದು ನಮ್ಮ ಮುಂದಿನ ಪೀಳಿಗೆಯ ಉಪಯೋಗಕ್ಕೂ ಬರಬೇಕು, ಈ ಕೆಲಸವನ್ನು ನಾಗರಿಕರಾದ ನಾವೆಲ್ಲ ನಮ್ಮ ಕರ್ತವ್ಯ ಎಂದು ತಿಳಿದು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ.

ನಮ್ಮ ಪರಿಸರದಲ್ಲಿ ನಮ್ಮ ಗಮನಕ್ಕೆ ಬಾರದ ಸಾಕಷ್ಟು ಔಷಧಗುಣಗಳಿರುವ ಸಸ್ಯಗಳು ಬೆಳೆಯುತ್ತಿರಬಹುದು. ಆದರೆ ಆ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲದಿದ್ದರೆ ಅದನ್ನು ಗಮನಿಸುವುದಾದರೂ ಹೇಗೆ ? ಈ ವಿಷಯದ ಬಗ್ಗೆ ಆಳವಾಗಿ ನಾವು ಇಂದು ಚಿಂತಿಸಬೇಕಾಗಿದೆ. ಇಂದು ಹಲವಾರು ವೇದಿಕೆಗಳಲ್ಲಿ ವೈದ್ಯರು ವಿಜ್ಞಾನಿಗಳು, ಉದ್ಯಮಿಗಳು ಈ ಸಸ್ಯವರ್ಗಗಳ ಬಗ್ಗೆ, ಅವುಗಳಿಂದಾಗುವ ಉಪಯೋಗಗಳ ಬಗ್ಗೆ ಅವುಗಳ ಸಂತತಿಯನ್ನು ಗಮನೀಯವಾಗಿ ವಿಸ್ತರಿಸುವ ಬಗ್ಗೆ ಸಾಕಷ್ಟು ಚರ್ಚೆ ಮಾಡುತ್ತಿದ್ದಾರೆ. ಇಂಗ್ಲಿಷ್ ಔಷಧಿಗಳ 'ಸೈಡ್ ಎಫೆಕ್ಟ್' ಗಳಿಗೆ ಅಂಜಿ ಎಲ್ಲರೂ 'ಹರ್ಬಲ್ ಲೈಫ್'ಗೆ ಒಗ್ಗಿಕೊಳ್ಳುತ್ತಿದ್ದಾರೆ. ಇದು ಸ್ವಾಗತಾರ್ಹ. ಆದರೆ ಇದರಿಂದ ಔಷಧೀಯ ಸಸ್ಯಗಳು ಮತ್ತು ಅವುಗಳ ಉತ್ಪನ್ನಗಳ ಮೇಲೆ ಅಪಾರವಾದ ಒತ್ತಡ ಒಮ್ಮೆಲೇ ಬೀಳುವ ಅವಕಾಶಗಳಿವೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ನಾವೆಲ್ಲರೂ ಈ ಸಸ್ಯಗಳ ಸಂರಕ್ಷಣೆಗೆ ಮತ್ತು ವರ್ಧನೆಗೆ ಸಾಕಷ್ಟು ಗಮನ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ನಿಟ್ಟಿನಲ್ಲಿ ಸರ್ಕಾರ, ಸಾರ್ವಜನಿಕರು, ವಿಜ್ಞಾನಿಗಳು, ವೈದ್ಯರು ಉದ್ಯಮಿಗಳು ಎಲ್ಲರೂ ಒಂದೆಡೆ ಸೇರಿ ಕಾರ್ಯಸೂಚಿ ಸಿದ್ಧಪಡಿಸಬೇಕಾದದ್ದು ಅನಿವಾರ್ಯ. ಈ ಸಂಕುಲಗಳ ಸಂರಕ್ಷಣೆಗೆ ನಮಗೆ ಸಾಕಷ್ಟು ರೀತಿಯ ದಾರಿಗಳಿವೆ. ಈ ಸಸ್ಯಗಳನ್ನು ಅವುಗಳಿರುವ ಸ್ಥಳದಲ್ಲಿ ಕಾಯ್ದಿರಿಸಿ ಬೇರೆಕಡೆ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು, ರಾಷ್ಟ್ರೀಯ ಉದ್ಯಾನವನಗಳಲ್ಲಿ, ಸಸ್ಯತೋಟಗಳಲ್ಲಿ, ಗಿರಿಧಾಮಗಳಲ್ಲಿ ಹಾಗೂ ಇತರ ವಾಣಿಜ್ಯ ಕೃಷಿ ಸಂಬಂಧಿತ ಕಂಪನಿಗಳ ಗಾಜಿನಮನೆಗಳಲ್ಲಿ ಅರ್ಥಾತ್ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಬೆಳೆಸುವ ಪ್ರಯತ್ನವಾಗಬೇಕಾಗಿದೆ. ಇವುಗಳನ್ನು ಉಪಯೋಗಿಸುವಾಗ ಎಚ್ಚರಿಕೆ ಅತ್ಯಗತ್ಯ. ಅತಿಯಾದ ಬಳಕೆ ನಾಶಕ್ಕೆ ನಾಂದಿಯಾಗಲೂಬಹುದು. ಪ್ರಯೋಗ ಶಾಲೆಗಳ ಶೈತ್ಯಾಗಾರಗಳಲ್ಲಿ, ಜೀನ್ ಬ್ಯಾಂಕ್‌ಗಳಲ್ಲಿ ಇವುಗಳ ಬೀಜ, ದಳ, ಬೇರು, ಎಲೆ ಇತ್ಯಾದಿಗಳ ಶೇಖರಣೆ ಮತ್ತು ಅಂಗಾಂಶ ಕೃಷಿಯಿಂದ ಇವುಗಳ ಸಂವರ್ಧನೆ ಮಾಡುವುದೂ ಅತಿಮುಖ್ಯ. ಹೊರ ರಾಷ್ಟ್ರಗಳಲ್ಲಿ ಕಂಡುಬರುವ ಅಮೂಲ್ಯವಾದ ಸಸ್ಯ ಸಂಜೀವಿನಿಗಳನ್ನು ನಮ್ಮಲ್ಲಿಗೆ ಪರಿಚಯಿಸಿ ಅವುಗಳ ಬೇಸಾಯ ಪದ್ಧತಿ, ಬೆಳವಣಿಗೆ, ಬೆಳೆತೆಗೆಯುವ ವಿಧಾನಗಳನ್ನು ನಮ್ಮ ಪರಿಸ್ಥಿತಿಗೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳುವ ಕೆಲಸವೂ ಇಂದು ಆಗಬೇಕಾಗಿದೆ.

ಇವುಗಳ ಜೊತೆಯಲ್ಲಿ ನಮ್ಮ ಅರಣ್ಯಗಳಲ್ಲಿ ಈಗಾಗಲೇ ಇರುವ ಔಷಧೀಯ ಸಸ್ಯಗಳ ಯಾದಿ ತಯಾರಿಕೆ, ಅವುಗಳ ಸಾಂದ್ರತೆ, ಬೆಳೆಯುವ ವಿಧಾನ, ಅವುಗಳ ರಚನೆ, ಶರೀರ ಕ್ರಿಯಾಶಾಸ್ತ್ರಗಳ ಬಗ್ಗೆಯೂ ನಾವು ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಬೇಕು. ಜನಸಾಮಾನ್ಯರಲ್ಲಿ ಈ ಬಗ್ಗೆ ಅರಿವು ಮೂಡಿಸಲು ನೆರವಾಗಲು ಈ ಸಸ್ಯಗಳ ಭಾವಚಿತ್ರ, ಹರ್ಬೇರಿಯಂ, ಸ್ಲೈಡ್‌ಗಳ ತಯಾರಿಕೆ, ವಿಡಿಯೋ ಚಿತ್ರೀಕರಣ ಇಂತಹವುಗಳನ್ನು ತಯಾರುಮಾಡಿ ಸುದ್ದಿ ಮಾಧ್ಯಮಗಳ ಮೂಲಕ ಜನರಿಗೆ ತಲುಪಿಸುವ ಕಾರ್ಯ ಶೀಘ್ರವಾಗಿ ಆಗಬೇಕಾಗಿದೆ. ದೂರದರ್ಶನ ಈ

ನಿಟ್ಟಿನಲ್ಲಿ ಅತ್ಯಮೂಲ್ಯ ಸೇವೆಯನ್ನು ನೀಡಬಹುದು. ಇದರೊಂದಿಗೆ ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು, ಕೃಷಿ ಮತ್ತು ಅರಣ್ಯ ಇಲಾಖೆಗಳು ಒಂದೆಡೆ ಸೇರಿ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಇತ್ಯಾದಿಗಳನ್ನು ಏರ್ಪಡಿಸುವುದೂ ಅಗತ್ಯ. ಇಂದು ಇಂತಹ ಕೆಲಸಗಳು ನಿರೀಕ್ಷೆಗೂ ಮೀರಿ ನಡೆಯುತ್ತಿರುವುದು ಹರ್ಷದಾಯಕ. ರೈತರು ಔಷಧೀಯ ಸಸ್ಯಗಳನ್ನು ಬೆಳೆಯಲು ಮುಂದಾದಲ್ಲಿ ಅದಕ್ಕೆ ಬೇಕಾಗುವ ಎಲ್ಲ ಮಾಹಿತಿ, ಬೀಜ, ವಿಧಾನಗಳನ್ನು ತಿಳಿಸಿಕೊಡಲು ಸರ್ಕಾರವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ರೈತರು ತಂದ ಇಂತಹ ಉತ್ಪನ್ನಗಳನ್ನು ಮಾರುವ ವ್ಯವಸ್ಥೆಯನ್ನು ಸರ್ಕಾರ ನಿರ್ವಹಿಸಬೇಕು. ಇದು ಒಂದು ಕಡೆಯಾದರೆ ವಿಜ್ಞಾನಿಗಳು ಇವುಗಳ ತಳಿಗಳ ಸುಧಾರಣೆ, ಬೆಳವಣಿಗೆಯ ಹಂತಗಳು, ಜೀವ ತಂತ್ರಜ್ಞಾನದ ಉಪಯೋಗ, ಅಂಗಾಂಶ ಕೃಷಿ ಇನ್ನೂ ಹಲವಾರು ವಿಚಾರಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ವರ್ಷದ ಯಾವ ತಿಂಗಳಲ್ಲಿ ಅತಿ ಹೆಚ್ಚು ಉತ್ಪಾದನೆ ಸಾಧ್ಯ ? ಸಸ್ಯಗಳಿಂದ ಸಂಗ್ರಹಿಸಿದ ಕಚ್ಚಾ ಪದಾರ್ಥಗಳನ್ನು ಯಾವ ರೀತಿಯಲ್ಲಿ ಶೇಖರಿಸಿಡಬೇಕು ? ಸಂಸ್ಕರಿಸುವ ವಿಧಾನಗಳು, ಸಾಗಾಣಿಕಾ ವಿಧಾನಗಳು, ಬಳಕೆಯ ವಿಧಾನಗಳ ಬಗ್ಗೆಯೂ ಸಾಕಷ್ಟು ಸಂಶೋಧನೆ ನಡೆಯಬೇಕಾಗಿದೆ, ಈ ಸಸ್ಯಗಳಿಂದ ಉತ್ಪಾದಿಸಲ್ಪಟ್ಟ ಔಷಧಿಯ ರಾಸಾಯನಿಕ ಗುಣಧರ್ಮಗಳಿಂದ ಆ ರಾಸಾಯನಿಕಗಳ ಕೃತಕ ತಯಾರಿಕೆ ಸಾಧ್ಯತೆ ಬಗ್ಗೆಯೂ ನಾವು ಯೋಚಿಸಬೇಕು. ಏಕೆಂದರೆ ಕೃತಕವಾಗಿ ಇವುಗಳನ್ನು ತಯಾರಿಸುವ ವಿಧಾನಗಳು ಬಳಕೆಗೆ ಬಂದರೆ ಔಷಧೀಯ ಸಸ್ಯಗಳ ಮೇಲಿನ ಹೊರೆ, ಅವಲಂಬನೆ ಕಡಿಮೆಯಾಗುತ್ತದೆ.

ರಾಜ್ಯಗಳ ಅರಣ್ಯ ಇಲಾಖೆಗಳು ಈ ಸಸ್ಯ ಸಿರಿಯನ್ನು ಸಂರಕ್ಷಿಸುವ ಹೊಣೆ ಹೊತ್ತಿದೆ. ಇಲ್ಲಿನ ಸಿಬ್ಬಂದಿಗಳಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸಿ, ತಜ್ಞರ ಸಹಾಯವನ್ನು ಒದಗಿಸಿ, ಅವರನ್ನು ಉತ್ತಮವಾಗಿ ತರಬೇತುಗೊಳಿಸಬೇಕು. ಹೀಗೆ ಮಾಡುವುದರಿಂದ ಸಿಬ್ಬಂದಿಗಳು ಸಸ್ಯಗಳನ್ನು ಗುರುತಿಸುವುದು ಮತ್ತು ರಕ್ಷಿಸುವುದು ಸುಲಭವಾಗುತ್ತದೆ. ಜೊತೆಗೆ 'ಧನ್ವಂತರಿ ವನ' ಗಳಂತಹ ಕೇವಲ ಔಷಧೀಯ ಸಸ್ಯಗಳನ್ನು ಸಂಗ್ರಹಿಸಿ ಬೆಳೆಸುವ ತೋಟಗಳು ಪ್ರತಿ ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲಿ ಪ್ರಾರಂಭವಾಗಬೇಕು. ಈ ನಿಟ್ಟಿನಲ್ಲಿ ಅತ್ಯಮೂಲ್ಯ ಸೇವೆ ಸಲ್ಲಿಸಿದ ಇಲಾಖೆ, ಸಂಶೋಧನಾ ಕೇಂದ್ರಗಳು, ವ್ಯಕ್ತಿಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಈ ಸಸ್ಯಸಂಜೀವಿನಿಗಳ ಬಗ್ಗೆ ಅಧ್ಯಯನ ಮಾಡಲು ಅವಕಾಶ ನೀಡಬೇಕು.

ಈಗಾಗಲೇ ಈ ರೀತಿಯ ಎಲ್ಲ ಕೆಲಸಗಳು ನಡೆಯುತ್ತಿವೆ. ಕೆಲವು ಕಡೆ ನಡೆಯಬೇಕಾಗಿವೆ. ಆರಂಭದಲ್ಲಿ ಮಾತ್ರ ಆಸಕ್ತಿ ಇದ್ದರೆ ಸಾಲದು, ಅವಿರತ ಪರಿಶ್ರಮ ಅಂತಿಮ ಹಂತದವರೆಗೂ ಅತ್ಯಗತ್ಯ. ಹೀಗಾದಲ್ಲಿ ಮಾತ್ರ ನಾವು ಮಾಡುವ ಕೆಲಸ ಸಾರ್ಥಕ.

ಇಪ್ಪತ್ತನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ನಡೆದಿರುವ ಶಾಸನಗಳ ಅಧ್ಯಯನದ ಸ್ವರೂಪ

ಡಾ. ಸಿ. ನಾಗಭೂಷಣ

ಕನ್ನಡ ಸಂಶೋಧನೆ ಈ ಶತಮಾನದಲ್ಲಿ ಅನೇಕ ಮಹತ್ವದ ನೆಲೆಗಳನ್ನು ಪ್ರವೇಶಿಸಿದೆ. ಅದರಲ್ಲಿ ಶಾಸನ ಶಾಸ್ತ್ರವು ಒಂದು. ಶಾಸನಗಳನ್ನು ಪುರಾತತ್ತ್ವ ಶಾಸ್ತ್ರದ ಒಂದು ಅಂಗವಾಗಿ ಗುರುತಿಸಲಾಗಿದೆ. ಇತರೆ ಅಂಗಗಳಾದ ಭೂಶೋಧನೆ, ಉತ್ಖನನ, ನಾಣ್ಯಶಾಸ್ತ್ರ, ಸ್ಮಾರಕಗಳು, ವಾಸ್ತುಶಿಲ್ಪಗಳ ಜೊತೆಯಲ್ಲಿ ಇದನ್ನು ಗುರುತಿಸಿದ್ದಾರೆ. ಆರಂಭದಲ್ಲಿ ಶಾಸನಗಳನ್ನು ಕುರಿತಾದ ಅಧ್ಯಯನವು ಪುರಾತತ್ವ ಇಲಾಖೆಯ ಅಡಿಯಲ್ಲಿ ನಡೆದಿರುವುದನ್ನು ನಾವು ಗಮನಿಸಬಹುದು.

ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ ಎನ್ನುವ ಭಾವನೆ ಪಾಶ್ಚಾತ್ಯ ವಿದ್ವಾಂಸರಲ್ಲಿ ಪ್ರಕಟವಾದ ಸಂದರ್ಭದಲ್ಲಿ, ಇತಿಹಾಸದ ಅಧಿಕೃತ ದಾಖಲೆಗಳಿಲ್ಲ ಎಂದು ಆಪಾದಿಸುತ್ತಿದ್ದ ಸಂದರ್ಭದಲ್ಲಿ ಪಾಶ್ಚಾತ್ಯ ವಿದ್ವಾಂಸರಿಗೆ ಶಾಸನಗಳು ನಂಬುವಂತಹ ಅಧಿಕೃತ ದಾಖಲೆಗಳೆನಿಸಿದವು. ಶಾಸನಗಳು ಪ್ರಮುಖವಾಗಿ ಒಂದು ಕಾಲದಲ್ಲಿ ನಡೆದ ವ್ಯವಹಾರಗಳ ಲಿಖಿತ ದಾಖಲೆಗಳು. ನಾಡಿನ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಅರ್ಥಮಾಡಿಕೊಳ್ಳುವ ಮೂಲಸಾಮಗ್ರಿಗಳಾಗಿವೆ. ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ರಚಿಸುವಲ್ಲಿ ಉಳಿದೆಲ್ಲವುಗಳಿಗಿಂತ ಇವು ಮಹತ್ತರವಾದವುಗಳು ಎನಿಸಲು ಮಹತ್ವದ ಕಾರಣಗಳೆಂದರೆ,

೧. ಬಹುತೇಕ ಶಾಸನಗಳು ತಾನು ಹುಟ್ಟಿದ ಕಾಲಕ್ಕೆ, ಸ್ಥಾನಕ್ಕೆ, ಪರಿಸರಕ್ಕೆ ಸಂಬಂಧಪಟ್ಟವುಗಳಾಗಿರುವುದು. ೨. ಶಾಸನಗಳ ಪಾಠಗಳನ್ನು ಬರೆಯಲು ಆರಿಸಿಕೊಂಡ ಶಿಲೆಗಳು ಅಥವಾ ತಾಮ್ರ ಪಟಗಳ ಸ್ಥಳಗಳು ಸೀಮಿತವಾಗಿರುವುದು. ೩. ಯಾವ ವಿಷಯವನ್ನು ದಾಖಲು ಮಾಡಲು ಶಾಸನಗಳನ್ನು ಬರೆಯಬೇಕಿತ್ತೋ ಆ ವಿಷಯದ ನಿರೂಪಣೆಗೆ ಲಭ್ಯವಿದ್ದ ಜಾಗದಲ್ಲಿ ನಿರ್ದಿಷ್ಟ ಭಾಗವನ್ನು ಮೀಸಲಿಡಬೇಕಾಗಿದ್ದಿತು. ಅಂದರೆ ಶಾಸನ ರಚನೆ ಸಾಂದರ್ಭಿಕವಾದುದು, ನಿರ್ದೇಶಿತವಾದುದೂ, ತನ್ನ ಅಭಿವ್ಯಕ್ತಿಗೆ ಆಶ್ರಯಿಸಬೇಕಾದ ಪರಿಮಿತಿಯಿಂದ ನಿಬಂಧಿತವಾದುದಾಗಿತ್ತು. ಈ ಹಿನ್ನೆಲೆಯಲ್ಲಿ ಶಾಸನಗಳಲ್ಲಿರುವ ಮಾಹಿತಿಯು ವಾಸ್ತವ ಸಂಗತಿಯಿಂದ ಕೂಡಿದ್ದು ಸತ್ಯದ ಸಂಗತಿ

ಯತ್ತ ಸಾಗುವುದೆಂಬ ಆಶಯವನ್ನು ಕಲ್ಪಿಸಿಕೊಂಡ ಪಾಶ್ಚಾತ್ಯ ಮತ್ತು ದೇಶೀಯ ವಿದ್ವಾಂಸರಿಗೆ ಶಾಸನಗಳು ಮೊದಲ ವರ್ಗದ ಆಕರಗಳಾಗಿ ಕಂಡುಬಂದವು.

ಭಾರತ ಹಾಗೂ ಅದರ ಭಾಗವಾದ ಕನ್ನಡ ನಾಡಿನಲ್ಲಿ ಪ್ರಾರಂಭವಾದ ಶಾಸನಗಳ ಕುರಿತಾದ ಅಧ್ಯಯನದ ನೆಲೆ : ಶಾಸನಗಳನ್ನು ಕುತೂಹಲದಿಂದ ವೀಕ್ಷಿಸಿ ದೇಶದ ಇತಿಹಾಸದ ರಚನೆಗೆ ಅವು ಮಹತ್ತರವಾದವುಗಳು ಎಂಬುದನ್ನು ಮೊದಲಿಗೆ ಗುರುತಿಸಿದವರು ಪಾಶ್ಚಾತ್ಯ ವಿದ್ವಾಂಸರು. ಭಾರತದಲ್ಲಿ ಶಾಸನಗಳನ್ನು ಕುರಿತಾದ ಅಧ್ಯಯನ ಹದಿನೆಂಟನೆ ಶತಮಾನದ ಮಧ್ಯಭಾಗದಲ್ಲಿ ಆರಂಭವಾಗಿದ್ದರೂ, ಕ್ರಮಬದ್ಧ ಅಧ್ಯಯನವು ಕ್ರಿ.ಶ. 1784ರಲ್ಲಿ ಸರ್ ವಿಲಿಯಂ ಜೋನ್ಸ್‌ನಿಂದ ಸ್ಥಾಪಿತವಾದ ರಾಯಲ್ ಏಷ್ಯಾಟಿಕ್ ಸೊಸೈಟಿಯ ಮೂಲಕ ಪ್ರಾರಂಭವಾಯಿತೆನ್ನಬಹುದು. ಈ ಸಂಸ್ಥೆಯ ಉದ್ದೇಶ ಭಾರತೀಯ ಇತಿಹಾಸ, ಕಾವ್ಯ, ಪುರಾಣಗಳ ಸುಸಂಬದ್ಧ ಅಧ್ಯಯನ ಮಾಡುವುದು. ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ಶಾಸನಗಳ ಲಿಪಿಯನ್ನು ಓದಿ ಅರ್ಥೈಸುವ ಪ್ರಯತ್ನವು ಜೇಮ್ಸ್ ಪ್ರಿನ್ಸೆಪ್ ಲ್ಯಾಸೆನ್ ಮುಂತಾದ ಪಾಶ್ಚಾತ್ಯ ಸಂಶೋಧಕರ ಮೂಲಕ ನಡೆದಮೇಲೆ ಶಾಸನಗಳ ವ್ಯವಸ್ಥಿತ ಅಧ್ಯಯನ ತೀವ್ರವಾಯಿತೆನ್ನಬಹುದು. ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಅಸ್ತಿತ್ವಕ್ಕೆ ಬಂದಿದ್ದು, ಅದರಡಿಯಲ್ಲಿ ಇತಿಹಾಸದ ಪುನರ್ರಚನೆಗೆ ಅಧಿಕೃತ ಆಕರಗಳಾದ ಶಾಸನಗಳನ್ನು ಪರಿಷ್ಕರಿಸಿ ಪ್ರಕಟಿಸುವ ಸಲುವಾಗಿ 'ಇಂಡಿಯನ್ ಆ್ಯಂಟಿಕ್ವಯರಿ' ನಿಯತಕಾಲಿಕೆ ಪ್ರಾರಂಭವಾಯಿತು. ಈ ಪತ್ರಿಕೆಯ ಮೂಲಕ ಭಾರತದ ಅನೇಕ ಶಾಸನಗಳು ವ್ಯಾಖ್ಯಾನ ಸಹಿತ ಪ್ರಕಟವಾಗಿವೆ. 'ಇಂಡಿಯನ್ ಆ್ಯಂಟಿಕ್ವಯರಿ'ಯ 40ಕ್ಕೂ ಹೆಚ್ಚು ಸಂಪುಟಗಳು ಹೊರಬಂದಿವೆ. ಭಾರತೀಯ ಶಾಸನಗಳ ಪ್ರಕಟನೆಯಲ್ಲಿ ಆರಂಭದಲ್ಲಿ ಆಸಕ್ತಿ ವಹಿಸಿದವರೆಂದರೆ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಂ, ಚಾರ್ಲಸ್ ವಿಲ್ಕಿನ್ಸ್, ಸರ್ ವಿಲಿಯಂ ಜೋನ್ಸ್, ಹೆನ್ರಿಚ್ ಲ್ಯೂಡರ್ಸ್, ಜೇಮ್ಸ್ ಬರ್ಗೆಸ್, ಇ. ಹುಲ್ಟ್ಜ್, ಜಾರ್ಜ್ ಬೂಲರ್, ಹೆನ್ರಿಕೋಲ್ ಬ್ರೂಕ್, ಕೀಲ್ ಹಾರ್ನ್, ಜೆ. ಎಫ್. ಫ್ಲೀಟ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ರಾಮಕೃಷ್ಣ ಭಾಂಡಾರಕರ, ರಾಜೇಂದ್ರಲಾಲ್ ಮಿಶ್ರ, ಭಗವಾನ್ ಲಾಲ್ ಇಂದ್ರಜಿ ಇತ್ಯಾದಿ ದೇಶೀಯ ವಿದ್ವಾಂಸರು.

ಕನ್ನಡ ನಾಡಿನಲ್ಲಿ 18ನೇ ಶತಮಾನದ ಕೊನೆಯ ಭಾಗದಿಂದಲೇ ಕನ್ನಡ ಶಾಸನಗಳ ಅಧ್ಯಯನದ ಪ್ರಯತ್ನ ನಡೆದಿದೆ. ಕ್ರಿ.ಶ. 1791ರಲ್ಲಿ ವಿಲಿಯಂ ಜೋನ್ಸ್‌ನಿಂದ ಏಷ್ಯಾಟಿಕ್ ರಿಸರ್ಚಸ್ ಪತ್ರಿಕೆಯಲ್ಲಿ ಪ್ರಕಟವಾದ A Royal Grant of Land in Carnata ಹೆಸರಿನ ಶಾಸನವೇ ಕನ್ನಡ ನಾಡಿನ ಅರಸರಿಗೆ ಸಂಬಂಧಿಸಿದ ಪ್ರಕಟ ಪ್ರಥಮ ಶಾಸನವಾಗಿದೆ. ಹತ್ತೊಂಭತ್ತನೆಯ ಶತಮಾನದಲ್ಲಿ ಕರ್ನಲ್

ಮೆಕೆಂಜಿಯು ಕನ್ನಡನಾಡಿನ ಕೆಲವು ಶಾಸನಗಳನ್ನು ಸಂಗ್ರಹಿಸಿ ಏಷಿಯಾಟಿಕ್ ಸೊಸೈಟಿಯ ಮೂಲಕ ಪ್ರಕಟಿಸಿದ್ದನು.

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಸರ್ ವಾಲ್ಟರ್ ಇಲಿಯಟ್‌ನಿಂದ ಶಾಸನಗಳ ಕುರಿತ ಸುವ್ಯವಸ್ಥಿತವಾದ ಅಧ್ಯಯನ ಕನ್ನಡ ನಾಡಿನಲ್ಲಿ ಪ್ರಾರಂಭವಾಯಿತೆನ್ನಬಹುದು. ಈತ ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕದ ಪಶ್ಚಿಮ ಭಾಗ, ಹಳೆಯ ಮೈಸೂರು ಪ್ರಾಂತ್ಯದ ಉತ್ತರ ಭಾಗಗಳಿಂದ ಸುಮಾರು 1300 ಶಾಸನಗಳನ್ನು ಸಂಗ್ರಹಿಸಿ ಅವುಗಳಲ್ಲಿ 595 ಶಾಸನಗಳನ್ನು ಆಯ್ಕೆಮಾಡಿಕೊಂಡು Karnataka Desh Inscriptions ಹೆಸರಿನಲ್ಲಿ ಕೈ ಬರೆಹದ ನಾಲ್ಕು ಪ್ರತಿಗಳನ್ನು ಸಿದ್ಧಪಡಿಸಿದ್ದನು. ಈ ಸಂಪುಟವು ಉತ್ತರ ಕರ್ನಾಟಕದ ಚರಿತ್ರೆಯ ಅಧ್ಯಯನಕ್ಕೆ ಅಗತ್ಯವಾದ ಶಾಸನಗಳನ್ನೊಳಗೊಂಡಿದೆ. ಕನ್ನಡ ನಾಡಿನ ಶಾಸನಗಳ ಪ್ರಕಟನೆಯ ಕ್ರಮಬದ್ಧ ಅಧ್ಯಯನದಲ್ಲಿ ವಾಲ್ಟರ್ ಇಲಿಯಟ್‌ನ ಹೆಸರು ಪ್ರಥಮ ಹಾಗೂ ಗಮನಾರ್ಹ ಎಂದೆನಿಸುತ್ತದೆ. ಈತನು ಕನ್ನಡನಾಡಿನ ಶಾಸನಗಳನ್ನು ಕಷ್ಟಪಟ್ಟು ಶ್ರಮವಹಿಸಿ ಓದಿದ ಅಧ್ಯಯನದ ಫಲವನ್ನು Hindu Inscriptions ಲೇಖನದ ಮೂಲಕ ವ್ಯಕ್ತಪಡಿಸಿದ್ದಾನೆ. ಈ ಲೇಖನ ನಾಡಿನ ಸಾಂಸ್ಕೃತಿಕ ಹಾಗೂ ರಾಜಕೀಯ ಇತಿಹಾಸದ ಅಧ್ಯಯನದಲ್ಲಿ ಹೊಸ ಅಧ್ಯಾಯ ಮೂಡಿಸಿತು.

ಕನ್ನಡ ನಾಡಿನ ವಿವಿಧ ಅರಸು ಮನೆತನಗಳ, ಸಾಮಂತರ ಆಳ್ವಿಕೆಯಲ್ಲಿ ಹುಟ್ಟಿದ ಶಾಸನಗಳು ನಾಡಿನ ಜನಾಂಗದ ಬದುಕಿನ ವಿಶ್ವಕೋಶಗಳೆನಿಸಿವೆ. ಕನ್ನಡ ನಾಡಿನಲ್ಲಿ ಪ್ರಕಟವಾಗಿರುವ ಹಾಗೂ ಪ್ರಕಟವಾಗದೆ ಉಳಿದಿರುವ ಒಟ್ಟು ಶಾಸನಗಳ ಸಂಖ್ಯೆ ಸುಮಾರು ಮೂವತ್ತು ಸಾವಿರಗಳಷ್ಟಿದೆ. ತಮಿಳು ನಾಡನ್ನು ಬಿಟ್ಟರೆ ಅತಿಹೆಚ್ಚು ಶಾಸನಗಳನ್ನು ಹೊಂದಿದ ರಾಜ್ಯ ಕರ್ನಾಟಕವೇ ಆಗಿದೆ. ಕನ್ನಡ ನಾಡಿನ ಒಳಗೆ-ಹೊರಗೆ ಹಂಚಿ ಹೋಗಿರುವ ಶಾಸನಗಳ ಪರಿವೀಕ್ಷಣೆ, ಸಂಗ್ರಹಣೆ, ಸಂಪಾದನೆ, ಪ್ರಕಟನೆಯ ಸುವ್ಯವಸ್ಥಿತವಾದ ಕಾರ್ಯ ಪ್ರಾರಂಭವಾದದ್ದು ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೇ ಶತಮಾನದಲ್ಲಿ ಎಂದು ಹೇಳಬಹುದು.

ಇಪ್ಪತ್ತನೇ ಶತಮಾನದಲ್ಲಿ ಶಾಸನಗಳನ್ನು ಕುರಿತಾದ ಸಂಶೋಧನೆ ಎರಡು ನೆಲೆಗಟ್ಟುಗಳಲ್ಲಿ ನಡೆದಿದೆ.

೧. ಮೂಲ ಆಕರಗಳಿಂದ ಶಾಸನಗಳ ಪರಿವೀಕ್ಷಣೆ, ಸಂಗ್ರಹಣೆ, ಸಂಪಾದನೆ ಮತ್ತು ಪ್ರಕಟನೆ.

೨. ಪ್ರಕಟಗೊಂಡ ಶಾಸನಗಳಲ್ಲಿಯ ಮತ್ತು ವಿಷಯದ ವೈವಿಧ್ಯತೆಗನುಗುಣವಾಗಿ ಕನ್ನಡನಾಡಿನ ಇತಿಹಾಸ, ಸಂಸ್ಕೃತಿಗೆ ಸಂಬಂಧಿಸಿದ ಹಾಗೂ ಇತರೆ ಅಧ್ಯಯನವನ್ನು ನಡೆಸಿರುವುದು.

೧. **ಶಾಸನಗಳ ಪರಿವೀಕ್ಷಣೆ ಸಂಪಾದನೆ-ಪ್ರಕಟನೆ :**

ಶಾಸನಗಳ ಸಂಗ್ರಹ, ಸಂಪಾದನೆ ಹಾಗೂ ಪ್ರಕಟನೆಯ ಕಾರ್ಯ ಸಾಂಸ್ಥಿಕ ಹಾಗೂ ವೈಯುಕ್ತಿಕ ಮಟ್ಟಗಳೆರಡರಲ್ಲಿಯೂ ನಡೆದಿದೆ. ಮೂಲ ಆಕರಗಳಾದ ಶಾಸನಗಳ ಸಂಗ್ರಹದ ಕೆಲಸ ಇಪ್ಪತ್ತನೆಯ ಶತಮಾನದಲ್ಲಿ ಪ್ರಾಂತ್ಯವಾರು ಮಟ್ಟದಲ್ಲಿ ನಡೆದಿರುವುದನ್ನು ಗುರುತಿಸಬಹುದು. ಅವು ಯಾವುವೆಂದರೆ 1. ಹಳೇ ಮೈಸೂರು ಆಧಿಪತ್ಯ 2. ಮದ್ರಾಸ್ ಆಧಿಪತ್ಯ 3. ಮುಂಬೈ ಕರ್ನಾಟಕ 4. ಹೈದರಾಬಾದ್ ಕರ್ನಾಟಕ [ನಿಜಾಂ ಕರ್ನಾಟಕ].

1. ಹಳೇ ಮೈಸೂರು ಅಧಿಪತ್ಯ : ಹಳೇ ಮೈಸೂರು ಪ್ರದೇಶದಲ್ಲಿ ಶಾಸನಗಳ ಕುರಿತಾದ ವ್ಯವಸ್ಥಿತವಾದ ಅಧ್ಯಯನ B. L. ರೈಸ್ ಅವರಿಂದ ಪ್ರಾರಂಭವಾಯಿತೆನ್ನ ಬಹುದು. ಶಾಸನಗಳನ್ನು ಓದುವ ಕಾರ್ಯ ಪರಿಪೂರ್ಣತೆಯನ್ನು ಮುಟ್ಟಿದ್ದು ಇವರ ಕಾಲದಲ್ಲಿಯೇ. ಈ ಕೆಲಸದಲ್ಲಿ ದೇಶೀಯ ವಿದ್ವಾಂಸರು ಭಾಷೆಯ ವಿಷಯದಲ್ಲಿ ಸಹಾಯಕರಾಗಿ ಕೆಲಸ ಮಾಡಿದ್ದಾರೆ. ಲಿಪಿಯನ್ನು ಓದಿ ಅರ್ಥೈಸುವಲ್ಲಿ ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನವೇ ಮುಖ್ಯ. ಕನ್ನಡ ನಾಡಿನ ಶಾಸನಗಳ ಸಂಗ್ರಹದಲ್ಲಿ ರೈಸ್‌ರ ಹೆಸರು ಗಮನಾರ್ಹವಾದುದು. ಅವರು 1885 ರಿಂದ 1906ರವರೆಗೆ ಪ್ರಾಚ್ಯ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಹೊರತಂದ ಎಪಿಗ್ರಫಿಯಾ ಕರ್ನಾಟಿಕಾ ಸಂಪುಟಗಳು ಶಾಸನಗಳ ಪ್ರಕಟನೆಯಲ್ಲಿ ಎದ್ದು ಕಾಣುವಂತಹದ್ದಾಗಿವೆ. ಹಳೇ ಮೈಸೂರು ಭಾಗದ ಸುಮಾರು 9000 ಶಾಸನಗಳು 12 ಸಂಪುಟಗಳಲ್ಲಿ ಪ್ರಕಟಗೊಂಡಿವೆ.

Epigraphia carnaticaದ ಸ್ವರೂಪ ಎಂದರೆ ಪ್ರತಿಯೊಂದು ಸಂಪುಟವೂ ಸುದೀರ್ಘವಾದ ಪ್ರಸ್ತಾವನೆಯನ್ನು ಹೊಂದಿದ್ದು, ಶಾಸನಗಳ ರೋಮನ್ ಲಿಪ್ಯಂತರ, ಇಂಗ್ಲಿಷ್ ಭಾಷಾಂತರ ಹಾಗೂ ಮೂಲ ಪಾಠಗಳೊಂದಿಗೆ ಪ್ರಕಟವಾಗಿವೆ. ಈ ಕಾರ್ಯ ಬಿ.ಎಲ್. ರೈಸ್‌ರವರ ಅತ್ಯದ್ಭುತವಾದ ಸಾಧನೆಯೆಂದೇ ಗುರುತಿಸಬೇಕು. ರೈಸ್‌ರವರ ನಂತರ ಬಂದ ಆರ್. ನರಸಿಂಹಾಚಾರ್, ಎಂ.ಎಚ್. ಕೃಷ್ಣ, ಕೆ.ಎ, ನೀಲಕಂಠ ಶಾಸ್ತ್ರಿಗಳ ಅವಧಿಯಲ್ಲಿ ಕೋಲಾರ, ಶಿವಮೊಗ್ಗ, ಹಾಸನ, ತುಮಕೂರು, ಮೈಸೂರು ಜಿಲ್ಲೆಯ ಹೆಚ್ಚಿನ ಶಾಸನಗಳು ಆರು ಸಂಪುಟಗಳಲ್ಲಿ Epigraphia carnaticaದ ಪುರವಣಿಗಳಾಗಿ ಪ್ರಕಟಗೊಂಡವು. ಹೀಗೆ ರೈಸ್‌ರವರಿಂದ ಪ್ರಕಟವಾದ E.C. ಸಂಪುಟಗಳು ಹಾಗೂ ಆರ್. ನರಸಿಂಹಾಚಾರ್, ಎಂ,ಎಚ್. ಕೃಷ್ಣ ಮೊದಲಾದ ನಾಡಿನ ಶಾಸನ ತಜ್ಞರಿಂದ ಪ್ರಕಟವಾದ E.C. ಪುರವಣಿ ಹಾಗೂ ಪುರಾತತ್ವ ಇಲಾಖೆಯ ವಾರ್ಷಿಕ ವರದಿ [M.A.R.]ಗಳಲ್ಲಿ ಸುಮಾರು 13,500 (13,296) ಶಾಸನಗಳು ಹಳೇ ಮೈಸೂರು ಪ್ರಾಂತ್ಯದಲ್ಲಿ ಪ್ರಕಟವಾದವು.

ಬಿ.ಎಲ್. ರೈಸ್‌ರವರು ಸಂಪಾದಿಸಿ ಪ್ರಕಟಿಸಿದ್ದ E.C.ಯ ಸಂಪುಟಗಳು ಸಂಶೋಧಕರಿಗೆ ದುರ್ಲಭವಾಗಿದ್ದ ಸಂದರ್ಭದಲ್ಲಿ ಅವುಗಳನ್ನು ಪರಿಷ್ಕರಿಸಿ ಪ್ರಕಟಿಸುವಂತಹ ಮಹತ್ವಪೂರ್ಣ ಕಾರ್ಯಯೋಜನೆಯನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಾ.ಮಾ. ನಾಯಕರು ನಿರ್ದೇಶಕರಾಗಿದ್ದ ಕಾಲದಲ್ಲಿ ಹಮ್ಮಿಕೊಂಡು ಆದರನ್ವಯ ಕೊಡಗು, ಶ್ರವಣಬೆಳಗೊಳ, ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ ಜಿಲ್ಲೆಯ ಶಾಸನಗಳನ್ನೊಳಗೊಂಡ ಹನ್ನೆರಡು ಬೃಹತ್ ಪರಿಷ್ಕೃತ ಶಾಸನ ಸಂಪುಟಗಳು ಹೊರಬಂದಿವೆ. ಮೈಸೂರು ಪ್ರಾಂತ್ಯದ ಉಳಿದ ಜಿಲ್ಲೆಗಳ ಪರಿಷ್ಕೃತ ಶಾಸನ ಸಂಪುಟಗಳ ಕಾರ್ಯ ಮಂದಗತಿಯಲ್ಲಿ ನಡೆದಿದ್ದು ಪ್ರಕಟನೆಯ ಕಾರ್ಯ ವಿಳಂಬಗೊಂಡಿದೆ.

ಪರಿಷ್ಕೃತ Epigraphia Carnaticaಗಳ ಸ್ವರೂಪ ರೈಸ್ ಸಂಪುಟಗಳಿಗಿಂತ ಸ್ವಲ್ಪ ವಿಭಿನ್ನವಾಗಿದೆ.

೧. ಕನ್ನಡವಲ್ಲದ ಶಾಸನಗಳಿಗೆ ಕನ್ನಡ ಲಿಪ್ಯಂತರದ ಜೊತೆಗೆ ರೋಮನ್ ಲಿಪ್ಯಂತರದೊಡನೆ ಕೊಡಲಾಗಿದೆ.

೨. ಬೇರೆ ಬೇರೆ ಮೂಲಗಳಲ್ಲಿ ಪ್ರಕಟವಾಗಿರುವ ಶಾಸನಗಳನ್ನು ಒಂದೆಡೆ ತರಲಾಗಿದೆ.

೩. ಪ್ರತಿಯೊಂದು ಶಾಸನವೂ ಚಿಕ್ಕ ಪರಿಚಯವನ್ನು ಆಂಗ್ಲ ಭಾಷೆಯಲ್ಲಿ ಹೊಂದಿದೆ.

೪. ಉಪಯುಕ್ತವಾದ ಅನುಬಂಧಗಳನ್ನು ಒಳಗೊಂಡಿದೆ. 1. ಶಾಸನಗಳು ದೊರೆತಿರುವ ಊರುಗಳ ಅಕಾರದಿ 2. ವಂಶಾನುಕ್ರಮದಲ್ಲಿ ಶಾಸನಗಳ ಸೂಚಿ 3, ಶಬ್ದ ಸೂಚಿ.

೫. ಪ್ರತಿಯೊಂದು ಸಂಪುಟವು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸುದೀರ್ಘವಾದ ಪ್ರಸ್ತಾವನೆಯನ್ನು ಒಳಗೊಂಡಿದೆ. ಶಾಸನಗಳನ್ನಾಧರಿಸಿ ಸಂಶೋಧನೆಯನ್ನು ಕೈಗೊಳ್ಳುವ ಸಂಶೋಧಕರಿಗೆ ಸಮಯ ಹಾಗೂ ಶ್ರಮದ ಉಳಿತಾಯವನ್ನು ಮಾಡಿವೆ ಎನ್ನಬಹುದು. ಉಳಿದ ಸಂಪುಟಗಳು ನಿರೀಕ್ಷಿಸಿದ ಮಟ್ಟದಲ್ಲಿ ಪ್ರಕಟಗೊಳ್ಳದೆ ಇರುವುದು ಈ ವಿಷಯದ ಆಸಕ್ತರಿಗೆ ಆತಂಕವನ್ನುಂಟುಮಾಡಿದೆ.

ಇತ್ತೀಚೆಗೆ ರೈಸ್‌ರ ಕಾಲದಲ್ಲಿ ಪ್ರಕಟವಾದ E.C.ಯ ಸಂಪುಟಗಳು ಹಾಗೂ ನಂತರದ ಕಾಲದಲ್ಲಿ ಪ್ರಕಟವಾದ E.C.ಯ ಪುರವಣಿಗಳನ್ನು ಭಾರತೀಯ ಇತಿಹಾಸ ಅನು ಸಂಧಾನ ಪರಿಷತ್ [I.C.H.R] ಗಣಕ ಯಂತ್ರಗಳಲ್ಲಿ ಅಳವಡಿಸಿ C.D.

ರೋವರ್‌ಗಳ ಮೂಲಕ ಹೊರ ತರುತ್ತಿರುವುದು ಮಹತ್ತರ ಸಂಗತಿ. ಈ ಪ್ರಯೋಗ ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಇಂಡಿಯಾದಲ್ಲೇ ಪ್ರಥಮ ಎನಿಸಿದೆ. ಇದು ಸಿದ್ಧವಾದರೆ ಸಂಶೋಧಕರಿಗೆ ವಿವಿಧ ರೀತಿಯಲ್ಲಿ E.C.ಯಲ್ಲಿಯ ಮಾಹಿತಿಗಳು ಅತಿ ಕಡಿಮೆ ವೇಳೆಯಲ್ಲಿ ಲಭ್ಯವಾಗುತ್ತವೆ. ಮೂಲ ಲಿಪ್ಯಂತರ, ಅನುವಾದ ಮೂರು ರೀತಿಗಳಲ್ಲಿ ಶಾಸನಗಳ ಪಠ್ಯವನ್ನು ಅಳವಡಿಸಲಾಗಿದೆ. ರಾಜನ ಹೆಸರನ್ನು ಸೂಚಿಸಿದರೆ ಆ ರಾಜನ ಹೆಸರಿನಲ್ಲಿ ದೊರೆಯುವ ಶಾಸನಗಳ ಸಂಖ್ಯೆ ಹಾಗೂ ಶಾಸನಗಳ ಪಠ್ಯ ಒಟ್ಟಿಗೆ ಒಂದೆಡೆ ದೊರೆಯಲಿರುವುದು ಇದರ ವಿಶೇಷ. ಒಂದು ಊರಿನಲ್ಲಿರುವ ಶಾಸನಗಳ ಪಟ್ಟಿ ಹಾಗೂ ಪಠ್ಯ ದೊರೆಯುವುದು ಇವೆಲ್ಲ ಬಹಳ ಉಪಯುಕ್ತವಾಗಿವೆ. ನಾಡಿನ ಶಾಸನಗಳನ್ನು ಕುರಿತು ಪಾಶ್ಚಾತ್ಯ ಸಂಶೋಧಕರು ತಾವು ಇರುವ ಸ್ಥಳದಲ್ಲಿಯೇ ಸಂಶೋಧನೆಯನ್ನು ಕೈಗೊಳ್ಳಲು ಅವಕಾಶ ಕಲ್ಪಿತವಾಗುತ್ತದೆನ್ನಬಹುದು.

2. **ಮದ್ರಾಸ್ ಅಧಿಪತ್ಯ :** ಭಾರತ ಸರ್ಕಾರದ ಪುರಾತತ್ತ್ವ ಇಲಾಖೆಯ ಶಾಸನ ವಿಭಾಗವು ದಕ್ಷಿಣ ಭಾರತದ ಶಾಸನಗಳನ್ನು South Indian Inscriptions ಹೆಸರಿನಲ್ಲಿ ಹಲವಾರು ಸಂಪುಟಗಳಲ್ಲಿ ಪ್ರಕಟಿಸಿದೆ. ಈ ಸಂಪುಟಗಳಲ್ಲಿ ಕೆಲವು ಸಂಪುಟಗಳು ಮದ್ರಾಸ್ ಅಧಿಪತ್ಯಕ್ಕೆ ಒಳಪಟ್ಟ ಕನ್ನಡ ಪ್ರದೇಶದ ಕೆಲವು ಶಾಸನಗಳನ್ನು ಒಳಗೊಂಡಿವೆ. ಅವುಗಳೆಂದರೆ S.I.I,ಸಂಪುಟ IV, V, VI, VIII, IX ಭಾಗ I ಮತ್ತು II, XVII, XXIV. ಈ ಸಂಪುಟಗಳಲ್ಲಿ ಎನ್. ಲಕ್ಷ್ಮೀನಾರಾಯಣ ರಾಯರು, ಆರ್. ಶ್ಯಾಮಾಶಾಸ್ತ್ರಿ ಮುಂತಾದ ಶಾಸನ ತಜ್ಞರ ಫಲವಾಗಿ ಬಳ್ಳಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು 900 ಶಾಸನಗಳು ಪ್ರಕಟವಾಗಿವೆ ಎನ್ನಬಹುದು. E.C. ಸಂಪುಟಗಳಲ್ಲಿ ಈಗಾಗಲೇ ನೋಡಿರುವಂತೆ ಪ್ರಾದೇಶಿಕ ವರ್ಗೀಕರಣ ಇದ್ದರೆ S.I.I. ಸಂಪುಟಗಳಲ್ಲಿ ವಂಶಾನುಕ್ರಮಾಧಾರಿತ ಹಾಗೂ ಕಾಲಾನುಕ್ರಮಣಿಕೆಯ ವರ್ಗೀಕರಣವನ್ನು ಗುರುತಿಸಬಹುದು.

3. **ಮುಂಬೈ, ಕರ್ನಾಟಕ :** ಉತ್ತರ ಕರ್ನಾಟಕದ ಶಾಸನಗಳನ್ನು ಸಂಗ್ರಹಿಸುವ ವ್ಯವಸ್ಥಿತವಾದ ಕಾರ್ಯ J.F. ಫ್ಲೀಟ್‌ರವರಿಂದ ಪ್ರಾರಂಭವಾಯಿತು. ಇವರು ಈ ಭಾಗದ 200ಕ್ಕೂ ಮೇಲ್ಪಟ್ಟ ಶಾಸನಗಳನ್ನು ಪ್ರಕಟಿಸಿದ್ದಾರೆ. ಇವರು ಈ ಭಾಗದ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿರುವಲ್ಲಿ ಅಧ್ಯಯನ ವ್ಯಾಪ್ತಿಯ ವಿಶಾಲತ್ವವನ್ನು ಗುರುತಿಸಬಹುದು. ಒಂದೊಂದು ಶಾಸನವನ್ನು ಟೀಕೆಯ ಸಹಿತ ಪ್ರಕಟಿಸಿದ್ದಾರೆ. ಶಾಸನ ದೊರೆತ ಸ್ಥಳ, ಶಾಸನದ ಗಾತ್ರ, ಅದು ಈಗ ಇರುವ ಸ್ಥಿತಿ, ಅದರ ಲಿಪಿ, ಲಿಪಿಯ ವೈಶಿಷ್ಟ್ಯ, ಆ ಶಾಸನಗಳ ಭಾಷೆ ಇತ್ಯಾದಿಗಳ ವಿವರ ಇವೆ.

ಮುಂಬೈ ಕರ್ನಾಟಕ ಪ್ರದೇಶದ ಶಾಸನಗಳಲ್ಲಿ ಸಮಾರು 2000 (1925) ಶಾಸನಗಳು South Indian Inscriptions ಸಂಪುಟ XI, XV, XVIII, XX ಸಂಪುಟಗಳಲ್ಲಿ ಆರ್. ಎಸ್. ಪಂಚಮುಖಿ, ಎನ್. ಲಕ್ಷ್ಮೀನಾರಾಯಣರಾಯರು,

ಪಿ. ಬಿ. ದೇಸಾಯಿ, ಜಿ. ಎಸ್. ಗಾಯಿ, ಶ್ರೀನಿವಾಸ ರಿತ್ತಿ, ಬಿ. ಆರ್. ಗೋಪಾಲ ಇವರ ಪರಿಶ್ರಮದಿಂದ ಪ್ರಕಟವಾಗಿವೆ. ಈ ಸಂಪುಟಗಳನ್ನು Bombay Karnataka Inscriptions, Vol. No. 1, 2, 3, 4. ಎಂದು ಕರೆಯುತ್ತಾರೆ.

ಮುಂಬೈ ಸರ್ಕಾರದ ವತಿಯಿಂದ ಮುಂಬೈ ಕರ್ನಾಟಕ ಪ್ರದೇಶದಲ್ಲಿ ಶಾಸನ, ಹಸ್ತಪ್ರತಿ, ನಾಣ್ಯಗಳ ಸಂಗ್ರಹ ಇತ್ಯಾದಿಗಳನ್ನು ಸಂಗ್ರಹಿಸುವ ಸಲುವಾಗಿ ಕನ್ನಡ ಸಂಶೋಧನಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯ ಮೂಲಕ 1500 ಶಾಸನಗಳನ್ನು ಪರಿವೀಕ್ಷಿಸಿ ಸಂಪಾದಿಸಿ Karnataka Inscriptions ಹೆಸರಿನ ಆರು ಸಂಪುಟಗಳಲ್ಲಿ ಆರ್. ಎಸ್. ಪಂಚಮುಖಿ, ಎ. ಎಂ. ಅಣ್ಣಿಗೇರಿ, ಬಿ. ಆರ್. ಗೋಪಾಲ್‌ರವರು ಪ್ರಕಟಿಸಿದ್ದಾರೆ. ಈ ಸಂಪುಟಗಳಲ್ಲಿ ವಿಸ್ತಾರ ಪ್ರಸ್ತಾವನೆ ಹಾಗೂ ಟಿಪ್ಪಣಿ ಇಂಗ್ಲಿಷ್‌ನಲ್ಲಿರುವುದನ್ನು ಗುರುತಿಸಬಹುದು. ಹಾಗೆಯೇ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಉತ್ತರ ಕರ್ನಾಟಕದ ಶಾಸನಗಳ ಪರಿವೀಕ್ಷಣೆ ಪ್ರಕಟನೆಯಂತಹ ಸಾಂಸ್ಥಿಕ ಸಂಯೋಜನೆಯನ್ನು ಹಮ್ಮಿಕೊಂಡು ಅದರನ್ವಯ ಶಾಸನಗಳ ಸೂಚಿಯ ರಚನೆಯಡಿಯಲ್ಲಿ ಧಾರವಾಡ ಹಾಗೂ ವಿಜಾಪುರ ಜಿಲ್ಲಾ ಶಾಸನ ಸೂಚಿ ಹಾಗೂ ಶಾಸನ ಪ್ರಕಟನೆಯ ಮಾಲಿಕೆಯಲ್ಲಿ ಧಾರವಾಡ ತಾಲ್ಲೂಕಿನ ಶಾಸನಗಳು ಮಾತ್ರ ಪ್ರಕಟವಾಗಿವೆ. ಈ ಮಹತ್ವ ಪೂರ್ವವಾದ ಕಾರ್ಯ ಸ್ಥಗಿತಗೊಂಡಿದೆ.

4. **ನಿಜಾಂ ಕರ್ನಾಟಕ :** ಉಳಿದ ಮೂರು ಪ್ರಾಂತಗಳಿಗೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಶಾಸನಗಳ ಸಂಗ್ರಹ– ಪ್ರಕಟನೆಯ ಕಾರ್ಯ ಅಷ್ಟಾಗಿ ನಡೆದಿಲ್ಲ ಎನ್ನಬಹುದು. ಹಾಗೆ ನೋಡಿದರೆ ಕನ್ನಡನಾಡಿನಲ್ಲಿ ಶಾಸನಗಳ ಸರ್ವೇಕ್ಷಣೆ, ಪ್ರಕಟನೆಯ ಕಾರ್ಯ ಮೊದಲಿಗೆ ಪ್ರಾರಂಭವಾದದ್ದು ಕರ್ನಲ್ ಮೆಕೆಂಝಿ ಹಾಗೂ ಸರ್ ವಾಲ್ಟೇರ್ ಇಲಿಯಟ್‌ನ ಮೂಲಕ ಈ ಭಾಗದಲ್ಲಿಯೆ. ನಿಜಾಂ ಕರ್ನಾಟಕದ ಸುಮಾರು 500 ಶಾಸನಗಳು ಇವರ ಕಾಲದಲ್ಲಿ ಸಂಗ್ರಹಿಸ್ಪಟ್ಟಿದ್ದವು. ನಂತರದ ಕಾಲದಲ್ಲಿ ಉಳಿದ ಭಾಗಗಳಿಗೆ ಹೋಲಿಸಿದರೆ ಈ ಭಾಗದಲ್ಲಿ ಹೇಳಿಕೊಳ್ಳುವಂತಹ ಕೆಲಸ ನಡೆದಿಲ್ಲ ಎನ್ನಬಹುದು.

ಆಂಧ್ರ ಪ್ರದೇಶ ಸರ್ಕಾರದ Govt. Archaeological Series ಮಾಲಿಕೆಯಲ್ಲಿ ಹಾಗೂ ತೆಲಂಗಾಣ ಶಾಸನಮುಲು ಎರಡು ಸಂಪುಟಗಳಲ್ಲಿ ನಿಜಾಂ ಕರ್ನಾಟಕದ ಹಾಗೂ ಆಂಧ್ರ ಪ್ರದೇಶದಲ್ಲಿಯ ಕೆಲವು ಕನ್ನಡ ಶಾಸನಗಳು ಪ್ರಕಟವಾಗಿವೆ. ದೇಶೀಯ ವಿದ್ವಾಂಸರು ವಿರಳವಾಗಿ ಈ ಭಾಗದಲ್ಲಿ ಶಾಸನಗಳ ಸಂಗ್ರಹ-ಪ್ರಕಟನೆಯಲ್ಲಿ ತೊಡಗಿಕೊಂಡಿದ್ದಾರೆ.

ಪಿ. ಬಿ. ದೇಸಾಯಿ ಅವರ Jainism in south India and Some Jaina Epigraphs ಪುಸ್ತಕದ ಅನುಬಂಧದಲ್ಲಿ ಈ ಭಾಗದ 53 ಶಾಸನಗಳನ್ನು ಟಿಪ್ಪಣಿ

ಗಳೊಂದಿಗೆ ಪ್ರಕಟಿಸಿದ್ದಾರೆ. ವ್ಹಿ. ಎಸ್. ಕುಲಕರ್ಣಿ ಅವರ Historical and cultural studies of the region around Basava kalyana ನಿಬಂಧದಲ್ಲಿ ಬೀದರ್ ಜಿಲ್ಲೆಯ 68 ಶಾಸನಗಳ ಪಠ್ಯಕೊಟ್ಟಿದ್ದಾರೆ. ವಿ. ಶಿವಾನಂದ ಅವರು ಮೆಕೆಂರ್ಝಿ ಸಂಗ್ರಹದಲ್ಲಿದ್ದ ಹಾಗೂ ತಾವು ಸಂಗ್ರಹಿಸಿದ್ದ ಸ್ವಂತದ ಶಾಸನಗಳನ್ನು ಸೇರಿಸಿ ಹೈದರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು ಎಂಬ ಸಂಪುಟವನ್ನು ಬನಾರಸ್ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮೂಲಕ ಪ್ರಕಟಿಸಿದ್ದಾರೆ. ಹನುಮಾಕ್ಷಿ ಗೋಗಿ ಹಾಗೂ ಬಿ. ಆರ್. ಹಿರೇಮಠ ಅವರು ಮುದೇನೂರು ಹಾಗೂ ಯಡ್ರಾಮಿ ಶಾಸನಗಳನ್ನು ಪ್ರಕಟಿಸಿದ್ದು 23 ಶಾಸನಗಳು ಪ್ರಕಟವಾಗಿವೆ. ಹನುಮಾಕ್ಷಿ ಗೋಗಿ ಅವರ ಸುರಪುರ ತಾಲ್ಲೋಕಿನ ಶಾಸನಗಳು ಹಾಗೂ ಕಲಬುರ್ಗಿ ಜಿಲ್ಲೆಯ ಶಾಸನಗಳನ್ನು ಉಲ್ಲೇಖಿಸಬಹುದು. ಈ ಭಾಗದ ಶಾಸನಗಳ ವ್ಯವಸ್ಥಿತ ಅಧ್ಯಯನ ತೀರ ವಿರಳ ಎಂದೇ ಹೇಳಬೇಕು.

ಶಾಸನಗಳ ಸರ್ವೇಕ್ಷಣೆ, ಸಂಗ್ರಹಣೆ, ವಾಚನ, ಅಧ್ಯಯನ, ಪ್ರಕಟನಕಾರ್ಯ ಶ್ರಮದಾಯಕವಾದುದು. ಆರ್ಥಿಕ ಸಹಾಯ, ತಾಳ್ಮೆ, ಅವಿರತ ಅಧ್ಯಯನ ಪ್ರಮುಖ. ಇಂತಹ ಸಂದರ್ಭದಲ್ಲಿ ಯಾವುದೇ ಸರ್ಕಾರದ ಸಹಾಯವಿಲ್ಲದೆ ವೈಯಕ್ತಿಕವಾಗಿ ಶಾಸನಗಳ ಸಂಗ್ರಹ, ಪ್ರಕಟನೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದವರೂ ಕಂಡು ಬರುತ್ತಾರೆ. ಅಂತಹವರಲ್ಲಿ ಪ್ರಮುಖರೆಂದರೆ, ಕೆ. ಜಿ. ಕುಂದಣಗಾರ, ಪಿ. ಬಿ. ದೇಸಾಯಿ, ಎಸ್. ಶೆಟ್ಟರ್, ಶ್ರೀನಿವಾಸರಿತ್ತಿ, ಹಂಪನಾ ಮೊದಲಾದವರು. ಕುಂದಣಗಾರರ Inscription in Northern Karnataka and Kolhapura State ಸಂಪುಟದಲ್ಲಿ ಒಟ್ಟು 43 ಶಾಸನಗಳು ವಿಸ್ತೃತವಾದ ಪ್ರಸ್ತಾವನೆ, ಪಠ್ಯ ಹಾಗೂ ಅನುವಾದದೊಂದಿಗೆ ಪ್ರಕಟವಾಗಿವೆ. ಪಿ. ಬಿ. ದೇಸಾಯಿಯವರ Studies Epigraphy ಅಥವಾ ಶಾಸನ ಪರಿಚಯದಲ್ಲಿ 53 ಶಾಸನಗಳು ಪ್ರಕಟವಾಗಿವೆ. ಹಂಪನಾರವರು ಸಂಪಾದಿಸಿ ಪ್ರಕಟಿಸಿರುವ ಹೊಂಬುಜದ ಶಾಸನಗಳು, ಕೊಪ್ಪಳದ ಶಾಸನಗಳು ಗಮನೀಯವಾದವುಗಳಾಗಿವೆ. ಕನ್ನಡ ವಿಶ್ವವಿದ್ಯಾಲಯದ ಶಾಸನ ವಿಭಾಗದ ಕಾರ್ಯವನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕು. Epigraphia Carnaticaದ ಮಾದರಿಯಲ್ಲಿಯೇ ಜಿಲ್ಲಾವಾರು ಮಟ್ಟದಲ್ಲಿ ದೇವರ ಕೊಂಡಾರೆಡ್ಡಿ ಅವರ ಸಂಪಾದಕತ್ವದಲ್ಲಿ ಬಳ್ಳಾರಿ ಜಿಲ್ಲೆಯ ಹಾಗೂ ಕೊಪ್ಪಳ ಜಿಲ್ಲೆಯ ಶಾಸನಗಳು ಪ್ರಕಟವಾಗಿವೆ. ನೆರೆಯ ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ದೊರೆತಿರುವ ಶಾಸನಗಳ ಪ್ರಕಟನೆಯಲ್ಲಿ ಆಸಕ್ತಿ ತೋರಿರುವ ಕೆ. ಆರ್. ಗಣೇಶ್ ಹಾಗೂ ಪಿ. ವಿ. ಕೃಷ್ಣಮೂರ್ತಿಯವರ ಕಾರ್ಯವೂ ಉಲ್ಲೇಖಾರ್ಹವಾಗಿದೆ.

ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶಾಸನಗಳ ಪರಿವೀಕ್ಷಣೆ ಹಾಗೂ ಪ್ರಕಟಣೆಯ ಕಾರ್ಯ ಮಂದಗತಿಯಲ್ಲಿ ನಡೆದಿರುವುದರ ಜೊತೆಗೆ ಯಾವ ಯಾವ ಶಾಸನಗಳು ಎಲ್ಲಿ ಎಲ್ಲಿ ಪ್ರಕಟವಾಗಿವೆ ? ಎಷ್ಟು ಪ್ರಕಟಿತ ? ಎಷ್ಟು ಅಪ್ರಕಟಿತ ? ಪುನರಾವರ್ತನೆ ಎಲ್ಲೆಲ್ಲಿ ತಲೆದೋರಿದೆ ಎಂಬ ವಿಷಯದಲ್ಲಿ ಅಧ್ಯಯನಾಸಕ್ತರಿಗೆ ಸಂದೇಹಗಳು ತಲೆದೋರಿವೆ. ಶಾಸನಗಳು ಪ್ರಕಟವಾಗಿರುವ ಸಂಪುಟಗಳು ಹಾಗೂ ನಿಯತ ಕಾಲಿಕೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಪ್ರಕಟವಾಗಿರುವ ಶಾಸನಗಳನ್ನು ಹುಡುಕುವುದು ಮೂಲ ಶಾಸನದ ಹತ್ತಿರ ಹೋಗಿ ಪಡಿಯಚ್ಚು ತೆಗೆದುಕೊಂಡು ಅಭ್ಯಸಿಸುವಷ್ಟೇ ತ್ರಾಸದಾಯಕವಾಗಿದೆ. ಶಾಸನಗಳ ಸಂಗ್ರಹದ ಕಾರ್ಯವನ್ನು ಯಾರು ಯಾವ ಪ್ರದೇಶದಲ್ಲಿ ಕೈಗೊಂಡಿದ್ದಾರೆ ಎಂಬುದರ ಪೂರ್ಣ ಮಾಹಿತಿ ದೊರೆಯದೆ ಇರುವ ಕಾರಣವೋ, ಮತ್ತಾವ ಕಾರಣವೋ ಶಾಸನಗಳ ಪ್ರಕಟನಾ ಕಾರ್ಯದಲ್ಲಿ ಪುನರುಕ್ತತೆ ತಲೆದೋರಿದೆ. ಪುನರುಕ್ತತೆಯಿಂದಾಗಿ ಹಣ ಹಾಗೂ ಸಮಯ ವ್ಯರ್ಥ ಎಂದೆನಿಸುತ್ತದೆ. ಈ ರೀತಿ ವ್ಯರ್ಥವಾಗುವ ಹಣ ಹಾಗೂ ಸಮಯವನ್ನು ಅಪ್ರಕಟಿತ ಶಾಸನಗಳನ್ನು ಪ್ರಕಟಿಸುವಲ್ಲಿ ವಿನಿಯೋಗಿಸಿದರೆ ಸಾರ್ಥಕವಾಗುತ್ತದೆ.

ಎರಡನೆ ರೀತಿಯ ಸಂಶೋಧನೆ

ಪ್ರಕಟಗೊಂಡ ಶಾಸನಗಳಲ್ಲಿಯ ವಸ್ತು ವಿಷಯಕ್ಕನುಗುಣವಾಗಿ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಇನ್ನಿತರ ಅಧ್ಯಯನವನ್ನು ನಡೆಸಿರುವುದು. ಶಾಸನಗಳನ್ನು ಪರೀಕ್ಷಿಸಿ ಪ್ರಕಟಿಸಿದ ತಜ್ಞರಲ್ಲಿ ಕೆಲವರು ಶಾಸನಗಳನ್ನಾಧರಿಸಿ ಇತಿಹಾಸವನ್ನು ರೂಪಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ನಿದರ್ಶನಕ್ಕೆ, ಬಿ. ಎಲ್. ರೈಸ್, ಜೆ. ಎಫ್. ಫ್ಲೀಟ್, ಮೊರೆಸ್ ಮೊದಲಾದವರು. ಬಿ. ಎಲ್. ರೈಸ್ ಅವರ Mysore and coorg from Inscription Mysore Gazatter, ಜೆ. ಎಫ್. ಫ್ಲೀಟ್ ಅವರ Dynasties of the Canerese Inscriptions. ಎರಡನೆಯ ರೀತಿಯ ಅಧ್ಯಯನದಲ್ಲಿ ಶಾಸನಗಳನ್ನು ಕುರಿತಾದ ಸಂಶೋಧನೆ ಆರಂಭದಲ್ಲಿ ಇತಿಹಾಸಕ್ಕೆ ಮಾತ್ರ ಸೀಮಿತವಾಗಿತ್ತು. ಇತಿಹಾಸದ ಅಧ್ಯಯನ ಕೇವಲ ರಾಜರ ಮತ್ತು ರಾಜಮನೆತನದ ಘಟನೆಗಳಿಗೆ ಸಂಬಂಧಪಟ್ಟ ದಾಖಲೆಗಳೆಂದು ಗ್ರಹಿಸಲಾಯಿತು. ಚರಿತ್ರೆಯ ವಿಷಯವು ರಾಜರ ಹೋರಾಟ ಗೆಲುವು-ಸೋಲುಗಳನ್ನು ವಿವರಿಸುವ ಕೆಲಸಕ್ಕೆ ಮಾತ್ರ ಸೀಮಿತವಾಯಿತು. ಹಿಂದಿನ ರಾಜರು ಆರ್ಥಿಕ, ಸಾಮಾಜಿಕ ಜೀವನವನ್ನು ರೂಪಿಸುವ ಶಕ್ತಿಯಾಗಿದ್ದರು ಎನ್ನುವ ಪರಿಕಲ್ಪನೆಯಿಂದ ಚರಿತ್ರೆಯನ್ನು ರೂಪಿಸಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ಚರಿತ್ರೆಯ ಅಧ್ಯಯನದಲ್ಲಿ ಶಾಸನಗಳನ್ನು ಮೂಲ ಸಾಮಗ್ರಿಯಾಗಿ ಗ್ರಹಿಸಿದ ಚರಿತ್ರೆಕಾರರು

ಅವುಗಳನ್ನು ಪ್ರತಿಯೊಂದು ರಾಜ ಅಥವಾ ರಾಜಮನೆತನದ ವ್ಯಕ್ತಿಗಳ ವೈಯಕ್ತಿಕ ವಿವರವನ್ನು ಮುಖ್ಯವಾಗಿ ವಿವರಿಸುವಲ್ಲಿ ತದನಂತರ ಅನುಬಂಧದೋಪಾದಿಯಲ್ಲಿ ರಾಜ ಕಟ್ಟಿಸಿದ ದೇವಾಲಯಕ್ಕೆ ಬಿಟ್ಟ ದತ್ತಿ, ಕವಿಗಳಿಗೆ ಕೊಟ್ಟ ಆಶ್ರಯ ಇತ್ಯಾದಿ ಬಿಡಿಬಿಡಿ ಸಂಗತಿಗಳನ್ನು ಗುರುತಿಸುವಷ್ಟಕ್ಕೆ ಸೀಮಿತವಾಗಿ ಬಳಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ. ಇಲ್ಲೆಲ್ಲಾ ಶಾಸನಗಳ ವಿಷಯಗಳನ್ನು ಇತಿಹಾಸದ ವರದಿಯಂತೆ ಬಳಸಿಕೊಳ್ಳಲಾಗಿದೆ. ಶಾಸನಗಳಲ್ಲಿ ವ್ಯಕ್ತಗೊಂಡ ಅರಸ ಹಾಗೂ ಇನ್ನಿತರ ಕಾರ್ಯಗಳೇ ಪ್ರಮುಖ ಎನ್ನುವ ಭಾವನೆಯನ್ನು ತಾಳಿದ ಹಾಗೆ ಕಂಡು ಬರುತ್ತದೆ. ಶಾಸನಗಳನ್ನಾಧರಿಸಿ ನಡೆಸಿದ ಈ ರೀತಿಯ ಅಧ್ಯಯನ ಕನ್ನಡ ನಾಡಿಗೆ ಸಂಬಂಧಿಸಿದ ಹಾಗೆ ಆರಂಭಿಕ ಅಧ್ಯಯನವಾಗಿತ್ತು. ಆರಂಭದ ಚರಿತ್ರಕಾರರು ಶಾಸನಗಳನ್ನು ಮೊದಲ ವರ್ಗದ ಆಕರಗಳ ನಿಖರವಾದ ದಾಖಲೆಗಳು ಎಂದು ಪರಿಭಾವಿಸಿದ್ದರಿಂದ ಶಾಸನಗಳು ಕೊಡುವ ಎಲ್ಲ ಮಾಹಿತಿಯು ಇವರಿಗೆ ಅತಿಮುಖ್ಯ ಎನಿಸಿಬಿಟ್ಟಿತು. ಶಾಸನಗಳು ವೈಭವೀಕರಿಸುವ ಸಂಗತಿಗಳನ್ನು ಸಂದೇಹಾಸ್ಪದವಾಗಿ ಪರಿಶೀಲಿಸದೆ ಅಧಿಕೃತ ದಾಖಲೆಗಳೆಂದು ಕಣ್ಣುಮುಚ್ಚಿಕೊಂಡು ಸ್ವೀಕರಿಸಿದರು. ಇದನ್ನು ರೈಸ್ ಅವರ Mysore and Coorg from Inscription ಪುಸ್ತಕದಲ್ಲಿ ಗುರುತಿಸಬಹುದು. ಪೌರಾಣಿಕ, ಧಾರ್ಮಿಕ ಪರಿಭಾಷೆಯ ಶಾಸನದ ವಿಷಯವನ್ನು ಅಧಿಕೃತ ಎಂದು ಭಾವಿಸಿದರು. ಶಾಸನವಲ್ಲದ ಉಳಿದ ಆಕರಗಳನ್ನು ಕಲ್ಪಿತ-ಅಲೌಕಿಕ ಎಂದು ಪರಿಭಾವಿಸಿ ಗಣನೆಗೆ ತೆಗೆದುಕೊಳ್ಳದ ಕಾರಣ ಈ ವಿಷಯದಲ್ಲಿ ಅವುಗಳನ್ನು ಪೂರಕ ಆಕರಗಳಾಗಿ ಬಳಸುವ ಪ್ರಯತ್ನ ಮಾಡಲಿಲ್ಲ. ಶಾಸನಗಳಂತಹ ಆಕರಗಳ ಸಾಂದರ್ಭಿಕ ನೆಲೆಗಳಿಂದ ಅಭಿವ್ಯಕ್ತವಾಗುವ ಊಹಾಸಾಧ್ಯತೆಗಳನ್ನು ಪೂರಕ ಆಕರಗಳೊಂದಿಗೆ ಹೋಲಿಸುವ ಪ್ರಯತ್ನ ಮಾಡಿರುವುದನ್ನು ಆರಂಭದ ಅಧ್ಯಯನದಲ್ಲಿ ಗುರುತಿಸಲಾಗುವುದಿಲ್ಲ.

ಗಂಗರ ತಾಮ್ರ ಪಟಗಳ ನೈಜತೆಯ ಬಗ್ಗೆ ಫ್ಲೀಟ್ ಮತ್ತು ರೈಸ್‌ರಲ್ಲಿ ನಡೆದ ವಾದ ವಿವಾದವನ್ನು ಇಲ್ಲಿ ಪ್ರಮುಖ ಅಂಶವಾಗಿ ಉಲ್ಲೇಖಿಸಬಹುದಾಗಿದೆ. ಏಕೆಂದರೆ ಕೂಟ ಶಾಸನಗಳು ಚರಿತ್ರೆಯ ರಚನೆಯಲ್ಲಿ ದಾಖಲಾಗಿ ಹೋಗಿ ಬಿಟ್ಟದ್ದು ಪ್ರಮುಖ ಅಂಶವಾಗಿದೆ. ಕೃತಕ ತಾಮ್ರ ಶಾಸನಗಳನ್ನು ಮೂಲ ಸಾಮಗ್ರಿಯನ್ನಾಗಿ ಸ್ವೀಕರಿಸುವಲ್ಲಿ ಇವರೀರ್ವರೂ ವಿಭಿನ್ನ ಧೋರಣೆಯನ್ನು ಅನುಸರಿಸಿದ್ದರು. ರೈಸರು ಕೃತಕ ತಾಮ್ರ ಶಾಸನಗಳನ್ನಾಧರಿಸಿ ಬರೆದ ಗಂಗರ ಚರಿತ್ರೆಯನ್ನು ತಿರಸ್ಕರಿಸುವಂತಹ ಪ್ರಯತ್ನ ನಡೆದಿದ್ದು ಮಹತ್ತರವಾದುದು. ತಾಮ್ರ ಶಾಸನಗಳ ನೈಜತ್ವವನ್ನು ಪೂರಕ ಆಕರಗಳ ಹಿನ್ನೆಲೆಯಲ್ಲಿ ಓರೆಗಲ್ಲಿಗೆ ತಿಕ್ಕಿ ಅವುಗಳ ಅಸ್ತಿತ್ವವನ್ನು ಪ್ರಶ್ನಿಸಿದ್ದನ್ನು ಗಮನಿಸಬಹುದಾಗಿದೆ.

ಸಾಹಿತ್ಯದ ಅಧ್ಯಾಪಕರು ಶಾಸನಗಳನ್ನು ಕುರಿತ ಅಧ್ಯಯನವನ್ನು ಕೈಗೊಂಡ ಮೇಲೆ ಶಾಸನಗಳನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆ ಉಂಟಾಯಿತು. ಅಲ್ಲಿಯವರೆಗೂ ಐತಿಹಾಸಿಕ ದಾಖಲೆಗಳ ಆಕರವಾಗಿದ್ದ ಶಾಸನಗಳನ್ನು ಸಾಂಸ್ಕೃತಿಕ ಸಾಹಿತ್ಯಕ ಹಿನ್ನೆಲೆಯಲ್ಲಿ ನೋಡುವ ಪರಿಕಲ್ಪನೆ ಉಂಟಾಯಿತು. ಶಾಸನಗಳಂತಹ ಆಕರಗಳಿಂದ ಗ್ರಹಿಸುವ ಸಾಂದರ್ಭಿಕ ನೆಲೆಗಳು, ಅಭಿವ್ಯಕ್ತವಾಗುವ ಊಹಾ ಸಾಧ್ಯತೆಗಳನ್ನು ವಿಭಿನ್ನ ನೆಲೆಗಟ್ಟಿನಲ್ಲಿ ಪೂರಕ ಶಿಸ್ತುಗಳೊಂದಿಗೆ ಅಧ್ಯಯನ ಮಾಡಲು ಪ್ರಯತ್ನಿಸಿದ್ದರು. ರಾಜಮನೆತನಗಳ ಇತಿಹಾಸವು ನಾಡಿನ ಇತಿಹಾಸ ರಚನೆಗೆ ಅಸ್ತಿಪಂಜರದಂತೆ ಎಂದು ಭಾವಿಸಿ ಈ ಅಸ್ತಿ ಪಂಜರಕ್ಕೆ ರಕ್ತ ಮಾಂಸಗಳನ್ನು ತುಂಬುವುದು ನಾಡಿನ ಜನತೆಯನ್ನು ಕುರಿತಾದ ಸಾಂಸ್ಕೃತಿಕ ಅಧ್ಯಯನ ಎಂದು ಮನಗಂಡರು.

ಶಾಸನಗಳನ್ನಾಧರಿಸಿದ ಸಾಂಸ್ಕೃತಿಕ ಸಂಶೋಧನಾ ಬರಹಗಳಲ್ಲಿ ಶಾಸನಗಳು ಹೇಳುವ ಬಿಡಿ ಘಟನೆಗಳೇ ಇತಿಹಾಸವೆನ್ನುವ ಹಳೆಯ ವಿಧಾನಕ್ಕಿಂತ ಮೂಲ ಆಕರಗಳು ತಮ್ಮ ಆಂತರಿಕ ಪ್ರಮಾಣಗಳ ಮೂಲಕ ಬಾಹ್ಯ ವಾತಾವರಣವೊಂದರ ಗ್ರಹಿಕೆಗೆ ಅವಕಾಶ ಕಲ್ಪಿಸಿಕೊಡುವ ಸಂಸ್ಕೃತಿಯ ವಿನ್ಯಾಸಗಳು ಎಂಬ ನಿಲುವು ಗ್ರಹಿತವಾಗಿದೆ. ಈ ರೀತಿಯ ಅಧ್ಯಯನವು ಎಂ. ಚಿದಾನಂದಮೂರ್ತಿ ಅವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದ ಮೂಲಕ ಪ್ರಾರಂಭವಾಯಿತೆನ್ನಬಹುದು. ಶಾಸನಗಳನ್ನು ಹೊಸನಿಟ್ಟಿನಲ್ಲಿ ನೋಡಲು ಆ ಕ್ಷೇತ್ರದ ಆಸಕ್ತರಿಗೆ ಇದು ಪ್ರೇರಣೆ-ಪ್ರಚೋದನೆಯನ್ನು ನೀಡಿತೆನ್ನಬಹುದು. ಇದರಲ್ಲಿ, ಕ್ರಿ.ಶ. 450 ರಿಂದ 1150 ರವರೆಗಿನ ಶಾಸನಗಳನ್ನು ಇಟ್ಟುಕೊಂಡು ಸಾಂಸ್ಕೃತಿಕ ಅಧ್ಯಯನ ಮಾಡಿರುವುದನ್ನು ಗುರುತಿಸಬಹುದಾಗಿದೆ. ಶಾಸನಗಳಲ್ಲಿ ರಾಜಕೀಯ ಸಂಗತಿಗಳನ್ನು ಹೊರತುಪಡಿಸಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಂಶಗಳನ್ನು ಸಂಗ್ರಹಿಸಲಾಗಿದೆ. ಶಾಸನಗಳಿಂದ ವ್ಯಕ್ತವಾಗುವ ಸಂಗತಿಗಳನ್ನು ಅನ್ಯ ಶಿಸ್ತುಗಳಲ್ಲಿಯ ಆಕರಗಳ ಮೂಲಕ ಸಮರ್ಥಿಸಲು ಪ್ರಯತ್ನ ಪಟ್ಟಿರುವುದನ್ನು ಗುರುತಿಸಬಹುದು.

ಸಂಸ್ಕೃತಿಯ ವಿವಿಧ ಮಜಲುಗಳಾದ ಧಾರ್ಮಿಕ ವಿವರ, ದೇವಾಲಯ, ವಿದ್ಯಾಭ್ಯಾಸ, ಯುದ್ಧ ಪದ್ಧತಿ, ವೀರ ಜೀವನ, ಆಡಳಿತ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳ ಕುರಿತ ವಿಶ್ಲೇಷಣೆಯನ್ನು ಶಾಸನಗಳನ್ನಾಧರಿಸಿ ಪೂರಕ ಆಕರಗಳೊಂದಿಗೆ ಅಧ್ಯಯನ ಮಾಡಲಾಗಿದೆ. ಇವರ ಶಾಸನಗಳನ್ನು ಕುರಿತ ವಿಭಿನ್ನ ನೋಟದ ಅಧ್ಯಯನ ನಂತರದ ಸಂಶೋಧಕರಿಗೆ ಸಂಸ್ಕೃತಿಯ ವಿವಿಧ ಅಂಗಗಳನ್ನು ಪ್ರತ್ಯೇಕವಾಗಿ ಕೈಗೊಳ್ಳಲು ಅನುಕರಣೀಯವಾಗಿರುವುದನ್ನು ಗಮನಿಸಬಹುದು. ಇಲ್ಲೆಲ್ಲಾ ಶಾಸನಗಳನ್ನು ಬಹುಮುಖ ಅಧ್ಯಯನಕ್ಕೆ ಒಳಪಡಿಸಿ ನಡೆಸಿರುವುದನ್ನು ಗುರುತಿಸಬಹುದು.

ಪ್ರಾಚೀನ ಹಾಗೂ ಮಧ್ಯಕಾಲೀನ ಯುಗದ ವರ್ತಕರ ಚಟುವಟಿಕೆಗಳನ್ನು ಕುರಿತಾದ ಅಧ್ಯಯನ ನಡೆದಿರುವುದನ್ನು ಬಿ. ಆರ್. ಹಿರೇಮಠರ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು' ಎಂಬ ನಿಬಂಧದಲ್ಲಿ ಗುರುತಿಸಬಹುದು. ವರ್ತಕರು ತಮ್ಮ ವಾಣಿಜ್ಯಕ್ಕೆ ಸೀಮಿತವಾಗಿರದೆ ಸಮಾಜದ ಘಟಕವಾಗಿದ್ದು ಆ ಕಾಲದ ಸಾಮಾಜಿಕ-ಧಾರ್ಮಿಕ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದರ ವಿಶ್ಲೇಷಣೆ ಶಾಸನಗಳನ್ನಾಧರಿಸಿ ನಡೆದಿದೆ. ಶಾಸನಗಳಲ್ಲಿ ಹುದುಗಿರುವ ಮಾಹಿತಿಗಳ ಹಿನ್ನೆಲೆಯಲ್ಲಿ ಪ್ರಾಚೀನ ಹಾಗೂ ಮಧ್ಯ ಕಾಲೀನ ಯುಗದ ಮಹಿಳಾ ಜೀವನಕ್ಕೆ ಸಂಬಂಧಪಟ್ಟ ಅಧ್ಯಯನ ಕೂಡ ನಡೆದಿದೆ. ಸ್ತ್ರೀಯರ ವಿದ್ಯಾಭ್ಯಾಸ, ಕಲೆ, ಧಾರ್ಮಿಕ ಕಲಾಪ, ಆಡಳಿತ, ಯುದ್ಧಗಳಲ್ಲಿ ಭಾಗವಹಿಸಿದ್ದರ ಚಿತ್ರಣ, ಲೋಕೋಪಯೋಗಿ ಕಾರ್ಯಗಳ ವಿವರಗಳನ್ನು ಕುರಿತ ಅಧ್ಯಯನ ಶಾಸನಗಳನ್ನಾಧರಿಸಿ ನಡೆದಿದೆ. ನಿದರ್ಶನಕ್ಕೆ ಚೆನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಸ್ತ್ರೀ ಸಮಾಜ' ಸಾಮುದಾಯಿಕ ಬದುಕಿನಲ್ಲಿ ಎಷ್ಟರ ಮಟ್ಟಿಗೆ ದೇವಾಲಯಗಳ ಅವಶ್ಯಕತೆ ಇದ್ದಿತು, ಅವುಗಳ ನಡುವೆ ಪರಸ್ಪರತೆ ಕೊಳು-ಕೊಡಿಗೆ ಗಳೆಂತಹವು, ಸಮುದಾಯವನ್ನು ದೇವಾಲಯಗಳು ಎಷ್ಟರ ಮಟ್ಟಿಗೆ ನಿಯಂತ್ರಿಸಿದ್ದವು. ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದುಕಿನಲ್ಲಿ ದೇವಾಲಯಗಳ ಪಾತ್ರವೆಂತಹದ್ದು ಎಂಬಂತಹ ಅಧ್ಯಯನಗಳು ಶಾಸನಗಳನ್ನಾಧರಿಸಿ ನಡೆದಿವೆ. ಉದಾಹರಣೆಗೆ, ಎಚ್. ಎಸ್. ಗೋಪಾಲರಾವ್ ಅವರ 'ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ', ದೇವರ ಕೊಂಡಾರೆಡ್ಡಿ ಅವರ 'ತಲಕಾಡಿನ ಗಂಗರ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ' ಮೊದಲಾದುವನ್ನು ಗಮನಿಸ ಬಹುದು.

ಯುದ್ಧದ ಚರಿತ್ರೆ, ಪ್ರಾಚೀನ ಕರ್ನಾಟಕದ ವೀರರ ವೇಷ ಭೂಷಣಗಳು, ಒಡವೆಗಳು, ಆಯುಧ ಪ್ರಕಾರಗಳು, ಕನ್ನಡ ನಾಡಿನ ಕ್ಷಾತ್ರದ ಹಿನ್ನೆಲೆಯನ್ನು ಕುರಿತಾದ ಅಧ್ಯಯನ ಇತ್ಯಾದಿಗಳು ಶಾಸನಗಳ ಪಠ್ಯ ಹಾಗೂ ಶಿಲ್ಪಗಳನ್ನಾಧರಿಸಿ ನಡೆದಿರುವುದನ್ನು 'ಕರ್ನಾಟಕದ ವೀರಗಲ್ಲುಗಳು', 'ಕನ್ನಡ ಶಾಸನ ಶಿಲ್ಪ' ಇತ್ಯಾದಿ ನಿಬಂಧಗಳಲ್ಲಿ ಗುರುತಿಸಬಹುದು. ಮಹಾಸತಿಗೆ ಸಂಬಂಧಿಸಿದ ವಿವರಗಳನ್ನು ಶಾಸನಗಳು ಹಾಗೂ ಪೂರಕ ಆಕರಗಳೊಂದಿಗೆ ವಿಶ್ಲೇಷಣಾತ್ಮಕವಾಗಿ ನಡೆಸಿರುವುದನ್ನು ಕಲ್ಗುಡಿಯವರ 'ಮಹಾಸತಿ ಆಚರಣೆ ಒಂದು ಅಧ್ಯಯನ' ಪುಸ್ತಕದಲ್ಲಿ ಗುರುತಿಸ ಬಹುದು. ಹಾಗೆಯೇ ಕನ್ನಡ ನಾಡಿನ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಾದ ಶ್ರವಣಬೆಳ್ಗೊಳ, ಬಳ್ಳಿಗಾವೆ, ಬನವಾಸಿ, ಪುಲಿಗೆರೆ, ಕುಕನೂರು, ಹಂಪೆ, ಹೊಂಬುಜ ಮುಂತಾದವುಗಳನ್ನು ಕುರಿತು ಶಾಸನಗಳನ್ನಾಧರಿಸಿ ಪೂರಕ ಆಕರಗಳೊಂದಿಗೆ ವ್ಯಾಪಕವಾದ ಅಧ್ಯಯನ ನಡೆದಿದೆ. ಪ್ರಾಚೀನ ಕರ್ನಾಟಕದ ಭೌಗೋಲಿಕ ವಿಭಾಗ ಗಳನ್ನು ಕುರಿತಾದ ಸಾಂಸ್ಕೃತಿಕ ಅಧ್ಯಯನ ನಡೆದಿದೆ, ತರ್ದವಾಡಿ ಒಂದು ಅಧ್ಯಯನ, ನಾಗರ ಖಂಡ ಎಪ್ಪತ್ತು, ಬೆಳ್ವೊಲ 300, ಕೋಗಳಿ ನಾಡು 30 ಇತ್ಯಾದಿ

ಭೌಗೋಲಿಕ ಪ್ರದೇಶಗಳ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಧ್ಯಯನವು ಶಾಸನಗಳ ನ್ನಾಧರಿಸಿ ನಡೆದಿದೆ.

ಕೆಲವು ಸಂಶೋಧನಾ ಲೇಖನಗಳಲ್ಲಿ ಮೂಲಗಳ ಆಂತರಿಕ ಪ್ರಮಾಣಗಳಿಂದಲೇ ಹೊರಡುವ ಸಂಗತಿಗಳನ್ನು ವಿಶ್ಲೇಷಿಸುವುದರ ಮೂಲಕ ಸಾಂಸ್ಕೃತಿಕ ಚರಿತ್ರೆಯ ಅಂಶಗಳನ್ನು ಗುರುತಿಸಿರುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಎಸ್. ಶೆಟ್ಟರ್ ಅವರ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಸಂಪುಟ 3 ರಲ್ಲಿಯ 'ಕ್ರಿ. ಶ. 1150 ರಿಂದ 1350 ರವರೆಗಿನ ಕರ್ನಾಟಕ ಧಾರ್ಮಿಕ ಸಾಮಾಜಿಕ ಜೀವನ' ಎಂಬ ಲೇಖನ ಹಾಗೂ ಕೆ. ವಿ. ರಮೇಶರ 'ಕರ್ನಾಟಕ ಶಾಸನ ಸಮೀಕ್ಷೆ' ಲೇಖನಗಳನ್ನು ಉದಾಹರಿಸಬಹುದು.

ಎಸ್. ಶೆಟ್ಟರ್ ಅವರು ಜೈನಧರ್ಮದ ಅವನತಿಯನ್ನು ಶಾಸನಗಳ ಮೂಲಕ ತಿಳಿದುಕೊಂಡಿದ್ದು ಹೀಗೆ : ಕ್ರಿ. ಶ. 1220-1336ರ ವರೆಗೆ ಸಿಗುವ ಎಲ್ಲಾ ಹೊಯ್ಸಳ ಶಾಸನಗಳನ್ನು ಅಭ್ಯಾಸ ಮಾಡಿದಾಗ ಎಲ್ಲಿಯೂ ಹೊಯ್ಸಳ ರಾಜರು ಹೊಸ ದೇವಾಲಯಗಳನ್ನು ಕಟ್ಟಿಸಿದ್ದು ಕಾಣುವುದಿಲ್ಲ. ಹಳೆಯ ಬಸದಿಗಳಿಗೆ ದತ್ತಿ ಅಥವಾ ಜೀರ್ಣೋದ್ಧಾರಗಳನ್ನು ಮಾಡಿಸಿದ ಉಲ್ಲೇಖಗಳು ಕಂಡು ಬರುತ್ತವೆ. ವೈಷ್ಣವ ದೇವಾಲಯಗಳ ಹೊಸ ನಿರ್ಮಾಣ ಈ ಕಾಲದಲ್ಲಿ ಹೆಚ್ಚು ಆಗಿದೆ. ಈ ವಿವರ ದಲ್ಲಿ ಘಟನೆಗಳೇ ಇತಿಹಾಸ ಎಂದು ತಿಳಿದರೆ ದತ್ತಿ ಹಾಗೂ ಜೀರ್ಣೋದ್ಧಾರಗಳು ರಾಜನು ಮಾಡಿದ ಸಾಮಾಜಿಕ ಕಾರ್ಯಗಳಾಗಿ ಪರಿವರ್ತನೆ ಹೊಂದುತ್ತವೆ. ಆದರೆ ಮೂಲತಃ ಈ ಸಂಗತಿಗಳು ಅಂದರೆ ಜಿನಾಲಯಗಳಿಗೆ ಸಂಬಂಧಿಸಿದ ಆ ವಿವರಗಳು ಅಂದು ಹಾಳು ಬೀಳುತ್ತಿದ್ದ ಜಿನಾಲಯಗಳ ಚಿತ್ರಣ ತಿಳಿಸುವುದರ ಜೊತೆಗೆ ಕ್ರಿ. ಶ. 1150 ಕ್ಕಿಂತ ಹಿಂದೆ ಜೈನರಿಗಿದ್ದ ಪ್ರತಿಷ್ಠಿತ ಸ್ಥಾನ ಕಳೆದು ಹೋದುದನ್ನು ಪೂರಕ ವಾಗಿ ತಿಳಿಸುತ್ತವೆ.

ಜೈನ ಧರ್ಮದ ಶಾಖೆಯಾದ ಯಾಪನೀಯ ಪಂಥದ ಬಗೆಗೆ ಅಧಿಕೃತವಾಗಿ ಮಾಹಿತಿಗಳೇ ಇಲ್ಲವೆನ್ನುವ ಪರಿಸ್ಥಿತಿಯಲ್ಲಿ ಹಂಪನಾರವರು ಉತ್ತರ ಕರ್ನಾಟಕ ಹಾಗೂ ಹೈದರಬಾದ್ ಕರ್ನಾಟಕದಲ್ಲಿ ದೊರಕುವ ಈ ಪಂಥಕ್ಕೆ ಸಂಬಂಧಿಸಿದ ಶಾಸನ ಗಳ ಹಿನ್ನೆಲೆಯಲ್ಲಿ ಕನ್ನಡ ನಾಡಿನಲ್ಲಿ ಆ ಪಂಥದ ಅಸ್ತಿತ್ವ ಹಾಗೂ ಯಾಪನೀಯ ಪಂಥದ ಒಟ್ಟು ಚಿತ್ರಣವನ್ನು ಗುರುತಿಸಿದ್ದು ಬಹು ಮುಖ್ಯವಾದ ಸಂಗತಿ.

ಸಾಹಿತ್ಯದ ಅಧ್ಯಾಪಕರು ಶಾಸನಗಳ ಬಹುಮುಖ ಅಧ್ಯಯನದತ್ತ ತೊಡಗಿದ ಮೇಲೆ ಸಾಂಸ್ಕೃತಿಕ ವಿಷಯಗಳ ಅಧ್ಯಯನಕ್ಕಷ್ಟೇ ಸೀಮಿತರಾಗದೆ ಸಾಹಿತ್ಯಕ ಅಧ್ಯಯನ, ಭಾಷಿಕ ಅಧ್ಯಯನ, ಛಂದಸ್ಸಿನ ಅಧ್ಯಯನದಲ್ಲಿಯೂ ಶಾಸನಗಳನ್ನು ಆಕರಗಳಾಗಿ ಬಳಸಿಕೊಳ್ಳಬಹುದು ಎಂಬುದನ್ನು ಕೆಲವೊಂದು ಅಧ್ಯಯನಗಳ ಮೂಲಕ ತೋರಿಸಿ ಕೊಟ್ಟಿದ್ದಾರೆ.

ಪಂಪ ಪೂರ್ವಯುಗದ ಸಾಹಿತ್ಯದ ಸ್ವರೂಪವನ್ನು ಗುರುತಿಸಲಿಕ್ಕೆ ಶಾಸನಗಳನ್ನೇ ಅವಲಂಬಿಸಬೇಕಾಗಿದೆ. ಕನ್ನಡ ಸಾಹಿತ್ಯದ ಪ್ರಥಮ ಘಟ್ಟದ ಅವಶೇಷಗಳು ಎಂದರೆ ಶಾಸನಗಳು. ಪಂಪ ಪೂರ್ವಯುಗದಲ್ಲಿ ಕಾವ್ಯ ಗುಣವುಳ್ಳ ಬಿಡಿ ಬಿಡಿ ಮುಕ್ತಗಳು ಚಿತ್ರದುರ್ಗದ ತಮಟ ಕಲ್ಲಿನ ಶಾಸನ, ಶ್ರವಣಬೆಳ್ಗೊಳದ ನಿಷಧಿ ಶಾಸನಗಳಲ್ಲಿ ಕಂಡು ಬರುವುದನ್ನು ಗುರುತಿಸಿದ್ದಾರೆ. ನಿಷಧಿ ಶಾಸನಗಳು ಕನ್ನಡ ನಾಡಿನ ಪ್ರಥಮ ಸಾಹಿತ್ಯ ಪಾಠಗಳೆಂದು ಕರೆಯಲ್ಪಟ್ಟಿವೆ. ಅದೇ ರೀತಿ ಸಾಹಿತ್ಯ ಕೃತಿಗಳ ರಚನೆಯ ಕಾಲ, ಕವಿಯ ಕಾಲ, ಜನ್ಮ ಸ್ಥಳ ಇತ್ಯಾದಿಗಳನ್ನು ಅರಿಯುವಲ್ಲಿ ಶಾಸನಗಳು ಎಷ್ಟರ ಮಟ್ಟಿಗೆ ನೆರವನ್ನು ನೀಡಿವೆ ಎಂಬುದನ್ನು ಎ. ವೆಂಕಟ ಸುಬ್ಬಯ್ಯನವರ ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಕವಿಚರಿತೆಯ ಮೂರು ಸಂಪುಟಗಳು, ಗೋವಿಂದ ಪೈ ಅವರ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಲೇಖನಗಳು, ಮೈಸೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರಗಳ ಸಾಂಸ್ಥಿಕ ಸಾಹಿತ್ಯ ಚರಿತ್ರೆಯ ಸಂಪುಟಗಳು ಹಾಗೂ ಕೆಲವು ನಿಯತ ಕಾಲಿಕೆಗಳಲ್ಲಿಯ ಲೇಖನಗಳಲ್ಲಿ ಗುರುತಿಸಬಹುದಾಗಿದೆ.

ಯಾವುದೇ ಶತಮಾನದ ಸಾಹಿತ್ಯದ ಅಧ್ಯಯನಕ್ಕೆ ಹಿನ್ನೆಲೆಯಾದ ಸಾಮಾಜಿಕ ಜೀವನವನ್ನು ಅರಿಯಲು ಶಾಸನಗಳ ನೆರವು ಅಗತ್ಯ ಎಂಬುದನ್ನು ಚಿದಾನಂದ ಮೂರ್ತಿ ಅವರ 'ಪಂಪ ಕವಿ ಹಾಗೂ ಮೌಲ್ಯ ಪ್ರಸಾರ', 'ಪಂಪ ಕವಿ ಮತ್ತು ಯುಗ ಧರ್ಮ' ಎಂಬ ಲೇಖನಗಳಲ್ಲಿ ಗುರುತಿಸಿರುವುದನ್ನು ಕಾಣಬಹುದು. ಹತ್ತನೇ ಶತಮಾನದ ಪಂಪ ರನ್ನರ ಕಾವ್ಯಗಳನ್ನು ಅರ್ಥೈಸಲು ಶಾಸನಗಳ ನೆರವು ಅಗತ್ಯ ಎಂಬುದನ್ನು ಗುರುತಿಸಲಾಗಿದೆ.

ಕನ್ನಡ ಸಾಹಿತ್ಯದ ಇಬ್ಬರು ಕವಿಗಳಾದ ಪಂಪ ಹಾಗೂ ಬಸವಣ್ಣನವರಿಗೆ ಸಂಬಂಧಿಸಿದ ಹಾಗೆ ಜಿನವಲ್ಲಭನ ಕುರಿಕ್ಯಾಲ ಶಾಸನ ಹಾಗೂ ಅರ್ಜುನವಾಡ ಶಿಲಾ ಶಾಸನಗಳನ್ನು ಕುರಿತ ಸಂಶೋಧನಾ ಲೇಖನಗಳು ಬಹಳ ಮಹತ್ವದವುಗಳಾಗಿವೆ. ಶಾಸನಗಳು ಸಾಹಿತ್ಯದ ದೃಷ್ಟಿಯಿಂದಲೂ ಬಹಳ ಗಮನಾರ್ಹ ಎಂಬುದನ್ನು ಜನ ಸಾಮಾನ್ಯರಲ್ಲಿ ಮನಗಾಣಿಸುವಂತಹ ಪ್ರಯತ್ನಗಳು ನಡೆದಿವೆ. 1923ರ ಸುಮಾರಿನಲ್ಲಿಯೇ ಆರ್. ನರಸಿಂಹಾಚಾರ್ಯರು ಶಾಸನಗಳ ಕಾವ್ಯ ಸೌಂದರ್ಯವನ್ನು ಕಂಡುಕೊಂಡು ಅವುಗಳ ಸಂಗ್ರಹವನ್ನು ತರುವ ಪ್ರಯತ್ನವನ್ನು ಶಾಸನ ಪದ್ಯ ಮಂಜರಿ ಪುಸ್ತಕದ ಮೂಲಕ ಮಾಡಿದ್ದಾರೆ. ಶಾಸನ ಸಾಹಿತ್ಯ ಶೈಲಿಯ ಮತ್ತು ಸೊಬಗಿನ ರಸವನ್ನು ಸ್ವಲ್ಪ ಮಟ್ಟಿಗಾದರೂ ಆಸ್ವಾದನ ಮಾಡಲು ಇಲ್ಲಿ ಅವಕಾಶ ಕಲ್ಪಿತವಾಗಿದೆ. ಮೋವುಂಡಿ ಮಲ್ಲಾರಿ ಮತ್ತು ಎ. ಎಂ. ಅಣ್ಣಿಗೇರಿಯವರ 'ಶಾಸನ ಸಾಹಿತ್ಯ ಸಂಚಯ'. ಆರ್. ಸಿ. ಹಿರೇಮಠ ಹಾಗೂ ಎಂ. ಎಂ. ಕಲಬುರ್ಗಿ ಅವರ 'ಶಾಸನ ಸಂಪದ', ಎ. ಎಂ. ಅಣ್ಣಿಗೇರಿ ಮತ್ತು ಆರ್. ಶೇಷಶಾಸ್ತ್ರಿಯವರ 'ಶಾಸನ ಸಂಗ್ರಹ' ಪುಸ್ತಕಗಳು

ಶಾಸನಗಳಲ್ಲಿ ಆಸಕ್ತಿಯುಳ್ಳ ಜನರ ಸಲುವಾಗಿ ರೂಪುಗೊಂಡಿದ್ದು ಶಾಸನಗಳ ಹಿರಿಮೆಯನ್ನು ಪ್ರಾತಿನಿಧಿಕ ಶಾಸನಗಳ ಮೂಲಕ ಮನಗಾಣಿಸಲು ಪ್ರಯತ್ನಿಸಿವೆ.

ಕನ್ನಡ ಭಾಷೆಯ ಚರಿತ್ರೆಯನ್ನು ಅಧ್ಯಯನ ಮಾಡುವಲ್ಲಿ, ಅದರಲ್ಲೂ ಕನ್ನಡ ಸಾಹಿತ್ಯದ ಆರಂಭ ಕಾಲದಿಂದ ಪಂಪನವರೆಗೆ ಕನ್ನಡ ಭಾಷೆ ಬೆಳೆದು ಬಂದ ಬಗೆಯನ್ನು ಅರಿಯುವಲ್ಲಿ ಶಾಸನಗಳ ನೆರವು ಅತ್ಯಗತ್ಯ ಎಂಬುದನ್ನು ಈವರೆಗೆ ನಡೆದಿರುವ ಅಧ್ಯಯನದಿಂದ ತಿಳಿಯಬಹುದಾಗಿದೆ. ಕನ್ನಡ ಭಾಷಾ ಅವಸ್ಥಾ ಭೇದಗಳಲ್ಲಿ ಒಂದಾದ ಪೂರ್ವದ ಹಳಗನ್ನಡದ ಸ್ವರೂಪವನ್ನು ತಿಳಿಯಲು ಸಂಬಂಧಿಸಿದ ಪ್ರಯೋಗಗಳನ್ನು ಶಾಸನಗಳಲ್ಲಿಯೇ ಗುರುತಿಸಲಾಗಿದೆ. ಈ ನಿಟ್ಟಿನಲ್ಲಿ ಎ. ಎನ್. ನರಸಿಂಹಯ್ಯ, ಜಿ. ಎಸ್. ಗಾಯ್, ಕೆ. ಕುಶಾಲಪ್ಪ ಗೌಡ, ಎಂ. ಬಿ. ನೇಗಿನ ಹಾಳ ಅವರ ಅಧ್ಯಯನವನ್ನು ಹೆಸರಿಸಬಹುದು.

ಛಂದಸ್ಸಿನ ಅಧ್ಯಯನದಲ್ಲಿಯೂ ಶಾಸನಗಳನ್ನು ಆಕರಗಳಾಗಿ ಬಳಸಿಕೊಂಡಿರುವ ಪ್ರಯತ್ನವನ್ನು ಗುರುತಿಸಬಹುದಾಗಿದೆ. ಆರಂಭ ಕಾಲದ ಚಂಪೂವಿನ ಛಂಧೋವೈವಿಧ್ಯತೆಯನ್ನು ತಿಳಿಯುವಲ್ಲಿ, ಸಂಸ್ಕೃತದಿಂದ ಕನ್ನಡಕ್ಕೆ ಹೊಸದಾಗಿ ಅಕ್ಷರ ವೃತ್ತಗಳನ್ನು ಸ್ವೀಕರಿಸಿದಾಗ ಇದ್ದ ಪರಿಸ್ಥಿತಿಯ ಚಿತ್ರಣವನ್ನು ಶಾಸನಗಳಲ್ಲಿ ಗುರುತಿಸಿರುವುದನ್ನು ಉಲ್ಲೇಖಿಸಬಹುದು. ಹಾಗೆಯೇ ಕಂದ, ತ್ರಿಪದಿ ಛಂದೋ ಪ್ರಕಾರಗಳ ಪ್ರಾಚೀನ ಪ್ರಯೋಗಗಳು ಶಾಸನಗಳಲ್ಲಿಯೇ ದೊರೆತಿರುವುದನ್ನು ಗುರುತಿಸಲಾಗಿದೆ. ಅಂಶ ಷಟ್ಪದ ಪ್ರಯೋಗಗಳು, ಹಾಗೂ ಅಂಶ ಷಟ್ಪದದಲ್ಲಿ ರಚನೆಗೊಂಡ ಏಕೈಕ ಕಾವ್ಯ ಎಂದು ಪರಿಗಣಿತವಾದ 'ವಿವಾಹ ಪುರಾಣ' ಎನ್ನುವ ಕಾವ್ಯ ಶಾಸನಗಳಲ್ಲಿಯೇ ಕಂಡು ಬಂದಿರುವುದನ್ನು ಗಮನಿಸಲಾಗಿದೆ. ಹರಿಹರನಿಗಿಂತ ಎರಡು ಶತಮಾನಗಳ ಪೂರ್ವದಲ್ಲಿಯೇ ಲಲಿತ ರಗಳೆಯ ಲಕ್ಷಣಗಳನ್ನು ಹೋಲುವ ತೋಮರ ರಗಳೆ ಎಂಬ ವಿಶಿಷ್ಟ ಪ್ರಯೋಗ ಕೋಗಳಿ ಶಾಸನದಲ್ಲಿ ಬಳಕೆಗೊಂಡಿರುವುದನ್ನು ಗುರುತಿಸಲಾಗಿದೆ.

ಹೀಗೆ ಶಾಸನಗಳನ್ನು ಬಹುಮುಖ ಅಧ್ಯಯನಕ್ಕೊಳಪಡಿಸಿದಾಗ ಶಾಸನಗಳು ಕೇವಲ ಚರಿತ್ರೆಯ ಪುನರ್ರಚನೆಯ ಅಧಿಕೃತ ದಾಖಲೆಗಳಾಗಷ್ಟೇ ಕಂಡು ಬರದೆ ಸಾಂಸ್ಕೃತಿಕ, ಸಾಹಿತ್ಯಕ, ಭಾಷಿಕ, ಛಂದಸ್ಸಿನ ಅಧ್ಯಯನಕ್ಕೂ ಆಕರಗಳಾಗಿ ಉಪಯೋಗಿಸಿಕೊಳ್ಳಬಹುದು ಎಂಬ ಸಂಗತಿಯನ್ನು ಸಾಹಿತ್ಯದ ಅಧ್ಯಾಪಕರು ಶಾಸನ ಕ್ಷೇತ್ರದ ಅಧ್ಯಯನವನ್ನು ಪ್ರವೇಶಿಸುವುದರ ಮೂಲಕ ತೋರಿಸಿ ಕೊಟ್ಟಿದ್ದಾರೆನ್ನಬಹುದು. ಒಟ್ಟಾರೆ ಇಪ್ಪತ್ತನೇ ಶತಮಾನದಲ್ಲಿ ಶಾಸನಗಳ ಕುರಿತ ಅಧ್ಯಯನವು 'ಚರಿತ್ರೆ, ಸಂಸ್ಕೃತಿ, ಸಾಹಿತ್ಯ ಇತ್ಯಾದಿಗಳ ಸಮಗ್ರ ಅಧ್ಯಯನದಲ್ಲಿ ಪ್ರಮುಖ ಆಕರಗಳು' ಎನ್ನುವ ನಿಟ್ಟಿನಲ್ಲಿ ನಡೆದಿರುವುದನ್ನು ಗುರುತಿಸಬಹುದು.

ಪರಮಾಣು ನಿಶ್ಯಸ್ತ್ರೀಕರಣ-ಭಾರತದ ನಿಲುವು

ಪದ್ಮಾವತಿ ಬಿ. ಎಸ್.

ದ್ವಿತೀಯ ಮಹಾಯುದ್ಧದ ಬಿರುಸಿನ ಮಧ್ಯೆ ಅಂದಿನ ಪ್ರಮುಖ ರಾಷ್ಟ್ರಗಳು ಪರಮಾಣು ಭೌತಶಾಸ್ತ್ರಕ್ಕೆ ಸಂಬಂಧಿಸಿದಂತೆ ರಹಸ್ಯ ಪ್ರಯೋಗಗಳನ್ನು ಕೈಗೊಂಡವು. ವಿಜ್ಞಾನಿಗಳ ಬೆಂಬಲ ಹಾಗೂ ಪಾರ್ಲ್ ಹಾರ್ಬರ್ ಮೇಲೆ ಜಪಾನ್ ಎಸಗಿದ ಆಕ್ರಮಣದಿಂದ 1942ರಲ್ಲಿ ಅಮೇರಿಕ ಸಂಸ್ಥಾನ ಇಂತಹ ಪ್ರಯೋಗ ಕೈಗೊಳ್ಳಲು ಪ್ರಚೋದಿಸಿತು. ಈ ನಿಟ್ಟಿನಲ್ಲಿ ಮ್ಯಾನ್‌ಹಾಟನ್ (Manhattan) ಯೋಜನೆಯನ್ನು ರೂಪಿಸಲಾಯಿತು. 1945 ರ ಮಧ್ಯ ಭಾಗದ ಹೊತ್ತಿಗೆ ಮೂರು ಅಣು ಬಾಂಬ್‌ಗಳ ತಯಾರಿಕೆಯಲ್ಲಿ ವಿಜ್ಞಾನಿಗಳು ಯಶಸ್ವಿಯಾದರು. ಜುಲೈ 1945 ರಲ್ಲಿ ಮೆಕ್ಸಿಕೋದ ಟ್ರಿನಿಟಿ ಎಂಬಲ್ಲಿ ಪ್ರಯೋಗಾತ್ಮಕವಾಗಿ ಒಂದು ಅಣು ಬಾಂಬ್‌ನ್ನು ಸ್ಫೋಟಿಸಲಾಯಿತು. ಪರೀಕ್ಷೆ ಸಂಪೂರ್ಣವಾಗಿ ಯಶಸ್ವಿಯಾಯಿತು. ಇದು ಮುಂದಿನ ಶಸ್ತ್ರ ಶೇಖರಣ ಪೈಪೋಟಿಗೆ ಅಡಿಪಾಯವಾಗಬಹುದೆಂಬ ಅರಿವಿಲ್ಲದ ಭೌತಶಾಸ್ತ್ರಜ್ಞರು ತಮ್ಮ ವೈಜ್ಞಾನಿಕ ಸಫಲತೆಯ ಬಗ್ಗೆ ಹರ್ಷೋದ್ಗಾರ ವ್ಯಕ್ತಪಡಿಸಿದರು. ಬಹುಶಃ ಈ ಅಣು ತಂತ್ರಜ್ಞಾನವನ್ನು ಮನುಕುಲ ವೃದ್ಧಿಗೆ ಸೀಮಿತಗೊಳಿಸಿದ್ದರೆ, ಇದು ವೈಜ್ಞಾನಿಕ ಸಂಶೋಧನೆಯ ಮೈಲಿಗಲ್ಲಾಗುತ್ತಿತ್ತೇನೊ. ಜಪಾನ್‌ನನ್ನು ಆ ತಕ್ಷಣ ಶರಣಾಗುವನ್ನಾಗಿ ಮಾಡಲು ಉಳಿದೆರಡು ಅಣು ಬಾಂಬ್‌ನ್ನು ಯುದ್ಧದ ಅಂತ್ಯಕ್ಕೆ ಬಳಸಲು ನಿರ್ಧರಿಸಲಾಯಿತು. ಅದರಂತೆ 1945 ಆಗಸ್ಟ್ 6 ಮತ್ತು 9 ರಂದು ಕ್ರಮವಾಗಿ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಹಾಕಲಾಯಿತು. ಕ್ಷಣಾರ್ಧದಲ್ಲಿ ಈ ನಗರಗಳು ಭಸ್ಮವಾದವು. ಬದುಕುಳಿದ ಜನರು ಇಂದಿಗೂ ಜೈವಿಕ ವಿಕಲತೆಗೆ ಒಳಗಾಗಿರುವರು.

ಅಣು ತಂತ್ರಜ್ಞಾನದ ದುರ್ಬಳಕೆಯ ಅಪಾಯವನ್ನು ಅರಿತ ಕೆಲವು ವಿಜ್ಞಾನಿಗಳು ಅಂದಿನ ನಾಯಕರು ಹಾಗೂ ಸರ್ಕಾರಗಳಿಗೆ ಇದನ್ನು ಇನ್ನು ಮುಂದೆ ಅಸ್ತ್ರವಾಗಿ ಬಳಸಬಾರದೆಂದು ಮನವಿ ಸಲ್ಲಿಸಿದರೂ ಸಫಲವಾಗಲಿಲ್ಲ. ದ್ವಿತೀಯ ಮಹಾಯುದ್ಧದ ನಂತರ ಅಮೇರಿಕಾ ಸಂಸ್ಥಾನ ಮತ್ತು ಸೋವಿಯತ್ ನಡುವಿದ್ದ ಸಮರ ಸ್ನೇಹ ಶೀತಲ ಸಮರಕ್ಕೆ ತಿರುಗಿತು. ಯುದ್ಧ ನಂತರದ ಅಂತರ ರಾಷ್ಟ್ರೀಯ ವ್ಯವಸ್ಥೆಯಲ್ಲಿ ಭದ್ರತೆಗಾಗಿ ಪರಮಾಣು ಶಸ್ತ್ರ ಶೇಖರಣಾ ಪೈಪೋಟಿಯು ಪ್ರಾರಂಭವಾಯಿತು, 1949 ರಲ್ಲಿ ಸೋವಿಯತ್ ರಷ್ಯ, 1952ರಲ್ಲಿ ಬ್ರಿಟನ್, 1960 ರಲ್ಲಿ

ಫ್ರಾನ್ಸ್ ಹಾಗೂ 1964 ರಲ್ಲಿ ಚೀನ ದೇಶಗಳು ಪರಮಾಣು ಪರೀಕ್ಷೆಯನ್ನು ನಡೆಸುವುದರ ಮೂಲಕ ಅಮೇರಿಕಾ ಸಂಸ್ಥಾನದ ಏಕಸ್ವಾಮ್ಯವನ್ನು ಅಂತ್ಯ ಗೊಳಿಸಿದವು.

ಪರಮಾಣು ಶಸ್ತ್ರಗಳ ಶೇಖರಣ ಪೈಪೋಟಿ ಹಾಗೂ ಸಾಮರ್ಥ್ಯ ವೃದ್ಧಿಯನ್ನು ಗಮನಿಸಿದ ಭಾರತದ ಅಂದಿನ ಪ್ರಧಾನಿ ನೆಹರೂರವರು ಅಣು ತಂತ್ರಜ್ಞಾನವನ್ನು ಭದ್ರಯ ದೃಷ್ಟಿಯಿಂದ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಬಳಸುವುದನ್ನು ರಾಷ್ಟ್ರಗಳು ತಡೆಯ ಬೇಕೆಂದು ಹೇಳಿದರು. ಅಣು ತಂತ್ರಜ್ಞಾನವನ್ನು ದೇಶದ ಅಭಿವೃದ್ಧಿಗಾಗಿ ಮಾತ್ರ ಬಳಸಬೇಕೆಂದು, ಭಾರತದ ಅಣುನೀತಿಯನ್ನು ಶಾಂತಿಗಾಗಿ ರೂಪಿಸಿದರು. 1950-60ರ ದಶಕದಲ್ಲಿ ಪರಮಾಣು ಪರೀಕ್ಷೆಯನ್ನು ಸಮಾಪ್ತಿಗೊಳಿಸಿ ನಿಶ್ಯಸ್ತ್ರೀಕರಣಕ್ಕೆ ಪ್ರಯತ್ನಿಸಬೇಕೆಂದು ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸಿದರು. ಈ ಪ್ರಯುಕ್ತ ನೆಹರೂ ರವರು ಸಮಗ್ರ ಪರಮಾಣು ಪರೀಕ್ಷಾ ನಿಷೇಧ (ನೆಹರೂರವರು ಇದನ್ನು Stand still ಎಂದು ಕರೆದರು) ದ ಅಗತ್ಯದ ಬಗ್ಗೆ ವಿಶ್ವ ಸಂಸ್ಥೆಗೆ ಮನವಿ ಸಲ್ಲಿಸಿದರು. ಭಾರತದ ಈ ಪ್ರಯತ್ನದ ಫಲವಾಗಿ 1963 ರಲ್ಲಿ ಭಾಗಶಃ ಪರಮಾಣು ಪರೀಕ್ಷಣಾ ನಿಷೇಧ ಒಪ್ಪಂದಕ್ಕೆ ಶಕ್ತಿ ರಾಷ್ಟ್ರಗಳು ಸಮ್ಮತಿಸಿದವು. ಈ ಒಪ್ಪಂದದ ಮೊದಲನೇ ವಿಧಿಯು ಇದಕ್ಕೆ ಸಹಿ ಹಾಕಿರುವ ರಾಷ್ಟ್ರಗಳು ತಮ್ಮ ಅಥವಾ ತಮ್ಮ ಅಧೀನಕ್ಕೆ ಬರುವ ಪ್ರದೇಶದ ವಾತಾವರಣದಲ್ಲಿ (atmosphere), ಬಾಹ್ಯಾಕಾಶದಲ್ಲಿ (Outer-space) ಮತ್ತು ಅಂತರಜಲ ಅಥವಾ ಸಮುದ್ರ ಮಧ್ಯೆ ಅಥವಾ ಸಮುದ್ರದಂಚಿನಲ್ಲಿ ಪರಮಾಣು ಸ್ಫೋಟವನ್ನು ಕೈಗೊಳ್ಳುವುದನ್ನು ನಿಷೇಧಿಸಿದವು. ಆದರೆ, ತಮ್ಮ ಪರಮಾಣು ಶಸ್ತ್ರದ ಸ್ಥಿತಿಗತಿಯನ್ನು ಪರೀಕ್ಷಿಸಲು ಹಾಗೂ ವೃದ್ಧಿಸಲು ಅಂತರ ನೆಲ (Under ground) ದ ಪರೀಕ್ಷೆ ಅಗತ್ಯವಿದೆ ಎಂದು ಅದನ್ನು ಮುಂದುವರೆಸ ಲಾಯಿತು.

1964 ರಲ್ಲಿ ಚೀನ ತನ್ನ ಪ್ರಥಮ ಅಣು ಬಾಂಬ್‌ನ್ನು ಸ್ಫೋಟಿಸಿದಾಗ ಭಾರತ ತನ್ನ ಭದ್ರತೆಯನ್ನು ಪರಿಗಣಿಸಿ ತನ್ನ ಅಣು ನೀತಿಯನ್ನು ಮರು ಪರಿಶೀಲಿಸಿ ಪರಮಾಣು ಬಾಂಬ್‌ನ ತಯಾರಿಕೆಗೆ ಸಜ್ಜಾಗಬಹುದೆಂದು ಅಮೇರಿಕಾ ಸಂಸ್ಥಾನ ಆಲೋಚಿಸಿತು. ಪರಮಾಣು ಶಸ್ತ್ರ ರಾಷ್ಟ್ರಗಳ ಸಂಖ್ಯೆಯನ್ನು ಇಷ್ಟಕ್ಕೆ ತಡೆಯ ಬೇಕೆಂದು 19 8 ರಲ್ಲಿ ಪರಮಾಣು ಪ್ರಸರಣಾ ನಿಷೇಧ ಒಪ್ಪಂದ (Nuclear Non-proliferation Treaty-NPT) ವನ್ನು ವಿಶ್ವಸಂಸ್ಥೆಯಲ್ಲಿ ಅಂಗೀಕರಿಸಲಾಯಿತು. 1970 ರಲ್ಲಿ ಅಧಿಕೃತವಾಗಿ ಇದು ಕಾರ್ಯರೂಪಕ್ಕೆ ಬಂದಿತು. ಈ ಒಪ್ಪಂದ ಹಲವು ಲೋಪದೋಷಗಳಿಂದ ಕೂಡಿದೆ ಎಂದು ಭಾರತ ತನ್ನ ಸಮ್ಮತಿಯನ್ನು ನೀಡಲಿಲ್ಲ.

ಪರಮಾಣು ಪ್ರಸರಣಾ ನಿಷೇಧ ಒಪ್ಪಂದವು ಅಮೇರಿಕಾ ಸಂಸ್ಥಾನ, ಸೋವಿ ಯತ್ ಯೂನಿಯನ್ ಮತ್ತು ಬ್ರಿಟನ್‌ನೊಂದಿಗೆ ಫ್ರಾನ್ಸ್ ಹಾಗೂ ಚೀನ ದೇಶಗಳಿಗೂ

ಪರಮಾಣು ಶಕ್ತಿ ರಾಷ್ಟ್ರದ ಸ್ಥಾನವನ್ನು ನೀಡಿತು. 1974 ರಲ್ಲಿ ಭಾರತ ಶಾಂತಿಗಾಗಿ ಪರಮಾಣು ಸ್ಫೋಟವನ್ನು (Peaceful Nuclear Explosion-PNE) ಕೈಗೊಂಡು ಯಶಸ್ವಿಯಾದರೂ, ಪರಮಾಣು ರಾಷ್ಟ್ರವೆಂದು ಪರಿಗಣನೆಗೆ ಒಳಗಾಗಲಿಲ್ಲ.

ಈ ಒಪ್ಪಂದದ ಮೊದಲ ಮೂರು ವಿಧಿಗಳನ್ನು (Article) ಭಾರತ ಟೀಕಿಸಿತು, ಪ್ರಥಮ ವಿಧಿಯು (Article I) ಈ ಒಪ್ಪಂದಕ್ಕೆ ಸಹಿ ಹಾಕಿರುವ ಪರಮಾಣು ರಾಷ್ಟ್ರಗಳು ಪರಮಾಣು ಶಸ್ತ್ರವನ್ನಾಗಲಿ, ಸಲಕರಣೆಯುನ್ನಾಗಲಿ ಅಥವಾ ಇನ್ನಿತರೆ ಪರಮಾಣು ಸ್ಫೋಟಕಗಳನ್ನಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ತಂತ್ರಜ್ಞಾನವನ್ನಾಗಲಿ ಇತರೆ ರಾಷ್ಟ್ರಗಳಿಗೆ ರಫ್ತು ಮಾಡಬಾರದು ಮತ್ತು ಅಂತಹ ರಾಷ್ಟ್ರಗಳು ಪರಮಾಣು ಸಲಕರಣೆ, ತಂತ್ರಜ್ಞಾನ ಅಥವಾ ಶಸ್ತ್ರ ಪಡೆಯುವ ಪ್ರಯತ್ನಕ್ಕೆ ಪರಮಾಣು ರಾಷ್ಟ್ರಗಳು ಸಹಕಾರಿಯಾಗಬಾರದು ಎಂದು ಹೇಳುತ್ತದೆ.

ಎರಡನೇ ವಿಧಿಯು (Article II) ಪರಮಾಣು ಹೊಂದದ ರಾಷ್ಟ್ರಗಳು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಯಾವುದೇ ರಾಷ್ಟ್ರದಿಂದ ಪರಮಾಣು ಅಸ್ತ್ರವನ್ನಾಗಲಿ, ಸಲಕರಣೆಯುನ್ನಾಗಲಿ, ತಂತ್ರಜ್ಞಾನವನ್ನಾಗಲಿ ಅಥವಾ ಅಂತಹ ಸ್ಫೋಟಕಗಳನ್ನಾಗಲಿ ಪಡೆಯುಬಾರದು. ಪರಮಾಣು ಅಸ್ತ್ರದ ಅಥವಾ ಇನ್ನಾವುದೇ ಪರಮಾಣು ಸ್ಫೋಟಕ ಸಲಕರಣೆಯ ತಯಾರಿಕೆಯಲ್ಲಿ ಬೇರೆ ರಾಷ್ಟ್ರಗಳ ಸಹಾಯವನ್ನು ಪಡೆಯುಬಾರದು ಹಾಗೂ ಕೋರಬಾರದು.

ಮೂರನೇ ವಿಧಿಯು (Article III) ಶಾಂತಿ ಉದ್ದೇಶಕ್ಕಾಗಿ ಪರಮಾಣುವನ್ನು ಬಳಸುವ ಪರಮಾಣೇತನ ರಾಷ್ಟ್ರಗಳು (Non nuclear weapon states) ತಮ್ಮ ಪರಮಾಣು ಚಟುವಟಿಕೆಯ ಎಲ್ಲಾ ಸ್ಥಾವರಗಳು ಅಂತರ ರಾಷ್ಟ್ರೀಯ ಅಣು ಶಕ್ತಿ ಆಯೋಗದ (International Atomic Energy Agency-IAEA) ಮೇಲ್ವಿಚಾರಣೆಯಡಿ ಅದರದೇ ರೂಪಿತ ರಕ್ಷಣಾ ವ್ಯವಸ್ಥೆಗೆ ಒಳಪಟ್ಟಿರಬೇಕು.

1) ಒಪ್ಪಂದವನ್ನು ಕೂಲಂಕುಶವಾಗಿ ಪರಿಶೀಲಿಸಿದ ಭಾರತ ಇದರಲ್ಲಿ ಹಲವು ನ್ಯೂನತೆ ಹಾಗೂ ಶಕ್ತಿ ರಾಷ್ಟ್ರಗಳ ಹಿತಾಸಕ್ತಿ ಅಡಗಿದ್ದು, ಅವುಗಳನ್ನು ಸರಿಪಡಿಸದ ಹೊರತು ಭಾರತ ಸಹಿ ಹಾಕದು ಎಂದು ಹೇಳಿಕೆ ನೀಡಿತು. ಮೊದಲನೆಯದಾಗಿ – ಪರಮಾಣು ಪ್ರಸರಣಾ ನಿಷೇಧ ಒಪ್ಪಂದವು ರಾಷ್ಟ್ರಗಳನ್ನು "ಪರಮಾಣು ಸಹಿತ ಹಾಗೂ ಪರಮಾಣು ರಹಿತ" ರಾಷ್ಟ್ರಗಳನ್ನಾಗಿ (Nuclear haves and Nuclear have nots) ವಿಂಗಡಿಸಿದೆ.

2) ಒಪ್ಪಂದದಲ್ಲಿ ಎಲ್ಲಾ ಬದ್ಧತೆಗಳನ್ನು ಪರಮಾಣು ರಹಿತ ರಾಷ್ಟ್ರಗಳ ಮೇಲೆ ಹೇರಲಾಗಿದೆ. ಅದಕ್ಕೆ ಪ್ರತಿಯಾಗಿ ಐದು ಪರಮಾಣು ರಾಷ್ಟ್ರಗಳು ಯಾವುದೇ

ರೀತಿಯ ಹತೋಟಿ ಅಥವಾ ಬದ್ಧತೆಗೆ ಒಳಗಾಗಿಲ್ಲ. ಪರಮಾಣು ಸಹಿತ ರಾಷ್ಟ್ರಗಳು ಪರಮಾಣು ಬಾಂಬ್, ಸಲಕರಣೆ ಅಥವಾ ತಂತ್ರಜ್ಞಾನವನ್ನು ಪರಮಾಣು ರಹಿತ ರಾಷ್ಟ್ರಗಳಿಗೆ ಪ್ರಸರಣೆ ಮಾಡುವುದನ್ನು ನಿಷೇಧಿಸಲಾಗಿದೆ (horizantal prolife ration). ಅದೇ ರೀತಿ ಪರಮಾಣು ಸಹಿತ ರಾಷ್ಟ್ರಗಳು ಪರಮಾಣು ಶಸ್ತ್ರಗಳ ಸಾಮರ್ಥ್ಯವನ್ನು ವೃದ್ಧಿಸಲು, ಸಂಖ್ಯೆಯನ್ನು ತಡೆಯಲು ಅಥವಾ ಐದು ಪರಮಾಣು ರಾಷ್ಟ್ರಗಳ ನಡುವೆ ಪರಮಾಣು ತಂತ್ರಜ್ಞಾನ ಕುರಿತ ಮಾಹಿತಿ ವಿನಿಮಯದ ನಿಷೇಧವನ್ನು ಹೇರಿಲ್ಲ (verticle proliferation).

3) ಈ ಒಪ್ಪಂದವು ಪರಮಾಣು ರಹಿತ ರಾಷ್ಟ್ರಗಳಿಗೆ ಪರಮಾಣು ತಂತ್ರಜ್ಞಾನದ ಪ್ರಸರಣಾವನ್ನು ನಿಷೇಧಿಸಿದೆಯೇ ಹೊರತು ನಿಶ್ಶಸ್ತ್ರೀಕರಣಕ್ಕೆ ತೀವ್ರ ಒತ್ತಡವೇರಿಲ್ಲ. ಒಪ್ಪಂದದ 6ನೇ ವಿಧಿಯು ಸಹಿ ಹಾಕಿರುವ ಪ್ರತಿ ರಾಷ್ಟ್ರವು (Pasties to the Treaty) ಅತಿ ಶೀಘ್ರದಲ್ಲೇ ಮಾತುಕತೆ ಮೂಲಕ ಸಂಪೂರ್ಣ ನಿಶ್ಶಸ್ತ್ರೀಕರಣಕ್ಕೆ ಹಾಗೂ ಪರಮಾಣು ಶಸ್ತ್ರ ಶೇಖರಣಾ ಪೈಪೋಟಿ ತಡೆಗೆ ಮಾರ್ಗ ಗಳನ್ನು ಕಂಡುಕೊಳ್ಳಬೇಕೆಂದು ಉಲ್ಲೇಖಿಸಲಾಗಿದೆ. ಇಲ್ಲಿ ನಿರ್ದಿಷ್ಟ ಅವಧಿಯೊಳಗೆ ತಮ್ಮಲ್ಲಿರುವ ತಮ್ಮ ಶಸ್ತ್ರಶೇಖರಣೆಯನ್ನು ನಾಶಗೊಳಿಸಿ ಶಸ್ತ್ರ ಶೇಖರಣಾ ಪೈಪೋಟಿ ಯನ್ನು ಅಂತ್ಯಗೊಳಿಸಬೇಕೆಂಬ ಬದ್ಧತೆಗೆ ಪರಮಾಣು ರಾಷ್ಟ್ರಗಳು ಒಳಗಾಗಿಲ್ಲ.

ಈ ಎಲ್ಲಾ ಕಾರಣಕ್ಕಾಗಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಪರಮಾಣು ಪ್ರಸರಣಾ ನಿಷೇಧ ಒಪ್ಪಂದ ಪಕ್ಷಪಾತ ಹಾಗೂ ಅಸಮಾನತೆಯಿಂದ (discriminatory and unequal) ಕೂಡಿದೆ. ಇದರಿಂದ ಕೆಲವೇ ರಾಷ್ಟ್ರಗಳು ಪರಮಾಣು ಶಸ್ತ್ರಗಳನ್ನು ಹೊಂದುವುದನ್ನು ಶಾಸನಬದ್ಧಗೊಳಿಸಲಾಗಿದೆ. ಅಂತರ ರಾಷ್ಟ್ರೀಯ ಅಣುಶಕ್ತಿ ಆಯೋಗದ ರಕ್ಷಣಾ ವ್ಯವಸ್ಥೆಯು ಏಕಪಕ್ಷೀಯವಾದುದು ಎಂದು ಟೀಕಿಸಿದರು. ಕೇಂದ್ರದಲ್ಲಿ ಸರ್ಕಾರಗಳು ಬದಲಾದರೂ ನಿಶ್ಶಸ್ತ್ರೀಕರಣದ ಬಗೆಗಿನ ಭಾರತದ ನಿಲುವು ಬದಲಾಗಿಲ್ಲ.

1988ರಲ್ಲಿ ರಾಜೀವ್‌ಗಾಂಧಿಯವರು ಎಲ್ಲಾ ಪರಮಾಣು ಅಸ್ತ್ರಗಳನ್ನು ನಾಶ ಗೊಳಿಸಿ ಪರಮಾಣು ರಹಿತ ಜಾಗತಿಕ ವ್ಯವಸ್ಥೆಯನ್ನು 2010ರೊಳಗೆ ರೂಪಿಸುವ ಪ್ರಸ್ತಾಪವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಂಡಿಸಿದರು. ಪರಮಾಣು ರಾಷ್ಟ್ರಗಳಿಂದ ಇದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯಲಿಲ್ಲ.

1991ರಲ್ಲಿ ಪಾಕಿಸ್ತಾನ ದಕ್ಷಿಣ ಏಷ್ಯಾವನ್ನು ಪರಮಾಣು ರಹಿತ ಶಾಂತಿ ವಲಯವನ್ನಾಗಿ ಮಾಡಲು ಐದು ರಾಷ್ಟ್ರಗಳ ಬಹುಪಕ್ಷೀಯ ಪ್ರಸ್ತಾಪವನ್ನು

ಅಮೇರಿಕಾ ಸಂಸ್ಥಾನದ ಮುಂದಿಟ್ಟಿತು. ಸೋವಿಯತ್‌ನ ಪತನದೊಂದಿಗೆ ಅಂತ್ಯ ಗೊಂಡಿದ್ದ ಶೀತಲ ಸಮರ ಭಾರತವನ್ನು ದುರ್ಬಲಗೊಳಿಸಿದ್ದು, ಅದನ್ನು ಮಣಿಸ ಬಹುದೆಂಬ ಎಣಿಕೆ ಅಮೇರಿಕಾಗಿತ್ತು. ಭಾರತ ಮತ್ತೆ ತನ್ನ ನಿಲುವನ್ನು ದೃಢವಾಗಿ ವ್ಯಕ್ತಪಡಿಸಿತು. ದಕ್ಷಿಣ ಏಷ್ಯಾವನ್ನು ಶಾಂತಿ ವಲಯವನ್ನಾಗಿ ಮಾಡಿದರೆ ಜಾಗತಿಕ ಮಟ್ಟದಲ್ಲಿನ ಪರಮಾಣು ಭೀತಿ ಅಂತ್ಯಗೊಳ್ಳದು. ಇದು ಮುಂಬರುವ NPT ಪರಾಮರ್ಶೆ ಸಮ್ಮೇಳನದ ಹೊತ್ತಿಗೆ ಭಾರತವನ್ನು ಒಲಿಸುವ ಪ್ರಯತ್ನವಾಗಿತ್ತು.

ಬಿಲ್ ಕ್ಲಿಂಟನರು ಅಮೇರಿಕಾ ಸಂಸ್ಥಾನದ ಅಧ್ಯಕ್ಷರಾದ ನಂತರ ಪಾಕಿಸ್ತಾನದ ಪ್ರಸ್ತಾಪದಿಂದ ಪ್ರಭಾವಿತಗೊಂಡು ವಲಯ ನಿಶ್ಯಸ್ತ್ರೀಕರಣಕ್ಕೆ ಮತ್ತೊಮ್ಮೆ ಪ್ರಯತ್ನಿಸಿದರು. ಅವರ ಬಹುಪಕ್ಷೀಯ ಪ್ರಸ್ತಾಪವನ್ನು 5+2+2 ಪ್ರಸ್ತಾಪ ಅಂದರೆ ಐದು ಪರಮಾಣು ರಾಷ್ಟ್ರಗಳು, ಭಾರತ ಮತ್ತು ಪಾಕಿಸ್ತಾನ ಹಾಗೂ ಜರ್ಮನಿ ಮತ್ತು ಜಪಾನ್ ಇವೆರಡೂ ಆರ್ಥಿಕವಾಗಿ ಬಲಿಷ್ಠವಾದ ರಾಷ್ಟ್ರವಾಗಿರುವ ಕಾರಣ ಒತ್ತಡಕ್ಕೆ ಭಾರತ ಮಣಿಯಬಹುದೆಂಬುದು ಅಮೇರಿಕಾ ಸಂಸ್ಥಾನದ ಅನಿಸಿಕೆ ಯಾಗಿತ್ತು. ಭಾರತ ಇದನ್ನು ಎರಡು ಕಾರಣಕ್ಕಾಗಿ ತಿರಸ್ಕರಿಸಿತು. ಮೊದಲನೆಯ ದಾಗಿ, ಇದು ದಕ್ಷಿಣ ಏಶಿಯಾ ವಲಯವನ್ನು ಮಾತ್ರ ನಿಶ್ಯಸ್ತ್ರೀಕರಣಗೊಳಿಸುವ ಉದ್ದೇಶವನ್ನು ಹೊಂದಿತ್ತು. ಎರಡನೆಯದಾಗಿ ಚೀನಾವನ್ನು ಈ ಒಡಂಬಡಿಕೆ ಯಿಂದ ಹೊರಗಿಡಲಾಗಿತ್ತು. ಪರಮಾಣು ಶಸ್ತ್ರವನ್ನು ಹೊಂದಿರುವ ಚೀನಾ ಭಾರತದ ಭದ್ರತೆಗೆ ಅಪಾಯ ಒಡ್ಡುವ ಆತಂಕವಿರುವ ಕಾರಣ ಅದನ್ನು ನಿಶ್ಯಸ್ತ್ರೀ ಕರಣ ಬದ್ಧತೆಯಿಂದ ಪ್ರತ್ಯೇಕಿಸುವುದು ಔಚಿತ್ಯವಲ್ಲ ಎಂಬುದು ಭಾರತದ ವಾದ ವಾಗಿತ್ತು. ಈ ಹಿನ್ನೆಲೆಯಲ್ಲಿ ಅಮೇರಿಕಾ ಪ್ರಸ್ತಾಪಿಸಿದ 9 ರಾಷ್ಟ್ರಗಳ ಬಹು ಪಕ್ಷೀಯ ಮಾತುಕತೆಯು ಕಾರ್ಯಗತವಾಗಲಿಲ್ಲ.

1995ರ ಪರಮಾಣು ಪ್ರಸರಣಾ ನಿಷೇಧ ಒಪ್ಪಂದದ ಪರಾಮರ್ಶೆ ಸಮ್ಮೇಳ ನಕ್ಕೆ ಪೂರ್ವಭಾವಿಯಾಗಿ ಭಾರತದ ಮೇಲೆ ಮತ್ತೊಮ್ಮೆ ಒತ್ತಡ ಹೇರಲಾಯಿತು. ಭಾರತ ತನ್ನ ಹಿಂದಿನ ನಿಲುವನ್ನು ಎತ್ತಿಹಿಡಿದು ಈ ಒಪ್ಪಂದವು ಮೂಲಭೂತವಾಗಿ ಪಕ್ಷಪಾತದಿಂದ ಕೂಡಿದ್ದು, ಜಾರಿಗೆ ಬಂದ ನಂತರದ 25 ವರ್ಷದಲ್ಲಿ ಪರಮಾಣು ರಾಷ್ಟ್ರಗಳು ನಿಶ್ಯಸ್ತ್ರೀಕರಣದ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ ಎಂದು ಹೇಳಿತು. ಆರ್ಥಿಕ ಗಳಿಕೆಗಾಗಿ ಪರಮಾಣು ರಾಷ್ಟ್ರಗಳೇ ಪರಮಾಣು ತಂತ್ರಜ್ಞಾನ ಮತ್ತು ಸಲಕರಣೆಗಳನ್ನು ತೃತೀಯ ರಾಷ್ಟ್ರಗಳಿಗೆ ರಹಸ್ಯವಾಗಿ ಸಾಗಾಣಿಕೆ ಮಾಡುತ್ತಿವೆ ಇಂತಹ ರಾಷ್ಟ್ರಗಳ ವಿರುದ್ಧ ವಿಶ್ವಸಂಸ್ಥೆ ಯಾವುದೇ ಕಠಿಣ ಕ್ರಮವನ್ನು ಕೈಗೊಂಡಿಲ್ಲ ವಾದ್ದರಿಂದ ಭಾರತ ಇಂದಿಗೂ ಇದನ್ನು ತಿರಸ್ಕರಿಸುತ್ತದೆ.

NPT ಯ ಮೂಲಕ ಭಾರತದ ಅಣು ಸಂಶೋಧನೆಯನ್ನು ತಡೆಯಲು ವಿಫಲವಾದಾಗ, ಅಮೇರಿಕಾ ಸಂಸ್ಥಾನ 1950 ರಲ್ಲಿ ನಿರಾಕರಿಸಿದ ಸಮಗ್ರ

ಪರಮಾಣು ಪರೀಕ್ಷಣಾ ನಿಷೇಧ (Comprehensive Test Ban) ದ ಅಗತ್ಯತೆಯ ಬಗ್ಗೆ, ಇದು ಪುನರಾವಲೋಕಿಸಿದೆ. ಬದಲಾದ ಜಾಗತಿಕ ವ್ಯವಸ್ಥೆಯಲ್ಲಿ ಇನ್ನು ಮುಂದೆ ಮುಕ್ತ ಪರಮಾಣು ಪರೀಕ್ಷೆಯ ಅಗತ್ಯವಿಲ್ಲವೆಂಬುದು ಒಂದು ಕಾರಣವಾದರೆ, ಗಣಕಯಂತ್ರದ ಮೂಲಕ ತನ್ನ ಪರಮಾಣು ಅಸ್ತ್ರಗಳ ಸಾಮರ್ಥ್ಯವನ್ನು ಪರೀಕ್ಷಿಸಲು ಹಾಗೂ ವೃದ್ಧಿಸಲು ಅಗತ್ಯವಿರುವ ಎಲ್ಲಾ ತಂತ್ರಜ್ಞಾನವನ್ನು ಈಗಾಗಲೇ ಅಮೇರಿಕಾ ಸಂಸ್ಥಾನ ಅಭಿವೃದ್ಧಿ ಪಡಿಸಿರುವುದು ಇನ್ನೊಂದು ಕಾರಣವಾಗಿದೆ. 1993 ರಲ್ಲಿ ಪರಮಾಣುವಿನ ಸಮಗ್ರ ಪರೀಕ್ಷಣಾ ನಿಷೇಧದ ಕರಡನ್ನು ವಿಶ್ವಸಂಸ್ಥೆಯಲ್ಲಿ ಮಂಡಿಸಿದಾಗ ಅಮೇರಿಕಾ ಸಂಸ್ಥಾನದೊಂದಿಗೆ ಭಾರತವು ದನಿಗೂಡಿಸಿತು. ಆದರೆ 1996 ರಲ್ಲಿ ಜಿನಿವಾದಲ್ಲಿ ಒಪ್ಪಂದದ ಅಂತಿಮ ರೂಪ ಸಿದ್ಧವಾದಾಗ ಭಾರತ ತನ್ನ ಸಮ್ಮತಿ ನೀಡಲಿಲ್ಲ. ಒಪ್ಪಂದದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿದ ಪಕ್ಷದಲ್ಲಿ ಭಾರತ ಸರ್ಕಾರ ಸಹಿ ಹಾಕುವುದಾಗಿ ಹೇಳಿತು. ಭಾರತ ತನ್ನ ಅಧಿಕೃತ ಬೇಡಿಕೆಯನ್ನು ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಸಮಿತಿಗೆ (Committee on Disarnament) ಸಲ್ಲಿಸಿತು.

ಮೊದಲನೆಯದಾಗಿ ಎಲ್ಲಾ ಪ್ರಕಾರದ ಪರಮಾಣು ಪರೀಕ್ಷೆಯನ್ನು ನಿಷೇಧಿಸುವುದು. ಮುಕ್ತ (explosion) ಮತ್ತು ಪ್ರಯೋಗಾಲಯ ಪರೀಕ್ಷೆ (laboratory or sub-critical) ಗಳೆರಡನ್ನೂ ನಿಷೇಧಿಸುವುದು. ಎರಡನೆಯದಾಗಿ, ನಿಯಮಿತ ಅವಧಿಯೊಳಗೆ ಜಾಗತಿಕ ನಿಶ್ಶಸ್ತ್ರೀಕರಣಕ್ಕೆ ಎಲ್ಲಾ ರಾಷ್ಟ್ರಗಳು, ವಿಶೇಷವಾಗಿ ಪರಮಾಣು ರಾಷ್ಟ್ರಗಳು ಬದ್ಧವಾಗಬೇಕು. ಭಾರತವು ಈ ಒಪ್ಪಂದ ಜಾರಿಗೆ ಬಂದ 10 ವರ್ಷದೊಳಗೆ ಪೂರೈಸಬೇಕೆಂದು ಹೇಳಿತು.

ಅಮೇರಿಕಾ ಸಂಸ್ಥಾನ ಭಾರತದ ಈ ಎರಡೂ ಮನವಿಗೂ ಸ್ಪಂದಿಸಲಿಲ್ಲ. ಭಾರತ CTBT ಯ ಅಂತಿಮ ಗೊತ್ತುವಳಿಯನ್ನು ತೀವ್ರವಾಗಿ ಟೀಕಿಸುತ್ತಾ, ಭಾಗಶಃ ಪರೀಕ್ಷಣಾ ನಿಷೇಧ ಒಪ್ಪಂದದಂತೆ (PTBT) ಇದು ಪ್ರಯೋಗಾಲಯದಲ್ಲಿ ಪರೀಕ್ಷಿಸುವ ಅವಕಾಶವನ್ನು ನೀಡಿರುವುದರಿಂದ ಇದು ಸಮಗ್ರ ಪರೀಕ್ಷಣಾ ನಿಷೇಧವಾಗದು ಎನ್ನುವುದು ಭಾರತದ ವಾದ. ತಮ್ಮಲ್ಲಿರುವ ಪರಮಾಣು ಶಸ್ತ್ರಗಳ ಸ್ಥಿತಿಗತಿ–ಸಾಮರ್ಥ್ಯವನ್ನು ಪರೀಕ್ಷಿಸಲು ಇಂತಹ ಪರೀಕ್ಷೆ ಅತ್ಯಗತ್ಯವೆಂದು ಅಮೇರಿಕಾ ಸಂಸ್ಥಾನ ಪ್ರತಿವಾದಿಸಿದೆ. ಭಾರತದ ಎರಡನೇ ಪ್ರಸ್ತಾಪ ಕುರಿತು ನಿರ್ದಿಷ್ಟ ಸಮಯದೊಳಗೆ ನಿಶ್ಶಸ್ತ್ರೀಕರಣ ಅಸಾಧ್ಯವೆಂದು ಅಮೇರಿಕಾ ಸಂಸ್ಥಾನದ ಶಸ್ತ್ರ ನಿಯಂತ್ರಣ ಸಮಿತಿಯು ತನ್ನ ಹೇಳಿಕೆ ನೀಡಿತು. ಇದಕ್ಕೆ ಪ್ರತಿಯಾಗಿ ಭಾರತ ಜಾಗತಿಕ ನಿಶ್ಶಸ್ತ್ರೀಕರಣ ಗುರಿಯನ್ನು ಪೂರ್ಣಗೊಳಿಸುವವರೆಗೂ ಪರಮಾಣು ರಾಷ್ಟ್ರಗಳು ಪರಮಾಣುರಹಿತ ರಾಷ್ಟ್ರಗಳ ಮೇಲೆ ಪರಮಾಣು ಶಸ್ತ್ರ ಬಳಕೆಯ ಬೆದರಿಕೆ ಅಥವಾ ಅಪ್ರಮಾಣದ ವಿರುದ್ಧ ಬೇಷರತ್ ರಕ್ಷಣೆಗೆ ಬದ್ಧರಾಗಬೇಕು. ಇಲ್ಲಿ

ಯಾವುದೇ ಪಕ್ಷಪಾತ ತೋರದೆ ಸಾರ್ವತ್ರಿಕ ರಕ್ಷಣೆ ನೀಡಬೇಕು ಎಂದು ಅಧಿಕೃತ ಪ್ರಸ್ತಾಪವನ್ನು ಮುಂದಿಟ್ಟಿತು. ಭಾರತದ ಈ ಬೇಡಿಕೆಗೆ ಒಪ್ಪಂದದಲ್ಲಿ ಸ್ಪಷ್ಟ ಉತ್ತರ ನೀಡಿಲ್ಲ.

ಈ ಒಪ್ಪಂದವನ್ನು ಭಾರತ ಸಂಶಯಾಸ್ಪದವಾಗಿ ಕಾಣಲು ಮತ್ತೊಂದು ಕಾರಣ ವಿಶೇಷ ಸಂದರ್ಭದಡಿ (extraordinary events) ವಿಧಾಯ ಸೇರ್ಪಡೆ. ಈ ವಿಧಿಯು ಅನ್ವಯ ಒಡಂಬಡಿಕೆಗೆ ಬದ್ಧರಾಗಿರುವ ರಾಷ್ಟ್ರಗಳು ತಮ್ಮ ಸಾರ್ವಭೌಮತ್ವಕ್ಕೆ ಧಕ್ಕೆಯಾಗುವಂತಹ ಸಂದರ್ಭದಲ್ಲಿ ಒಪ್ಪಂದದಿಂದ ಹೊರ ಬರುವ ಅವಕಾಶವನ್ನು ಕಲ್ಪಿಸಿರುವುದು ಪರಮಾಣು ರಾಷ್ಟ್ರಗಳ ಪ್ರಾಮಾಣಿಕತೆಯು ಪ್ರಶ್ನೆಯಾಗಿದೆ.

1998 ರ ಮೇ 11 ಮತ್ತು 14 ರಂದು ಭಾರತ ತನ್ನ ಅಣು ಪ್ರಯೋಗದ ಅಂಗವಾಗಿ ಪರಮಾಣು ಸ್ಫೋಟ ಕೈಗೊಂಡಿತು (ಪೋಖ್ರಾನ್ Pokhran II). ಪೋಖ್ರಾನ್ ಪರೀಕ್ಷೆಯಲ್ಲಿ ಭಾಗವಹಿಸಿ ಅದರ ಯಶಸ್ಸಿಗೆ ಕಾರಣರಾದ ಭಾರತದ ವಿಜ್ಞಾನಿಗಳು ತಾವು ಪಡೆದಿರುವ/ಸಂಗ್ರಹಿಸಿರುವ ಮಾಹಿತಿಯಿಂದ (data) ಭಾರತದ ಭದ್ರತೆಗೆ ಅಗತ್ಯವಿರುವ ಕನಿಷ್ಠ ರಕ್ಷಣಾ ವ್ಯವಸ್ಥೆಗೆ ಬೇಕಾಗುವ ಪರಮಾಣು ಶಸ್ತ್ರವನ್ನು ತಯಾರಿಸಬಹುದು ಎಂಬ ಭರವಸೆಯನ್ನು ಸರ್ಕಾರಕ್ಕೆ ನೀಡಿದ ನಂತರ ಸಮಗ್ರ ಪರೀಕ್ಷಣಾ ನಿಷೇಧ ಕುರಿತ ತನ್ನ ನಿಲುವನ್ನು ಸಡಿಲಗೊಳಿಸಿದೆ. ವಿಶ್ವಸಂಸ್ಥೆಯ 1998ರ ಸೆಪ್ಟೆಂಬರ್ ಅಧಿವೇಶನದಲ್ಲಿ ಮಾತನಾಡಿದ ಭಾರತದ ಪ್ರಧಾನಿ ವಾಜಪೇಯಿಯವರು ಭಾರತದ ಬದಲಾದ ನಿಲುವನ್ನು ಸೂಕ್ಷ್ಮವಾಗಿ ಉಲ್ಲೇಖಿಸಿದರು. ಇದನ್ನು ಗ್ರಹಿಸಿದ ಅಮೇರಿಕಾ ಸಂಸ್ಥಾನ ಭಾರತದೊಂದಿಗೆ ಈಗಾಗಲೇ ಹಲವು ಸುತ್ತಿನ ಮಾತುಕತೆ ನಡೆಸಿದೆ. ಭಾರತ ತನ್ನ ಭದ್ರತೆಗಾಗಿ ಕನಿಷ್ಠ ಶಸ್ತ್ರಗಳನ್ನು ಹೊಂದುವ ನಿಬಂಧನೆಗೆ ಅಮೇರಿಕಾ ಸಂಸ್ಥಾನ ಸಮ್ಮತಿಸಿದರೆ ಭಾರತ ಸಮಗ್ರ ಪರೀಕ್ಷಣಾ ನಿಷೇಧಕ್ಕೆ ಅಧಿಕೃತ ಒಪ್ಪಿಗೆ ನೀಡುವ ಒಲವನ್ನು ದ್ವಿಪಕ್ಷೀಯ ಮಾತುಕತೆಯ ಸಂದರ್ಭದಲ್ಲಿ ತೋರಿದೆ ಎಂದು ಭಾರತದ ಕೆಲವು ಮಿಲಿಟರಿ ತಜ್ಞರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಭಾರತ C I B T ಗೆ ಸಹಿಹಾಕುವುದರ ಬಗ್ಗೆ ಅಧಿಕೃತ ಅಂತಿಮ ಹೇಳಿಕೆಯನ್ನು ನೀಡದಿದ್ದರೂ ಭಾಗಶಃ ಅದು ಒಪ್ಪಿದೆ ಎನ್ನುವುದು ಹಲವರ ಅಭಿಪ್ರಾಯ. ಭಾರತ ಪ್ರಯೋಗಾಲಯ ಪರೀಕ್ಷೆಗೆ ಅಗತ್ಯವಿರುವ ತಂತ್ರಜ್ಞಾನವನ್ನು ವೃದ್ಧಿಸಿರುವ ಆಧಾರದ ಮೇಲೆ ಈ ಒಪ್ಪಂದಕ್ಕೆ ಒಪ್ಪಿಗೆ ನೀಡಿದರೆ ಭಾರತದ ಭದ್ರತೆಗೆ ಅದು ಸಮಂಜಸ ಉತ್ತರವಾಗದು. ಭಾರತದ ನೆರೆ ರಾಷ್ಟ್ರ, ಪಾಕಿಸ್ತಾನ, ಪರಮಾಣು ಬಾಂಬ್‌ನ್ನು ಹೊಂದಿರುವುದನ್ನು ಗಮನದಲ್ಲಿಡಬೇಕು. ಇಂತಹ ತಂತ್ರಜ್ಞಾನವನ್ನು ಚೀನಾ ಗೋಪ್ಯವಾಗಿ ನೀಡಿರಬಹುದು. ಇದು ದಕ್ಷಿಣ ಏಶಿಯಾದಲ್ಲಿ ನೂತನ ರೀತಿಯ

ಭದ್ರತಾ ಭೀತಿಗೆ ಎಡೆಮಾಡಿ ಕೊಡುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಭಾರತ ತನ್ನ ಅಂತಿಮ ಸಮ್ಮತಿಯನ್ನು ನೀಡುವ ಮೊದಲು ಹಲವು ದೃಷ್ಟಿಕೋನಗಳಿಂದ ಭದ್ರತೆಯ ಸಮಸ್ಯೆಯನ್ನು ಅವಲೋಕಿಸಬೇಕು. ನಿರ್ದಿಷ್ಟ ಅವಧಿಯೊಳಗೆ ಜಾಗತಿಕ ನಿಶ್ಯಸ್ತ್ರೀಕರಣವೊಂದೇ ಪರಮಾಣು ಯುದ್ಧದ ಭೀತಿಯನ್ನು ಅಂತ್ಯಗೊಳಿಸುತ್ತದೆಂಬ ತನ್ನ ಆರಂಭಿಕ ನಿಲುವನ್ನು ಬಾಹ್ಯ ಒತ್ತಡಗಳಿಗೆ ಮಣಿದು ಹೊಂದಾಣಿಕೆ ಮಾಡಿಕೊಂಡರೆ ಅದು ನಿಶ್ಯಸ್ತ್ರೀಕರಣದ ಬಗ್ಗೆ ಭಾರತಕ್ಕಿರುವ ಸಮಗ್ರ ನಿಲುವಿನಿಂದ ಹಿಂದೆ ಸರಿದಂತಾಗುತ್ತದೆ.

ತುಳು ಕವನ ಮತ್ತು ಕಥಾಸಾಹಿತ್ಯ ಒಂದು ಪರಿಶೀಲನೆ

ವಸಂತಕುಮಾರ ಪೆರ್ಲ

ದಕ್ಷಿಣದ ಚಂದ್ರಗಿರಿ ನದಿಯಿಂದ ಉತ್ತರದ ಕಲ್ಯಾಣಪುರ ನದಿಯವರೆಗಿನ ಭೂಭಾಗವನ್ನು ತುಳುನಾಡು ಎಂದು ಕರೆಯಲಾಗುತ್ತದೆ. ಈ ಭೂಭಾಗವನ್ನು ಬಂಗ, ಅಜಿಲ, ಚೌಟ ಮೊದಲಾದ ಮಾಂಡಲಿಕರು ಆಳಿದರಾದರೂ ಕುಂಬಳೆಯ ಅರಸರಷ್ಟು ಪ್ರಸಿದ್ಧಿಯನ್ನೂ, ಪ್ರಾಮುಖ್ಯವನ್ನೂ ಬೇರಾರೂ ಗಳಿಸಲಿಲ್ಲ. ತುಳು ಸಾಹಿತ್ಯಕ್ಕೆ 'ತೌಳವಾಧೀಶ್ವರ'ರಾದ ಕುಂಬಳೆ ಅರಸರು ಕೊಟ್ಟ ಬೆಂಬಲ–ಪ್ರೋತ್ಸಾಹವನ್ನು ಬೇರಾವ ಅರಸು ಮನೆತನಗಳೂ ಕೊಟ್ಟಂತಿಲ್ಲ.[1] ಹೀಗೆನ್ನಲು ಹಳೆಯ ತುಳು ಕಾವ್ಯಗಳಾದ ಕಾವೇರಿ, ಭಾಗವತೊ, ದೇವೀಮಹಾತ್ಮೆ (ಗದ್ಯಕಾವ್ಯ) ಮೊದಲಾದವು ಕುಂಬಳೆ ಸೀಮೆಯಲ್ಲಿ ಉಪಲಬ್ಧವಾದುದು ಒಂದು ಕಾರಣವಾಗಿದೆ, 'ಕ್ಷತ್ರಿಯ ಚೂಡಾಮಣಿ'ಯೆನಿಸಿದ ಕುಂಬಳೆಯ ಜಯಸಿಂಹ ಅರಸನು 10ನೇ ಶತಮಾನದಲ್ಲಿ ಕೆತ್ತಿಸಿದ ಕಾವ್ಯ ರೂಪದ ಶಾಸನವೊಂದು ಕಾಸರಗೋಡು ಸಮೀಪದ ತಳಂಗೆರೆ[2] ಎಂಬಲ್ಲಿ ದೊರೆತಿರುವುದು ಅವರ ಆಡಳಿತ ಭದ್ರತೆಯನ್ನು ತೋರಿಸುತ್ತದೆ.

ಕ್ರಿ. ಶ. 17ನೇ ಶತಮಾನದಲ್ಲಿ ಕುಂಬಳೆಯ ಪಾರ್ತಿಸುಬ್ಬನು ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ರಚಿಸಿದ್ದು ಇದೇ ಕುಂಬಳೆ ಸೀಮೆಯಲ್ಲಿ. "ಪಾರ್ತಿಸುಬ್ಬನ ನಂತರ ಸುಮಾರು ಮೂವತ್ತೈದು ಯಕ್ಷಗಾನ ಕವಿಗಳು ಇಲ್ಲಿ ಹುಟ್ಟಿದರು. ಸುಮಾರು ನೂರಮೂವತ್ತೈದು ಯಕ್ಷಗಾನ ಪ್ರಸಂಗಗಳನ್ನು ಅವರು ನಮಗೆ ಒದಗಿಸಿದ್ದಾರೆ. ನಮ್ಮ ಮಟ್ಟಿಗೆ ಇದು ಗಿನ್ನೆಸ್ ದಾಖಲೆ".[3] ಸಾಹಿತ್ಯ - ಸಂಸ್ಕೃತಿ ಉಳಿದು ಬೆಳೆದು ಬರಬೇಕಾದರೆ ರಾಜಮನೆತನಗಳ ಬೆಂಬಲ - ಪ್ರೋತ್ಸಾಹ ಅಗತ್ಯ. ತುಳು ಭಾಷೆ - ಸಂಸ್ಕೃತಿ - ಸಾಹಿತ್ಯಕ್ಕೆ ಅಲ್ಪ ಪ್ರಮಾಣವಲ್ಲಾದರೂ ಕುಂಬಳೆ ಸೀಮೆಯಲ್ಲಿ ಅಂತಹ ಪ್ರೋತ್ಸಾಹ ದೊರೆಯಿತು.

ಹದಿನೇಳನೇ ಶತಮಾನದ (ಸುಮಾರು ಕ್ರಿ. ಶ. 1636) ವಿಷ್ಣುತುಂಗನ (ತುಂಗ ಕುಲೊಂತಾ ವಿಷ್ಣು - ಎಂದು ಶ್ರೀ ಭಾಗವತೊದಲ್ಲಿ ಹೇಳಲಾಗಿದೆ). 'ಶ್ರೀಭಾಗವತೊ' ಆ ಕಾಲದ ಕನ್ನಡ ಕಾವ್ಯ ಸಂಪ್ರದಾಯಕ್ಕನುಗುಣವಾಗಿ ಬರೆಯಲಾದ ವಿಸ್ತಾರವಾದ ವರ್ಣಕ ಕಾವ್ಯ. ಮಧೂರಿನ ಶರಳಾಯ ಮನೆತನದವರ ವಶದಲ್ಲಿದ್ದ ಈ ಕೃತಿಯ ಹಸ್ತಪ್ರತಿಯನ್ನು ಎಡನೀರಿನ ಶ್ರೀ ವೆಂಕಟರಾಜ

ಪುಣಿಂಚತ್ತಾಯರು ಸಂಶೋಧಿಸಿದರು. ಈ ಅಪರೂಪದ ಕೃತಿಯನ್ನು 1984 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿತು.

'ಶ್ರೀಭಾಗವತೊ' ದಲ್ಲಿ ಸಿಕ್ಕಿರುವುದು ಕೇವಲ ಮೂರು ಸ್ಕಂಧಗಳು. ಇದರಲ್ಲಿ ಸುಮಾರು ಎರಡು ಸಾವಿರದಷ್ಟು ಪದ್ಯಗಳಿವೆ. ಮೂಲ ಸಂಸ್ಕೃತ ಭಾರತದಲ್ಲಿ ಹನ್ನೆರಡು ಸ್ಕಂಧಗಳಿದ್ದು ಒಟ್ಟು ಹದಿನೆಂಟು ಸಾವಿರ ಶ್ಲೋಕಗಳಿವೆ. ಚಾಟು ವಿಠ್ಠಲನಾಥನ ಭಾಗವತದಲ್ಲಿ ಸುಮಾರು ಹನ್ನೆರಡು ಸಾವಿರ ಭಾಮಿನಿ ಷಟ್ಪದಿಗಳಿವೆ. ಇವೆರಡನ್ನು ಮುಂದಿರಿಸಿಕೊಂಡು ತುಳು ಭಾಗವತವನ್ನು ವಿಷ್ಣು ತುಂಗನು ಬರೆದಿದ್ದಾನೆ. "ತುಳು ಭಾಗವತೊದ ಇಡೀ ಭಾಗ ಸಿಕ್ಕಿರುತ್ತಿದ್ದರೆ ಹೆಚ್ಚು ಕಡಿಮೆ ಎಂಟು ಸಾವಿರ ಪದ್ಯಗಳು ನಮಗೆ ಸಿಗುತ್ತಿದ್ದವು."[4]

ಪುಣಿಂಚತ್ತಾಯರಿಂದಲೇ ಸಂಶೋಧಿಸಲ್ಪಟ್ಟ ಇನ್ನೊಂದು ಕಾವ್ಯಗ್ರಂಥವಾದ 'ಕಾವೇರಿ' ಕೂಡ ಸುಮಾರು 17ನೇ ಶತಮಾನದಲ್ಲಿ ರಚಿತವಾದದ್ದಾಗಿದೆ. ಕಾವೇರಿ ನದಿಯ ಮಹಿಮೆಯನ್ನು ಹಾಡಿಹೊಗಳುವ ಕಾವ್ಯವಾದ 'ಕಾವೇರಿ'ಯ ರಚಯಿತ ಯಾರು ಎಂಬುದು ತಿಳಿದುಬಂದಿಲ್ಲ. ಈ ಕಾವ್ಯದ ಮೊದಲ ಹಾಗೂ ಕೊನೆಯ ಐದೈದು ಅಧ್ಯಾಯಗಳೇ ದೊರೆತಿಲ್ಲ. ಆರನೇ ಅಧ್ಯಾಯದ ಒಂದು ಭಾಗವಷ್ಟೇ ದೊರೆತಿದೆ. ಅದರಲ್ಲೂ. ಮಧ್ಯದಲ್ಲಿಯೂ ಕೊನೆಯಲ್ಲಿಯೂ ಕೆಲವು ಭಾಗ ನಷ್ಟ ವಾಗಿದೆ. ಈಗ ದೊರಕಿದ್ದರಲ್ಲಿ ಸುಮಾರು 240 ಪದ್ಯಗಳಿವೆ. 'ಕಾವೇರಿ ಮಹಾತ್ಮೆ'ಯ ಸಂಸ್ಕೃತ ಮೂಲದೊಂದಿಗೆ ಹೋಲಿಸಿದರೆ ಮೂರನೇ ಒಂದು ಭಾಗವಷ್ಟೆ ದೊರೆತಿದೆ (ಈ ಕೃತಿಯನ್ನು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು 1987 ರಲ್ಲಿ ಪ್ರಕಟಿಸಿತು).

ಈ ಕವಿಯ ಮೇಲೆ ಕನ್ನಡ ಕವಿ ಕುಮಾರವ್ಯಾಸನ ಪ್ರಭಾವ ಸಾಕಷ್ಟು ಆಗಿರುವಂತಿದೆ. ಸಂಸ್ಕೃತ ವೃತ್ತಗಳಲ್ಲಿ ಕಾವ್ಯವನ್ನು ಬರೆದಿದ್ದು, ಪ್ರೌಢ ಸಂಸ್ಕೃತ ಮತ್ತು ಕನ್ನಡದ ಮಾದರಿಯಲ್ಲಿ ತುಳು ಸಾಹಿತ್ಯವನ್ನೂ ಬೆಳೆಸಬೇಕೆಂಬ ಇಚ್ಛೆ ಅವನಲ್ಲಿತ್ತು ಎಂಬುದು ತಿಳಿದುಬರುತ್ತದೆ. ವಿಷ್ಣುತುಂಗನಂತೂ 'ತುಳುಭಾಷೆಯಲ್ಲಿ ಈ ಕೃತಿ ರಚಿತವಾಗಿದೆಯೆಂದು ವಿದ್ವಾಂಸರು ಬೇಸರಿಸಬಾರದು' ಎಂಬ ಮಾತನ್ನು ಹೇಳಿದ್ದಾನೆ. ಸಂಸ್ಕೃತ ವೃತ್ತಗಳನ್ನು ಅನುಸರಿಸಿರುವುದು ಹಾಗೂ ಸಂಸ್ಕೃತದ ವಿಪುಲ ಪ್ರಯೋಗಗಳನ್ನು ಗಮನಿಸಿದರೆ ಈ ಕವಿಗಳಿಗಿಂತ ಹಿಂದೆ ಪ್ರೌಢ ತುಳು ಕಾವ್ಯ ಪರಂಪರೆಯೊಂದು ಇದ್ದಿರಲಿಲ್ಲ ಎಂದು ಊಹಿಸಬೇಕಾಗತ್ತದೆ. "ಬಹುಶಃ ಪ್ರೌಢ ಕಾವ್ಯಗಳಿಗೆ ಸಿದ್ಧವಾಗದ ಭಾಷೆಯೊಂದನ್ನು ಅದಕ್ಕೆ ಸಿದ್ಧಗೊಳಿಸುವಾಗ ಅದಾಗಲೇ ಸಾಕಷ್ಟು ಸಾಹಿತ್ಯಿಕ ಸಿದ್ಧಿಯನ್ನು ಪಡೆದ ಭಾಷೆಯ ಮಾದರಿಯನ್ನು ಅನುಸರಿಸುವುದು ಸಹಜವೇ ಆಗಿದೆ."[5]

ಈ ಕಾವ್ಯಗಳಲ್ಲಿ ತುಳುನಾಡಿನ ಬಗ್ಗೆ, ಜನರ ಬಗ್ಗೆ, ಕೃಷಿ ಬಗ್ಗೆ ಮಾಹಿತಿಗಳು ಸಿಗುತ್ತಿದ್ದು ಈಗ ಕಣ್ಮರೆಯಾಗಿರುವ ತುಳುವಿನ ವ್ಯಾಕರಣ ರೂಪ, ವಿಶಿಷ್ಟ ಪ್ರಯೋಗ ಗಳು, ನುಡಿಗಟ್ಟುಗಳು ದೊರೆಯುತ್ತವೆ. ಹಾಗಾಗಿ ತುಳುವಿನಲ್ಲಿಯೂ 'ಪಳಂತುಳು" (ಹಳೆಯ ತುಳು) ಎಂಬುದೊಂದು ಇತ್ತು ಎಂಬುದು ತಿಳಿದು ಬರುತ್ತದೆ.

ಪುಣಿಂಚತ್ತಾಯರೇ ಸಂಶೋಧಿಸಿರುವ 'ದೇವಿ ಮಹಾತ್ಮೆ' ಯು ಮಾರ್ಕಂಡೇಯ ಪುರಾಣದ ದೇವೀ ಮಹಾತ್ಮೆಯ ಆಧಾರದಲ್ಲಿ ತುಳುಗದ್ಯದಲ್ಲಿ ಬರೆಯಲಾದ ಗ್ರಂಥ. "ಇದನ್ನು ಬರೆದ ಕವಿ ತುಳುನಾಡಿನ ದಕ್ಷಿಣಕ್ಕಿರುವ ಕಾಸರಗೋಡು ಜಿಲ್ಲೆಯ ಹರಿಪುರ (ಪುಲ್ಲೂರು) ಗ್ರಾಮದ 'ತೆಕ್ಕಿಲ್ಲಾಯ' ಕುಲದ ಒಬ್ಬ ಕವಿ ಆಗಿರಬೇಕೆಂದು ಒಂದು ಊಹೆ. ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯ".[6] ದೇವೀಮಹಾತ್ಮೆಯ ತುಳು ಗದ್ಯವನ್ನು ನೋಡಿದರೆ 'ಭಾಗವತೊ' ಮತ್ತು 'ಕಾವೇರಿ' ಕಾವ್ಯಗಳಿಗಿಂತಲೂ ಭಾಷೆ ಪೂರ್ವದ್ದೆಂಬಂತೆ ತೋರುತ್ತದೆ. ಕಾವ್ಯ ಬರೆಯುವುದಕ್ಕೆ ಹಿಂದೆ ತುಳುವರು ಗದ್ಯದಲ್ಲಿ ಬರೆಯುತ್ತಿದ್ದಿರಬೇಕೆಂಬ ಊಹೆಗೆ ಅವಕಾಶವಿದೆ.

ಹದಿನೇಳನೇ ಶತಮಾನದಲ್ಲಿ ಆದ ಈ ಸಾಹಿತ್ಯಿಕ ಕಾರ್ಯದ ಬಳಿಕ ಸುಮಾರು 19 ನೇ ಶತಮಾನದವರೆಗೆ ತುಳು ಸಾಹಿತ್ಯದ ಬಗ್ಗೆ ನಮಗೆ ಏನೇನೂ ಮಾಹಿತಿ ದೊರೆಯುವುದಿಲ್ಲ. ಬರವಣಿಗೆ ಏನಾದರೂ ಆಗಿದ್ದರೂ ಅವೆಲ್ಲ ಕಾಲಗರ್ಭದಲ್ಲಿ ಮರೆಯಾಗಿ ಹೋಗಿವೆ. ಶ್ರೀಭಾಗವತೊ, ಕಾವೇರಿ, ದೇವೀಮಹಾತ್ಮೆ ಇತ್ಯಾದಿ ಉಪಲಬ್ಧ ಕೃತಿಗಳು ಮತ್ತು ತುಳು ಲಿಪಿಯಲ್ಲಿ ಬರೆಯಲಾಗಿರುವ ವೈದಿಕ ಮಂತ್ರ ಗಳನ್ನು ಅನುಲಕ್ಷಿಸಿದರೆ-ಸಾಹಿತ್ಯ ರಚನೆ ಆಗಿರಬೇಕು. ಆದರೆ ಅವು ನಮಗೆ ಸಿಕ್ಕಿಲ್ಲ ಎಂದು ಊಹಿಸಬೇಕಾಗುತ್ತದೆ.

ಕನ್ನಡ ನವೋದಯಕ್ಕೆ ಪೂರಕ ವಾತಾವರಣ ಕಲ್ಪಿಸಿಕೊಟ್ಟ ಕ್ರಿಶ್ಚಿಯನ್ ಮಿಶನರಿಗಳು ತುಳುಭಾಷೆ ಮತ್ತು ಸಾಹಿತ್ಯಕ್ಕೂ ತಮ್ಮ ಕಾಣಿಕೆ ನೀಡಿದ್ದು ಕಂಡು ಬರುತ್ತದೆ. ಹತ್ತೊಂಬತ್ತನೇ ಶತಮಾನದಲ್ಲಿ ಕರಾವಳಿಯಲ್ಲಿ ತಲೆಯೆತ್ತಿದ ಚರ್ಚ್ ಗಳಲ್ಲಿ ಏಸು ಸುವಾರ್ತೆಯನ್ನು ಸ್ಥಳೀಯ ಜನರಿಗೆ ಸ್ಥಳೀಯ ಭಾಷೆಯಲ್ಲಿ ಹೇಳ ಬೇಕಾದ ಅಗತ್ಯ ಪಾದ್ರಿಗಳಿಗೆ ಕಂಡುಬಂತು. ರೆವರೆಂಡ್ ಹೇಬಿಕ್, ರೆ. ಲೆನರ್, ಮೊಗ್ಲಿಂಗ್, ಬ್ರದರ್ ಗುಂಡರ್ಟ್ – ಮೊದಲಾದ ಪಾದ್ರಿಗಳು 1834 ರಷ್ಟು ಹಿಂದೆ ತುಳುಭಾಷೆಯನ್ನು ಕನ್ನಡ ಲಿಪಿಯಲ್ಲಿ ಬರೆಯುವ ಮೂಲಕ ಒಂದು ಐತಿಹಾಸಿಕ ಕ್ರಾಂತಿಗೆ ಕಾರಣಕರ್ತರಾದರು. ಅದುವರೆಗೆ ಆಡುಮಾತಿನ ಭಾಷೆಯಾಗಿದ್ದ ತುಳುವಿಗೆ ಕನ್ನಡ ಲಿಪಿಯ ಮೂಲಕ ದಾಖಲಾಗುವ ಸುಯೋಗ ಒದಗಿಬಂತು. ಕ್ರಿಶ್ಚಿಯನ್ ಮತಪ್ರಸಾರ ಮತ್ತು ಮತಾಂತರ ಅವರ ಮೂಲ ಉದ್ದೇಶವಾಗಿದ್ದರೂ ಕಾಲಾಂತರ ದಲ್ಲಿ ಅದರಿಂದ ತುಳುವಿಗೆ ಒಳ್ಳೆಯದೇ ಆಯಿತು.

ಇಂಗ್ಲಿಷ್ ಹಾಗೂ ಜರ್ಮನ್ ಭಾಷೆಗಳಲ್ಲಿದ್ದ ಕ್ರಿಸ್ತನ ಪ್ರಾರ್ಥನೆಗಳನ್ನು ಜಿ. ಅಮ್ಮನ್, ಜಿ. ಕಮರರ್, ಎ, ಮೆನ್ನರ್, ಆರ್. ಬುನ್ಸ್, ಬಿ. ಲೂಥಿ, ಎಚ್. ರಿಫ್, ಎಚ್. ಮೊಗ್ಲಿಂಗ್ – ಮೊದಲಾದ ವಿದೇಶೀ ಪಾದ್ರಿಗಳೂ ಇ. ಪಿ. ಕ್ಯಾರಟ್, ಎ. ಕೌಂಡಿನ್ಯ, ಎಲ್. ಜಿ. ದೇವದತ್ತ – ಮೊದಲಾದ ಭಾರತೀಯ ಪಾದ್ರಿಗಳೂ ತುಳು ಭಾಷೆಗೆ ಅನುವಾದಿಸಿದರು. 1864 ರಲ್ಲಿ 120 ಸಂಗೀತಗಳನ್ನು (ಪದ್ಯಗಳನ್ನು) ಅನುವಾದ ಮಾಡಲಾಯಿತು. 1878 ಮತ್ತು 1891 ರಲ್ಲಿ ಮತ್ತೆ 219 ಸಂಗೀತಗಳನ್ನು ಅನುವಾದ ಮಾಡಲಾಯಿತು. ಕಾಲಕಾಲಕ್ಕೆ ಇವನ್ನೆಲ್ಲ ಒಟ್ಟುಮಾಡಿ 'ತುಳು ಸಂಗೀತಗಳು', 'ತುಳು ಪ್ರಾರ್ಥನೆಗಳು', 'ರತ್ನಮಾಲೆ' ಮುಂತಾದ ಶೀರ್ಷಿಕೆಗಳಲ್ಲಿ ಪ್ರಕಟಿಸಲಾಯಿತೆಂದು ತಿಳಿದುಬರುತ್ತದೆ.

ಸಾಹಿತ್ಯಿಕವಾಗಿ ಇವಕ್ಕೆಲ್ಲ ವಿಶೇಷ ಮಹತ್ವ ಇಲ್ಲವಾದರೂ ಅನುವಾದದ ಮೂಲಕ ಹೊಸ ಕವಿತೆಗಳ ಸೃಷ್ಟಿಗೆ ಮೊದಲಾಯಿತೆಂದು ಹೇಳಬಹುದು. ಈ ಅನುವಾದ ಕವಿತೆಗಳು ತುಳು ಕವನ ಸಾಹಿತ್ಯದ ಒಂದು ಭಾಗ ಮಾತ್ರ. ಬೇರಾವುದೇ ರೀತಿಯಲ್ಲಿ ಈ 'ಸಂಗೀತಗಳು' (ಪದ್ಯಗಳು) ಆಧುನಿಕ ತುಳುಕವನಗಳಿಗೆ ಪ್ರಭಾವ ಪ್ರೇರಣೆ ಕೊಟ್ಟುದು ಕಂಡು ಬರುವುದಿಲ್ಲ. ಇಪ್ಪತ್ತನೇ ಶತಮಾನದಲ್ಲಿ ತುಳುವಿನಲ್ಲಿ ರಚನೆಯಾಗತೊಡಗಿದ ಕವನಗಳಿಗೆ ಕನ್ನಡ ಸಾಹಿತ್ಯದಿಂದ ಪ್ರೇರಣೆಯೊದಗಿತು.

ಉಡುಪಿಯ ವಾದಿರಾಜ ಸ್ವಾಮಿಗಳು (ಕ್ರಿ.ಶ. 1480-1600) ಬರೆದ 'ದಶಾವತಾರ' ಕೀರ್ತನೆಯನ್ನು ತುಳುವಿನ ಮೊಟ್ಟಮೊದಲ ಕವನ ಎಂದು ಹೇಳಬಹುದು. ಕೀರ್ತನೆ, ಭಜನೆಗಳ ಸಂದರ್ಭದಲ್ಲಿ ಹೇಳಲಾಗುತ್ತಿದ್ದ ಆ ಕವನವು ಸಂಸ್ಕೃತ ಭೂಯಿಷ್ಠವಾದರೂ ತುಳುವಿನ ಸತ್ತ್ವಗಳನ್ನು ಒಳಗೊಂಡು ಹೃದಯಂಗಮವಾಗಿದೆ, ಆದರೆ ಅದೇ ಹಾದಿಯನ್ನು ಅನುಸರಿಸಿ ಇತರರು ಆ ರೀತಿಯಾಕೆ ಕವನಗಳನ್ನು ಬರೆಯಲಿಲ್ಲವೆಂಬುದು ಆಶ್ಚರ್ಯಕರವಾಗಿದೆ. ಮಠಾಧಿಪತಿ, ಸ್ವಾಮೀಜಿ, ಪೂಜೆ, ಭಜನೆಗಳ ಸಂದರ್ಭಕ್ಕೆಂದು ಬರೆದ ಕೀರ್ತನೆಯಾದುದರಿಂದ ಇತರರು ಆ ಹಾದಿಯನ್ನು ತುಳಿಯಲು ಸಹಜವಾಗಿಯೇ ಹಿಂದೆಗೆದಿರಬೇಕು.

ಆದರೆ ಇಪ್ಪತ್ತನೇ ಶತಮಾನದಲ್ಲಿ ಇಂತಹ ಅನುಮಾನಗಳಿರಲಿಲ್ಲ. ಕನ್ನಡ ನವೋದಯಕ್ಕೆ ಬಾಗಿಲಾದ ದಕ್ಷಿಣ ಕನ್ನಡ ಜಿಲ್ಲೆಯಿಂದ, ಅದಕ್ಕೂ ಮೊದಲೇ ಅಂದರೆ 1916 ರ ವೇಳೆಗೆ ಎಂ. ಆರ್. ಸುಬ್ರಹ್ಮಣ್ಯ ಶಾಸ್ತ್ರಿಗಳ "ತುಳು ಕನ್ಯೋಪದೇಶ" ಕೃತಿ ಪ್ರಕಟವಾಯಿತು.[7] 'ಅನುಷ್ಟುಪ್' ಛಂದಸ್ಸಿನಲ್ಲಿ ಬರೆಯಲಾದ ಈ ಕೃತಿ ಬ್ರಾಹ್ಮಣರ ತುಳುವಿನಲ್ಲಿದೆ.

1929 ರಲ್ಲಿ ನಂದಳಿಕೆ ಶೀನಪ್ಪ ಹೆಗ್ಡೆಯವರ 'ತುಳುವಾಲ ಬಲಿಯೇಂದ್ರೆ' ಪ್ರಕಟವಾಯಿತು. ನರ್ಕಳ ಮರಾರಪ್ಪ ಶೆಟ್ಟರ 'ಅಮಲ್‌ದೆಪ್ಪಡೆ' (1932) ಮತ್ತು

ಎಂ. ಸಿ. ವಿ. ಶರ್ಮರ 'ಕನ್ನಡಕೊ' 1930 ರ ಮುನ್ನ ಪ್ರಕಟವಾಗಿವೆ, ಇಸವಿ ನಮೂದಿತವಾಗಿಲ್ಲ. 1930-1935 ರ ಮಧ್ಯೆ ನಾರಾಯಣಕಿಲ್ಲೆಯವರ 'ಕಾನಿಗೆ' (1932), ಬಿ. ಮೋನಪ್ಪ ತಿಂಗಳಾಯರ 'ತುಳು ಪದ್ಯಾವಳಿ' (1930), ಸರ್ಕಳ ಮಾರಪ್ಪ ಶೆಟ್ಟರ 'ಪೊರ್ಲಕಂಟ್' (1930), ಕೆ. ಗಂಗಾಧರ ರಾಮಚಂದ್ರರ 'ತುಳು ಪದ್ಯಮಾಲಿಕೆ' (1933) - ಹೀಗೆ ಹಲವು ಕವನ ಸಂಕಲನಗಳು ಪ್ರಕಟಗೊಂಡವು. ಈ ಅವಧಿಯನ್ನು ವಿಮರ್ಶಕರಾದ ಮುರಳೀಧರ ಉಪಾಧ್ಯರು ನವೋದಯ ಕಾವ್ಯ (ಬೊಳ್ಕಿರ್ ಕಾವ್ಯ) ಎಂದು ಕರೆದಿದ್ದಾರೆ.[8] ಇದೇ ಅವಧಿಯಲ್ಲಿ ಎಸ್. ಯು. ಪಣಿಯಾಡಿ, ನಂದಳಿಕೆ ಶೀನಪ್ಪ ಹೆಗ್ಡೆ ಮತ್ತು ಕೆ. ಬಿ. ನಾರಾಯಣ ಕಿಲ್ಲೆಯವರ ಮುಂದಾಳತ್ವದಲ್ಲಿ ತುಳು ಚಳುವಳಿ ಕೂಡ ನಡೆಯಿತು. ಸ್ವಾತಂತ್ರ್ಯ ಚಳವಳಿ ಮತ್ತು ಕನ್ನಡ ನವೋದಯ ಚಳವಳಿಗಳು ಗಟ್ಟಿಗೊಂಡ ಈ ಅವಧಿಯಲ್ಲಿ ತುಳು ಚಳವಳಿಯೂ ನಡೆದುದರಿಂದ ತುಳುವಿಗೊಂದು ಗಟ್ಟಿ ಪಂಚಾಂಗ ಲಭ್ಯವಾದಂತಾಯಿತು. ಈ ಚಳವಳಿಯ ಬಗ್ಗೆ ಡಾ॥ ಯು. ಪಿ. ಉಪಾಧ್ಯಾಯರು, ತುಳುವರು ಅಸ್ಮಿತ್ವ ತೋರಿಸಿ ಕೊಳ್ಳಲು ಮತ್ತು ಸಾಂಸ್ಕೃತಿಕ ಮೌಲ್ಯಗಳ ಪುನಶ್ಶೋಧನೆ ಮಾಡಿಕೊಳ್ಳಲು ಪ್ರಯತ್ನ ಪಟ್ಟ ಕಾಲಘಟ್ಟ ಎಂದು ಕರೆದಿದ್ದಾರೆ.[9]

ಅಲ್ಲಿಂದ ಮುಂದೆ ಸ್ವಲ್ಪ ಸಮಯ ಮೌನವಾದ ತುಳು ಕಾವ್ಯಕೃಷಿ ದಾಮೋದರ ಪುಣಿಂಚತ್ತಾಯರ 'ಕುಂಬಳೆ ಸೀಮೆತ ಚರಿತ್ರೆ' ಮತ್ತು 'ಸ್ತುತಿಪದ್ಯೊಲು' ಮೂಲಕ ಮತ್ತೆ ಮೊದಲಾಯಿತು (ಇವುಗಳ ಪ್ರಕಟಣೆಯ ವರ್ಷ ಲಭ್ಯವಿಲ್ಲ. ಬಹುಶಃ 1945 ರಿಂದ 1950 ರ ಮಧ್ಯೆ ಆಗಿರಬೇಕು). ಈ ಕೃತಿಗಳ ಪ್ರಕಟಣೆ ಒಂದೆಡೆ ಬಾಡೂರು ಜಗನ್ನಾಥ ರೈಗಳಿಗೆ, ಕೆಮ್ತೂರು ದೊಡ್ಡಣ್ಣ ಶೆಟ್ಟರಿಗೆ, ಬಿ. ದೂಮಪ್ಪ ಮಾಸ್ತರ್‌ಗೆ, ಸೀತಾನದಿ ಗಣಪಯ್ಯ ಶೆಟ್ಟರಿಗೆ, ಪ್ರಭಾವ–ಪ್ರೇರಣೆಕೊಟ್ಟರೆ ; ಇನ್ನೊಂದೆಡೆ, ಗಣಪತಿ ದಿವಾಣರ 'ತುಳು ಪದ್ಯಾವಳಿ' (1964), ಪಾ. ವೆಂ. ಆಚಾರ್ಯರ 'ಬಯ್ಯಮಲ್ಲಿಗೆ' (1981) ಮತ್ತು ವೆಂಕಟರಾಜ ಪುಣಿಂಚತ್ತಾಯರ 'ಆಲಡೆ' (1983) ಮೊದಲಾದ ಕೃತಿಗಳು ಹೊರಬರುವುವಕ್ಕೆ ಆಸ್ಪದ ನೀಡಿತು. ಅಂದರೆ, ಮತ್ತೆ ತುಳು ಕೃತಿಗಳ ಪ್ರಕಟಣೆಗೆ 'ಕುಂಬಳೆ ಸೀಮೆತ ಚರಿತ್ರೆ' ಅನುವು ಮಾಡಿಕೊಟ್ಟಿತು. ಈ ಕೊನೆಯ ಮೂರು ಕವನ ಸಂಕಲನಗಳಿಗೆ ಆಧುನಿಕ ತುಳು ಸಾಹಿತ್ಯದಲ್ಲಿ ಗಮನಾರ್ಹ ಸ್ಥಾನವಿದೆ. ಹೊಸ ತುಳು ಕವಿತೆಗಳಿಗೆ ಒಂದು ಸ್ಪಷ್ಟ ರೂಪು ಸಿಕ್ಕಿ ಮುಂದೆ ಹೋಗುವ ಹಾದಿ ಈ ಸಂಕಲನಗಳಿಂದಾಗಿ ಲಭ್ಯವಾಯಿತು.

ತುಳುವಿನಲ್ಲಿ 'ಮಂದಾರ ರಾಮಾಯಣ'ವೆಂಬ ಮಹಾಕಾವ್ಯ ಬರೆದ ಕೀರ್ತಿ ಮಂದಾರ ಕೇಶವ ಭಟ್ಟರಿಗೆ ಸಲ್ಲುತ್ತದೆ. ತುಳು ಶಿಷ್ಟ ಸಾಹಿತ್ಯದ ಸತ್ವದಲ್ಲಿ ಅದಕ್ಕೆ ಎತ್ತರದ ಮಣೆ ಇದೆ. ತುಳುನಾಡಿನ ಬಗ್ಗೆ, ಅಲ್ಲಿನ ಜನ ಜೀವನದ ಬಗ್ಗೆ, ಕೃಷಿ ಕಸುಬು ಇತ್ಯಾದಿಗಳ ಬಗ್ಗೆ ಆ ಕಾವ್ಯದಲ್ಲಿ ಒಳ ನೋಟಗಳು ಸಿಗುತ್ತವೆ.

ರಾಮಾಯಣದ ಕತೆಯನ್ನು ಸರಳ ರಗಳೆ ಛಂದಸ್ಸಿನಲ್ಲಿ ಬರೆಯಲಾಗಿದ್ದು, ಇದು, ಆ ರೀತಿಯ ಪ್ರಪ್ರಥಮ ಕೆಲಸವಾಗಿದೆ. ಕಲೀಜ ಸೀತಾರಾಮ ಆಳ್ವರು ಮಹಾಭಾರತವನ್ನು ಭಾಮಿನಿ ಷಟ್ಪದಿಯಲ್ಲಿ ತುಳುವಿನಲ್ಲಿ ಬರೆದಿದ್ದಾರೆ. ಸುಲಲಿತವಾದ ತುಳು ಭಾಷೆಯಲ್ಲಿ ಮಹಾಭಾರತದ ಕಥೆ ಹರಿದು ಬಂದಿದ್ದು ವರ್ಣನೆಗಳು ಸರಿಮಿಗಿಲಾಗಿ ಮೂಡಿವೆ. ಈ ಕೃತಿ 'ಅಪ್ರಕಟವಾಗಿದ್ದು, ಅದರ ಕೆಲವು ಭಾಗಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಆಳ್ವರ 'ತುಳು ಹರಿಶ್ಚಂದ್ರ ಕಾವ್ಯೊ' ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ಸಾಂಗತ್ಯದಲ್ಲಿ ಸುಂದರವಾಗಿ ತುಳುವೀಕರಿಸಿದ ಕಾವ್ಯ.

ಭಾಷೆಯ ಶ್ರೀಮಂತಿಕೆಯನ್ನು - ಮೂಲ ಶಬ್ದಗಳನ್ನು ಪ್ರಯೋಗಿಸಿ ತೋರಿಸಿದವರೆಂದರೆ, ಪಾ. ವೆಂ. ಆಚಾರ್ಯ, ವೆಂಕಟರಾಜ ಪುಣಿಂಚತ್ತಾಯ ಮತ್ತು ಕೆದಂಬಾಡಿ ಜತ್ತಪ್ಪ ರೈ. ಪಾ. ವೆಂ. ಆಚಾರ್ಯರ ಭಾಷೆಯ ವ್ಯಂಗ್ಯ ಮತ್ತು ಮೊನೆ ಮೇಲ್ಮರಗತಿಯದು. 'ಬಯ್ಯಮಲ್ಲಿಗೆ' ಸಂಕಲನದಲ್ಲಿರುವ ಕವಿತೆ 'ಗೋಪಿ' ಉತ್ಕೃಷ್ಟವಾಗಿದೆ. ಈ ಕವಿತೆಯನ್ನು ಅವರು ಕನ್ನಡದಲ್ಲೂ ಬರೆದಿದ್ದಾರೆ. ಧ್ವನಿಪೂರ್ಣವಾದ ಭಾವಗೀತಾತ್ಮಕತೆ ಅವರ ಕವಿತೆಗಳ ವೈಶಿಷ್ಟ್ಯ. ಹೆಚ್ಚು ಭಾವಗೀತೆಗಳನ್ನು, ಭಕ್ತಿಗೀತೆಗಳನ್ನು ಬರೆದಿರುವ ವೆಂಕಟರಾಜ ಪುಣಿಂಚತ್ತಾಯರ ಕವಿತೆಗಳಿಗೆ ಕನ್ನಡ ನವೋದಯ ಪ್ರಭಾವ ಬೀರಿದಂತಿದೆ. ತುಳು ಮಾತೃಭಾಷೆಯಾಗುಳ್ಳ ಕೆದಂಬಾಡಿ ಜತ್ತಪ್ಪ ರೈಯವರು ಮೊದಲು ಕನ್ನಡದಲ್ಲಿ ಬರವಣಿಗೆ ಆರಂಭಿಸಿ (ಬೇಟೆಯ ನೆನಪುಗಳು - ಸಾಹಿತ್ಯ ಅಕಾಡೆಮಿ ಪುರಸ್ಕೃತ ಕೃತಿ), ಅನಂತರ ತುಳುವಿನಲ್ಲಿ ಬರೆಯತೊಡಗಿದರು. ಸ್ವತಂತ್ರ ಕೃತಿಗಳನ್ನಲ್ಲದೆ ಅನುವಾದಗಳನ್ನೂ ಅವರು ಮಾಡಿದ್ದಾರೆ. ಶ್ರೀಮಂತವಾದ ವರ್ಣನೆ ಮತ್ತು ಭಾಷೆಯ ಲಯಗಾರಿಕೆಗಳನ್ನು ಅವರ ಕೃತಿಗಳಲ್ಲಿ ಕಾಣಬಹುದು.

ರಸಿಕ ಪುತ್ತಿಗೆಯವರ ಕವನಗಳು ತುಸು ವಾಚ್ಯವೆಂದು ಅನಿಸಿದರೂ ಸರಸ ಹಾಸ್ಯ ಮತ್ತು ವಿನೋದ ಅವರ ರಚನೆಗಳಲ್ಲಿವೆ. 'ಮಾಣಿಗೆರಡು ಪಾತೆರೊ' (ಮಗುವಿಗೆರಡು ಮಾತು) ಎಂದೇ ಭಾಮಿನಿ ಷಟ್ಪದಿಯಲ್ಲಿ ನೀತಿ ಪದ್ಯಗಳನ್ನು ಬರೆಯುವ ಪುತ್ತಿಗೆ ಈಶ್ವರ ಭಟ್ಟರು, ಪುರಂದರದಾಸರ ಪದಗಳನ್ನು ತುಳುವಿಗೆ ಅನುವಾದಿಸಿದ ಕಬ್ಬಿನಾಲೆ ವಸಂತ ಭಾರದ್ವಾಜರು, ಸುಭಾಷಿತಗಳನ್ನು ತುಳುವಿಗೆ ಅನುವಾದಿಸಿದ ಕೆ. ಪದ್ಮನಾಭ ಕೇಕುಣ್ಣಾಯ ಮತ್ತು ಬಿಡಿಗವಿತೆಗಳನ್ನು ಬರೆಯುತ್ತಿರುವ ಎಚ್. ಶಕುಂತಲಾ ಭಟ್ ಹಳೆಯಂಗಡಿ ಬ್ರಾಹ್ಮಣರ ತುಳುವಿನ ವೈಶಿಷ್ಟ್ಯಗಳನ್ನು ತೋರಿಸಿದರೆ, ಎಂ. ರತ್ನಕುಮಾರ್ ಹಾಗೂ ರವಿಕಿರಣರವರು ಜೈನರ ತುಳುವಿನ ಲಕ್ಷಣಗಳನ್ನು ಮೆರೆದಿದ್ದಾರೆ. 'ಮಂಕುತಿಮ್ಮನ ಕಗ್ಗ'ದ ರೀತಿಯಲ್ಲಿ 'ಪೆಂಗದೂಮನ ಕಬಿತೆಲು' ಬರೆದ ಅ. ಬಾಲಕೃಷ್ಣ ಶೆಟ್ಟಿ ಪೊಳಲಿ ಹಾಗೂ ಭಾಮಿನಿ ಷಟ್ಪದಿಯಿಂದ ಪ್ರಭಾವಿತರಾದ ಇನ್ನೋರ್ವ ಕವಿ ಎನ್. ಪಿ. ಶೆಟ್ಟಿ [ಮಹಾಭಾರತದ ಗೋಗ್ರಹಣ

ಪ್ರಸಂಗವನ್ನು ಭಾಮಿನಿ ಷಟ್ಪದಿಯಲ್ಲಿ 'ಬತ್ತೆ ಕೆತ್ತರೆ ಉತ್ತರೆ' (ಒಣಪೌರುಷದ ಉತ್ತರ) ಎಂಬ ಹೆಸರಿನಲ್ಲಿ ರಚಿಸಿದವರು] ಭಾಷೆಯ ವೈಶಿಷ್ಟ್ಯಗಳನ್ನು ತೋರಿಸುತ್ತಿದ್ದಾರೆ.

ಹೊರನಾಡಿನಲ್ಲಿದ್ದು, ಬೇರೆ ಊರುಗಳಲ್ಲಿದ್ದು ಕೆಲವರು ತುಳುವಿನಲ್ಲಿ ಬರೆಯುತ್ತಿರುವುದು ವಿಶೇಷ. ಬಾ, ಸಾಮಗ ಮಲ್ಪೆ, ಬೆಳ್ಳಿಪ್ಪಾಡಿ ಸತೀಶ ರೈ, ರವಿಕಿರಣ, ಕೋಡು ಭೋಜ ಶೆಟ್ಟಿ, ಶ್ರೀನಿವಾಸ ಮಂಕುಡೆ, ಪೇರೂರು ಜಾರು, ಸುನೀತಾ ಶೆಟ್ಟಿ, ಕೆ. ಸಂಜೀವ ಶೆಟ್ಟಿ, ಪೆರ್ಡೂರು ಭಾಸ್ಕರ ಶೆಟ್ಟಿ ಮೊದಲಾದವರ ರಚನೆಗಳು ತುಸು ಭಾವನಾತ್ಮಕವಾಗಿರುತ್ತವೆ. ಆರಂಭದ ದಿಸೆಯ ಸಾಹಿತ್ಯಕ ರಚನೆಗಳು ಬಹುಶಃ ಇದೇ ರೀತಿ ಇರುತ್ತವೆ ಎಂದು ತೋರುತ್ತದೆ.

ಎಂ. ಜಯರಾಮ ರೈ, ಸಂಜೀವ ಶೆಟ್ಟಿ ಮುಂಬಯಿ ಮತ್ತು ಶ್ರೀಮತಿ ಸುನಿತಾ ಶೆಟ್ಟಿಯವರು ಭಾವನಾತ್ಮಕವಾಗಿದ್ದೂ ತುಳು ಸಂಸ್ಕೃತಿಯ ಒಡಲಿನಿಂದ ಬರೆಯುವುದನ್ನು ಕಾಣಬಹುದು. ಜೊತೆಗೆ ಶತಮಾನದ ಹಿಂದೆ ಊರುಬಿಟ್ಟು ಹೋದ ತುಳುವರ ನೆಲದೊಂದಿಗಣ ಸಂಬಂಧ, ನಗರೀಕರಣದ ಅತಂತ್ರತೆ, ಕಷ್ಟ-ನಷ್ಟಗಳು ಅವರ ಕವಿತೆಗಳಲ್ಲಿ ರೂಪು ತಳೆಯುತ್ತವೆ.

ಯುವ ಕವಿಗಳ ಪೈಕಿ ಕೋಡು ಭೋಜ ಶೆಟ್ಟಿ ಮತ್ತು ದಿನೇಶ್ ಅಮಿನ್ ಮಟ್ಟು ಅವರು ಸಾಮಾಜಿಕ ವಸ್ತುಗಳನ್ನು ಹಾಗೂ ಸಮಸಾಮಯಿಕ ವಿಷಯಗಳನ್ನು ತೆಗೆದುಕೊಂಡು ಬರೆಯುತ್ತಾರೆ. ಆದರೆ ಕಾವ್ಯಾಂಶ ಮತ್ತು ಶಿಲ್ಪದ ಕಡೆಗೆ ಇವರು ತುಸು ಗಮನ ಕೊಟ್ಟಿದ್ದಾದರೆ ಒಳ್ಳೆಯ ಕವಿತೆಗಳನ್ನು ಇವರಿಂದ ನಿರೀಕ್ಷಿಸಬಹುದು.

ತಂಬಿಲ, ರಂಗಿತ ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ ಅಮೃತ ಸೋಮೇಶ್ವರ ಅವರ ತುಳುಸೇವೆ ಬಹಳ ದೊಡ್ಡದು. ಸಾಹಿತ್ಯದ ಬೇರೆ ಬೇರೆ ಮಗ್ಗುಲುಗಳಲ್ಲಿ ಅವರು ಸಾರ್ಥಕ ಕೆಲಸ ಮಾಡಿದ್ದಾರೆ. ತುಳುವಿನ ಮೂಲ ಶಬ್ದಗಳನ್ನು ಹುಡುಕಿ ತೆಗೆದು ಅವರು ಪ್ರಯೋಗಿಸುತ್ತಾರೆ. ಸುಂದರವಾದ ಅನುರಣನ ಉಂಟುಮಾಡುವ, ಲಾಲಿತ್ಯಪೂರ್ಣವಾದ ಅವರ ರಚನೆಗಳಲ್ಲಿ ವರ್ಣನೆಯ ಅಂಶ ಹೆಚ್ಚೆಂದು ತೋರುತ್ತದೆ.

ತುಳುವಿನ ವಾಸನೆ ಘಾಳೆಂದು ಎದ್ದು ಕಾಣುವುದು ಕಯ್ಯಾರ ಕಿಂಞಣ್ಣ ರೈ, ಪಡಾರು ಮಹಾಬಲೇಶ್ವರ ಭಟ್ಟ, ಗಣಪತಿ ದಿವಾಣ ಮೊದಲಾದವರ ರಚನೆಗಳಲ್ಲಿ. ಭಾವಸ್ತರ ಮತ್ತು ಅರ್ಥಸ್ತರಗಳೆರಡರಲ್ಲೂ ಅವರ ಕವಿತೆಗಳು ಸಮಾನವಾಗಿ ವ್ಯವಹರಿಸುತ್ತವೆ.

ಭಾವಗೀತೆಗಳ ಪ್ರಕಾರದಲ್ಲಿ ವೆಂಕಟರಾಜು ಪುಣಿಂಚತ್ತಾಯ, ಪ್ರಮೋದಾ ಕೆ. ಸುವರ್ಣ, ಕೆ. ಲೀಲಾವತಿ, ಅಮೃತ ಸೋಮೇಶ್ವರ, ಕದಂಬಾಡಿ ಜತ್ತಪ್ಪ ರೈ, ಕನರಾಡಿ ವಾದಿರಾಜ ಭಟ್ಟ, ವಾಮನ ನಂದಾವರ, ಮನು ಇಡ್ಯಾ ಮೊದಲಾದವರು ಅರ್ಥಪೂರ್ಣ ರಚನೆಗಳನ್ನು ಕೊಟ್ಟಿದ್ದಾರೆ. ಪ್ರಮೋದಾ ಕೆ. ಸುವರ್ಣ ಅವರ ಪೂಮಾಲೆ, ಮುಡಿಪು, ಪದರಂಗಿತಗಳಲ್ಲಿ ಹಲವಾರು ಉತ್ತಮ ಭಾವಗೀತೆಗಳಿವೆ. ಕನರಾಡಿ ಹಾಗೂ ಪುಣಿಂಚತ್ತಾಯರ ರಚನೆಗಳು ಅಧ್ಯಾತ್ಮದ ನೆಲೆಗಳಲ್ಲೂ ವ್ಯವಹರಿಸುವುದನ್ನು ಕಾಣಬಹುದು. ಪುಣಿಂಚತ್ತಾಯರು ಸುಮಾರು ಹತ್ತು ತುಳು ಕ್ಯಾಸೆಟ್‌ಗಳಿಗೆ ಭಕ್ತಿಗೀತೆಗಳನ್ನು ರಚಿಸಿ ಕೊಟ್ಟಿದ್ದಾರೆ (ಮದಿಮೆ ಸೋಬಾನೆ, ಭಕ್ತಿವಾಹಿನಿ, ಪಾದೊಗು ಸೊಲ್ಮೆ, ಶ್ರೀಕೃಷ್ಣ ದರ್ಶನೊ, ಧರ್ಮಸ್ಥಳ ವೈಭವೊ, ನಮೋ ಲೋಕಮಾತೆ, ಜಯಜಯ ಮೂಕಾಂಬಿಕೆ, ವೃದಾವನೊ, ತುಳುನಾಡ ವೈಭವೊ, ಸುಗಿಪು ದುನಿಪು-ಇತ್ಯಾದಿ).

ತುಳು ಜನರ ಬದುಕು, ಆಚಾರ ವಿಚಾರ, ಹೆಣ್ಣಿನ ಕಷ್ಟ ಸಂಕಟಗಳನ್ನು ಭಾಷೆಯು ಎಲ್ಲ ಸತ್ತ್ವದೊಂದಿಗೆ ಚಿತ್ರಿಸುತ್ತಿರುವ ಆತ್ರಾಡಿ ಅಮೃತಾ ಶೆಟ್ಟಿ ಸ್ವಲ್ಪ ಮಟ್ಟಿಗೆ ಸ್ತ್ರೀವಾದಿಯಂತೆಯೂ ತೋರುತ್ತಾರೆ. ಕನ್ನಡ ನವ್ಯಕವಿತೆಯ ಸಾರವನ್ನು ಮೈಗೂಡಿಸಿಕೊಂಡು ಇವರೊಂದಿಗೆ ಬೇಬಿಶೆಟ್ಟಿ ನೈಮಾಡಿ ಮತ್ತು ಕಾಂತಿ ಶಿರ್ವ ಕೂಡ ಬರೆಯುತ್ತಿದ್ದಾರೆ.

ಶೋಷಣೆಗೊಳಗಾದ ಕೆಳವರ್ಗದ ಜನರ ನೋವು ದುಮ್ಮಾನಗಳನ್ನು ಕೆ. ಪಿ. ಅಮಿಾನ್, ಬಿ. ಪಿ. ಕೋಡಿಬೆಂಗ್ರೆ, ಚೆನ್ನಪ್ಪ ಅಳಿಕೆ, ಪೇರೂರು ಜಾರು ಮೊಲಾದವರ ಕವಿತೆಗಳಲ್ಲಿ ಕಾಣಬಹುದು.

ಅನುವಾದಗಳ ಮೂಲಕ ತುಳು ಕಾವ್ಯಲೋಕವನ್ನು ಶ್ರೀಮಂತಗೊಳಿಸಿ ದವರೆಂದರೆ ಕೆದಂಬಾಡಿ ಜತ್ತಪ್ಪರೈ, ಅಮೃತ ಸೋಮೇಶ್ವರ, ಕೆ. ಪದ್ಮನಾಭ ಕೇಕುಣ್ಣಾಯ, ಅ. ಬಾಲಕೃಷ್ಣ ಶೆಟ್ಟಿಪೊಳಲಿ ಮೊದಲಾದವರು. ಬಿ. ಎ. ವಿವೇಕ ರೈಯವರು ಕೆಲವು ಇಂಗ್ಲಿಷ್ ಕವನಗಳನ್ನು ತುಳುವಿಗೆ ಅನುವಾದಿಸಿ ಆ ನಿಟ್ಟಿನಲ್ಲಿ ಕೆಲಸ ಮಾಡುವವರಿಗೆ ತೋರುಬೆರಳು ತೋರಿಸಿದ್ದಾರೆ.

ನಾಟಕ ಸಾಹಿತ್ಯದಲ್ಲಿ ತುಳುವಿಗೆ ಸಿಕ್ಕಿದ ಯಶಸ್ಸು ಕವಿತೆ ಹಾಗೂ ಕಥಾ ಸಾಹಿತ್ಯದಲ್ಲಿ ದೊರೆತಿಲ್ಲ. ನಾಟಕಗಳಿಗೆ ಸಿಕ್ಕುವ ಪ್ರಯೋಗಾವಕಾಶಗಳು ಅದಕ್ಕೆ ಕಾರಣ. ಕವಿತೆ ಹಾಗೂ ಕಥಾಸಾಹಿತ್ಯಕ್ಕೆ ಅಂತಹ ಅವಕಾಶಗಳು ಒದಗಿಲ್ಲ.

ತುಳು ಕವಿಗಳು ಹೆಚ್ಚಾಗಿ ತುಳುನಾಡಿನ ಜನಜೀವನ, ಭಾಷೆ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ತುಂಬ ಭಾವುಕವಾಗಿ ಬರೆಯುವುದನ್ನು ಕಾಣುತ್ತೇವೆ. ಇದು ತಪ್ಪು ಎಂದಲ್ಲ. ಆದರೆ ಭಾವುಕತೆ ಮಾತ್ರ ಕವಿಗೆ ಆಗುವುದಿಲ್ಲ ಎಂಬುದನ್ನು

ತಿಳಿಯಬೇಕು. ಕವಿತೆಗಳಲ್ಲಿ ಬೇರೆ ಬೇರೆ ರೀತಿಯ ಪ್ರಯೋಗಗಳು ಆಗಬೇಕು. ವಸ್ತು ವೈವಿಧ್ಯ ಇರಬೇಕು. ಕಾವ್ಯವನ್ನು ಒಂದು ಕಲೆಯಾಗಿ ಪರಿಗಣಿಸಿ ಜೀವನ ಸತ್ಯಗಳನ್ನು ಅವುಗಳಲ್ಲಿ ಪ್ರತಿಬಿಂಬಿಸುವ ಕೆಲಸ ಆದರೆ ಮಾತ್ರ ಅವು ನಾಲ್ಕು ಕಾಲ ಉಳಿದಾವು. ತುಳುವಿನಲ್ಲಿ ಅಂತಹ ಪ್ರಯತ್ನ ಈಗ ಆರಂಭಗೊಂಡಿದೆ ಯೆಂಬುದು ಸಂತೋಷದ ಸಂಗತಿ.

ತುಳು ಕಾವ್ಯ ಸಮೀಕ್ಷೆ ನಡೆಸಿದ ಬಳಿಕ ಇದುವರೆಗೆ ತುಳುವಿನಲ್ಲಿ ಪ್ರಕಟವಾಗಿರುವ ಕವನ ಸಂಕಲನಗಳ ಯಾದಿಯನ್ನು ಹೀಗೆ ಕೊಡಬಹುದು. ಇದು, ತುಳುವಿನಲ್ಲಿ ನಡೆಯುತ್ತಿರುವ ಕಾವ್ಯಕೃಷಿಯ ಬಗೆಗಿನ ಒಂದು ಸ್ಥೂಲ ಚಿತ್ರಣವನ್ನು ನೀಡಬಹುದು.[10]

1	ದಶಾವತಾರೊ ಪದ-ಶ್ರೀವಾದಿರಾಜ ಸ್ವಾಮಿಗಳು 1480-1600 (ಕ್ರಿ.ಶ. 1480 ರಿಂದ ಶ್ರೀ ವಾದಿರಾಜ ಸ್ವಾಮಿಗಳ ಕಾಲ. ದಶಾವತಾರೊ 1600 ಪದ ಯಾವಾಗ ರಚನೆಯಾಯಿತೆಂಬುದು ತಿಳಿದಿಲ್ಲ. ಅವರ ಜೀವಿತದ ಮಧ್ಯಕಾಲದಲ್ಲಿ ರಚನೆಯಾಗಿರಬೇಕೆಂದು ಊಹಿಸುವುದಾದರೆ ಸು ಕ್ರಿ.ಶ. 1520 ಎಂದು ಹೇಳಬಹುದು).	
2	ತುಳು ಜೋಕುಲೆ ಗೀತೊಳು (ಸಂಗ್ರಹ : ಜಿ. ರಿಟ್ಟರ್)	1879
3	ಪಾಡ್ದನೊಳು (ಸಂಗ್ರಹ ಎ. ಮ್ಯಾನರ್)	1886
4	ತುಳು ಸಂಗೀತಗಳು (ಚರ್ಚ್ ಪಾರ್ತನೆಲು)	1864 ?
5	ತುಳು ಪ್ರಾರ್ಥನೆಗಳು	1878 ?
6	ರತ್ನಮಾಲೆ	1891 ?
7	ತುಳು ಕನ್ಯೋಪದೇಶ - ಎಂ. ಆರ್. ಸುಬ್ರಹ್ಮಣ್ಯ ಶಾಸ್ತ್ರಿ (ದ್ವಿ.ಮು. 1929, ತೃ. ಮು. 1990)	1916
8	ಕನ್ನಡಕೊ - ಎಂ. ಸಿ. ಪಿ. ಶರ್ಮಾ	?
9	ಪತಿತೋದ್ಧರಣ ಪದ್ಯಾವಳಿ – ಎಚ್. ನಾರಾಯಣ ರಾವ್	?
10	ಭಜಗೋವಿಂದ (ಅನುವಾದ)-ಬಡಕಬೈಲು ಪರಮೇಶ್ವರಯ್ಯ	1920
11	ತುಳು ನೀತಿ ಪದ್ಯೊಲು – ಬಡಕಬೈಲು ಪರಮೇಶ್ವರಯ್ಯ	1929
12	ತುಳುವಾಲ ಬಲಿಯೇಂದ್ರ - ಸಂದಳಿಕೆ ಶೀನಪ್ಪ ಹೆಗ್ಡೆ (ಒಟ್ಟು 15 ಮುದ್ರಣ ಕಂಡಿದೆ)	1929
13	ಅಮಲ್ ದೆಪ್ಪಡೆ - ನರ್ಕಳ ಮಾರಪ್ಪ ಶೆಟ್ಟಿ (ದ್ವಿ. ಮು. 1989)	1929
14	ತುಳು ಪದ್ಯಾವಳಿ – ಬಿ. ಮೋನಪ್ಪ ತಿಂಗಳಾಯ	1930

15 ಪೊರ್ಲುಕಂಟ್ - ನರ್ಕಳ ಮೂರಪ್ಪ ಶೆಟ್ಟಿ (ದ್ವಿ. ಮು. 1989) 1390
16 ಕಾನಿಗೆ - ನಾರಾಯಣ ಕಿಲ್ಲೆ (ದ್ವಿ. ಮು. 1980) 1932
17 ತುಳು ಪದ್ಯಮಾಲಿಕೆ - ಕೆ. ಗಂಗಾಧರ ರಾಮಚಂದ್ರ 1933
18 ಗೀತೆ ಮಲ್ಲಿಗೆ - ಮುಲ್ಕಿ ನರಸಿಂಗ ರಾವ್ 1934
19 ತುಳು ಭಗವದ್ಗೀತೆ - ವಿ. ರಾಮಶರ್ಮ ?
20 ತುಳು ಕೀರ್ತನ ಮಾಲೆ - ಈಶ್ವರ ಭಾಗವತ ಜತ್ತಿ, ಬಾಯಾರು 1938
21 ಕುಂಬಳೆ ಸೀಮೆಂತ ಚರಿತ್ರೆ ಮತ್ತು ಸ್ತುತಿ ಪದ್ಯೊಲು – ದಾಮೋದರ ಪುಣಿಂಚತ್ತಾಯ (ದ್ವಿ. ಮು. 1959) ?
22 ಸತ್ಯದ ಚಿತ್ರೊ - ಬಾಡೂರು ಜಗನ್ನಾಥ ರೈ (1960-62 ಇರಬಹುದು) ?
23 ತುಳು ನಾಟಕೊದ ತುಂಡು ಪದೊಕುಲು - ಕೆಮ್ತೂರು ದೊಡ್ಡಣ್ಣ ಶೆಟ್ಟಿ ?
24 ತುಳು ಭಜನೆದ ಪದೊಕುಲು - ಕೆ. ದೊ. ಶೆಟ್ಟಿ ?
25 ತುಳುನಾಡ್‌ದ ಮಲ್ಲಿಗೆ - ಕೆ. ದೊ. ಶೆ. ?
26 ರಾಮಾಯಣದ ಪಾಡ್ದೊನೆ - ಕೆ. ದೊ. ಶೆ. ?
27 ಬೊಂಬಾಯಿ ಸಂಗ್ತಿ (ಲಾವಣಿ) - ಕೆ, ದೊ, ಶೆ.
28 ದೇವಿ ಭಜನೆ - ಕೆ. ದೊ. ಶೆ. ?
29 ಸಾರೆಸದ ಪದೊಕ್ಲು - ಕೆ. ದೊ. ಶೆ. ?
30 ತೆಲ್ಕೆದ ಪದೊಕ್ಲು - ಕೆ. ದೊ. ಶೆ. ?
(ಕ್ರಮ ಸಂಖ್ಯೆ 23 ರಿಂದ 30 - ಇವುಗಳಲ್ಲಿ ಪ್ರಕಟಣೆಯ ಇಸವಿ ನಮೂದಿತವಾಗಿಲ್ಲ. ಆದರೆ 1965 ರ ಮುನ್ನ ಪ್ರಕಟವಾಗಿವೆ).
31 ಕೋಟಿ ಚೆನ್ನಯ್ಯ ಪದ್ಯಾವಳಿ - ಸೀತಾ ನದಿ ಗಣಪಯ್ಯಶೆಟ್ಟಿ ?
23 ತುಳು ಭಜನಾವಳಿ - ಸೀ. ಗ. ಶೆ. ?
33 ವಿಾಸೆ ಇತ್ತಿ ಆಣುಕುಳು - ಗಣಪತಿ ದಿವಾಣ 1962
34 ತುಳು ಪದ್ಯಾವಳಿ - ಗ. ದಿ. 1964
5 ಮಾದಿರನ ಗಾದೆ - ಬಿ. ದೂಮಪ್ಪ ಮಾಸ್ತರ್ 1972
36 ತುಳು ಪದ್ಯೊಲು - ಕೆ. ಎಸ್. ಭಂಡಾರಿ ನಿಟ್ಟೂರು 1972
37 ಕೇದಗೆ - ಮ. ವಿಠ್ಠಲ. ಪುತ್ತೂರು 1973
38 ಕೋಟಿ ಚೆನ್ನಯ ಕತೆ ತುಳುಪದ - ಬಿ. ದೂಮಪ್ಪ ಮಾಸ್ತರ್ 1975
39 ತುಳು ಭಜನಾವಳಿ - ಯಂ. ವಿ. ನಾಯಕ್ (ಒಟ್ಟು 6 ಮುದ್ರಣ ಕಂಡಿದೆ) 1975

40 ಅಗೋಳಿ ಮಂಜಣ್ಣ ಕತೆ–ದೂಮಪ್ಪ ಮಾಸ್ತರ್ 1976

41 ಬಾಮಕುಮಾರ ಸಂಧಿ (ಸಂಪಾದಿತ) - ಅಮೃತ ಸೋಮೇಶ್ವರ 1978

42 ಭರ್ತೃಹರಿನ ನೀತಿಶತಕೊ–ಬೆಳ್ಳಿಪ್ಪಾಡಿ ಸತೀಶ ರೈ 1978

43 ರತ್ನನ ಕರ್ಮ–ಎಂ. ರತ್ನಕುಮಾರ್ 1979

44 ರತ್ನನ ಪದೊಕುಲು (ಅನುವಾದ) - ಭೋಜರಾಜ ಕಡಂಬ 1979

45 ಬಯ್ಯಮಲ್ಲಿಗೆ–ಪಾ. ವೆಂ. ಆಚಾರ್ಯ 1981

46 ಗೀತೆದ ತಿರ್ಲ್ (ಅನುವಾದ)–ಕೆಲಿಂಜ ಸೀತಾರಾಮ ಆಳ್ವ 1981

47 ಅಜ್ಜಬಿರು (ಎಸ್. ವಿ. ಪರಮೇಶ್ವರ ಭಟ್ಟರ ಇಂದ್ರಚಾಪ ಮತ್ತು ಇತರ
ಕೆಲವು ಕವನಗಳ ಅನುವಾದ) - ಕೆದಂಬಾಡಿ ಜತ್ತಪ್ಪ ರೈ 1982

48 ಆಲಡೆ–ವೆಂಕಟರಾಜ ಪುಣಿಂಚತ್ತಾಯ 1983

49 ತಂಬಿಲ–ಅಮೃತ ಸೋಮೇಶ್ವರ 1984

50 ಶ್ರೀಭಾಗವತೊ–(ಪ್ರಾಚೀನ ಮಹಾಕಾವ್ಯ
ವಿಷ್ಣುತುಂಗ ವಿರಚಿತ) ಸಂಪಾದನೆ–ವೆಂಕಟರಾಜ ಪುಣಿಂಚತ್ತಾಯ 1984

51 ಬುಳೆಕಾನಿಗೆ–ಯಶವಂತ ಬೋಳೂರು 1984

52 ತುಳು ದೈವಿಕ ಭಜನಾವಳಿ–ಬಿ. ಭಾಸ್ಕರ ಶೆಟ್ಟಿ 1985
(ದ್ವಿತೀಯ ಮುದ್ರಣ ಕಂಡಿದೆ)

53 ಮೋಕೆದ ಬೀರೆ ಲೆಮಿನ್ಕಾಯಿ (ಫಿನ್ಲೆಂಡಿನ ಜನಪದ ಮಹಾಕಾವ್ಯ
ಕಾಳೇವಾಲದ ಒಂಜಿ ಭಾಗದ ಅನುವಾದ) -ಅಮೃತ ಸೋಮೇಶ್ವರ 1985

54 ರತ್ನನ ಕರ್ಮ (ಸಂ.) ಎಂ. ರತ್ನಕುಮಾರ್
ಭಾಗ-೧, ಭಾಗ-೨ 1986

55 ಪಿಂಗಾರ–ಪಡಾರು ಮಹಾಬಲೇಶ್ವರ ಭಟ್ಟ 1986

56 ಜೋಕುಳೆ ಪದೊಕುಲು-೧ ಕನರಾಡಿ ವಾದಿರಾಜ ಭಟ್ಟ 1986

57 ಪಿಂಗಾರ–ಶ್ರೀಮತಿ ಸುನೀತಾ ಶೆಟ್ಟಿ 1986

58 ರುಕುಮನ ಪದ-ಎಂ. ರತ್ನಕುಮಾರ್ 1987

59 ರಂಗಿತ–ಅಮೃತ ಸೋಮೇಶ್ವರ 1987

60 ಕಾವೇರಿ (ಪ್ರಾಚೀನ ಕಾವ್ಯ) ಸಂಶೋಧನೆ ವೆಂಕಟರಾಜ ಪುಣಿಂಚತ್ತಾಯ 1987

61 ಮಂದಾರ ರಾಮಾಯಣ-ಮಂದಾರ ಕೇಶವಭಟ್ 1987

62 ಪಚ್ಚೆಕುರಲ್-ಪಾಲ್ತಾಡಿ ರಾಮಕೃಷ್ಣ ಆಚಾರ್ 1987

63 ಪುರ್ಪೊ-ಎಸ್. ಪಿ. ಮಂಚಿ 1987

64 ಪೂಮಾಲೆ-ಶ್ರೀಮತಿ ಪ್ರಮೋದಾ ಕೆ. ಸುವರ್ಣ 1988

65 ಪರಬನ ಮೋಕೆ-ರಸಿಕ ಪುತ್ತಿಗೆ 1988

66 ಪೊಡುಂಬ ತಿಮ್ಮನ ಕಗ್ಗ–(ಡಿವಿಜಿಯವರ
ಮಂಕುತಿಮ್ಮನ ಕಗ್ಗದ ಅನುವಾದ) ಅ. ಬಾಲಕೃಷ್ಣ ಶೆಟ್ಟಿ ಪೊಳಲಿ 1988

67	ಜೋಕುಲೆ ರಾಗೊಲು-ಪೇರೂರು ಜಾರು	1988
68	ಜೀವನ ಪಾಡ್ದನ–ಕನರಾಡಿ ವಾದಿರಾಜ ಭಟ್ಟ	1989
69	ಸಂಕ್ರಾಂತಿ- ಶ್ರೀಮತಿ ಸುನೀತಾ ಶೆಟ್ಟಿ	1989
70	ತುಳುನಾಡ್ದ ಬೊಳ್ಳಿಲು–ಬೆಳ್ಳಿಪ್ಪಾಡಿ ಸತೀಶ ರೈ	1989
71	ಕುಜಲಿ ಪೂಜೆ- (ಉಮರ್ ಖಯ್ಯಾಮನ ರುಬಾಯತ್‌ಗಳ ಅನುವಾದ)- ಕೆದಂಬಾಡಿ ಜತ್ತಪ್ಪ ರೈ	1989
72	ಉರಲ್‌ತೂಟೆ- ಪೇರೂರು ಜಾರು	1989
73	ಬೇರ್ ಮರ್ದ್- ಎಂ. ಜಯರಾಮ ರೈ	1989
74	ಕಂಚಿಲ್- ಯೋಗೀಶ್ ಕಾಂಚನ್	1989
75	ಕೇದಾಯಿ ಬೊಕ್ಕ ಓಬಯ್ಯನ ಅತಿಕಲ್ಪ - ಮ. ವಿಠ್ಠಲ	1990
76	ಎಳುವೆರ್ ದೆಯ್ಯಾರ್- ಅಮೃತ ಸೋಮೇಶ್ವರ	1990
77	ತುಳುವಾಲ ಬಲಿಯೇಂದ್ರೆ-ಅಮೃತ ಶೋಮೇಶ್ವರ	1990
78	ಅರ್ಲುಕಬಿತೆಲು ಪೊರ್ಲುಕಬಿತೆಲು (ಸಂ.) - ಕೃಷ್ಣಾನಂದ ಹೆಗ್ಡೆ	1990
79	ತುಳು ಮತ್ತು ಕನ್ನಡ ಅಕ್ಷರ ಗೀತೆಗಳು ರಚನೆ ಮತ್ತು ಅನುವಾದ - ಶೇಖರ ಮತ್ತು ರವಿ	1990
80	ಜಾಗಂಟೆ - ಮಂದಾರ ಕೇಶವ ಭಟ್	1991
81	ತುಳುಕಬಿತೆಲು - ರವಿಕಿರಣ	1991
82	ದೀಪದ ಮಲ್ಲಿ - ಮ. ವಿಠ್ಠಲ	1991
83	ಪೊರ್ಲುಯಿ – ಶ್ರೀನಿವಾಸ ಮಂಕುಡೆ	1992
84	ಜೋಕುಳೆ ಪದೊಕುಲು - ಕನರಾಡಿ ವಾದಿರಾಜ ಭಟ್ಟ	1992
85	ಗೊಂಚಿಲ್ - ಕೋಡು ಭೋಜ ಶೆಟ್ಟಿ	1992
86	ಅಟಿಲ್ (ಒಂಬತ್ತು ಮಂದಿ ಕವಿಗಳ ಕವಿತಾ ಸಂಗ್ರಹ) ಸಂ. ; ಎಸ್. ಆರ್, ಹೆಗ್ಡೆ	1992
87	ಅಗೆಲು - ಬೆಳ್ಳಿಪ್ಪಾಡಿ ಸತೀಶ ರೈ	1993
88	ದುನಿಪು - ಪಾಲ್ತಾಡಿ ರಾಮಕೃಷ್ಣ ಆಚಾರ್	1992
89	ಬತ್ತೆ ಕೆತ್ತರೆ ಉತ್ತರೆ - ಎನ್. ಪಿ. ಶೆಟ್ಟಿ	1992
90	ತೆರಿವು - ರತ್ನಕುಮಾರ್ ಎಂ.,	1993
91	ಶೂದ್ರನ ಕಾನಿಗೆ - ಪೆರ್ಡೂರು ಭಾಸ್ಕರ ಶೆಟ್ಟಿ	1993
92	ಬೀರ - ವಾಮನ ನಂದಾವರ	1993
93	ಪೊಂಗದೂಮನ ಪದೊಕುಲು - ಅ. ಬಾಲಕೃಷ್ಣ ಶೆಟ್ಟಿ ಪೊಳಲಿ	1993
94	ಬಾಣಪೂ - ಪಡಾರು ಮಹಾಬಲೇಶ್ವರ ಭಟ್ಟ	1993
95	ತುಳು ಕಬಿತೆಲು ಬೊಕ್ಕ ಗಾದೆಲು - ಪ್ರ : ತುಳುಕೂಟ, ಬೆಂಗಳೂರು	1993

96	ಹರಿಶ್ಚಂದ್ರ ಕಾವ್ಯೊ - ಕೆಲಿಂಜ ಸೀತಾರಾಮ ಆಳ್ವ	1994
97	ಮುಡಿಪು - ಶ್ರೀಮತಿ ಪ್ರಮೋದಾ ಕೆ. ಸುವರ್ಣ	1994
98	ಕೊಂಬುವಾದ್ಯ - ಗಣಪತಿ ದಿವಾಣ	1996
99	ತಿಬಿಲೆ - ಶ್ರೀಮತಿ ಕೆ. ಲೀಲಾವತಿ	1994
100	ಎನ್ನಪ್ಪೆ ತುಳುವಪ್ಪೆ - ಕಯ್ಯಾರ ಕಿಂಞಣ್ಣ ರೈ	1994
101	ಕೂಕುಳು - ಜೆ. ತಿಮ್ಮಪ್ಪ ಪೂಜಾರಿ	1994
102	ಪ್ರಾತಿನಿಧಿಕ ತುಳು ಕಬಿತೆಲು - ಸಂ : ವಸಂತಕುಮಾರ ಪೆರ್ಲ	1994
103	ಮದಿಮಾಲೆ ಪಾಡ್ದನ - ಆತ್ರಾಡಿ ಅಮೃತಾ ಶೆಟ್ಟಿ	1995
104	ಕಬಿತೆಲು ಚಿತ್ರೊಲು - ರವಿಕಿರಣ	1995
105	ಬೊಲ್ಬಾಂಡ್ - ಕೆ. ಸಂಜೀವ ಶೆಟ್ಟಿ	1994
106	ಅಷೆನಿಮಾಗೊ ಕಾಂತಗೊ ಜೋಗಿ - ಕೆದಂಬಾಡಿ ಜತ್ತಪ್ಪ ರೈ	1994
107	ಬಾನೊ ತೋರೊಂದುಂಡು - ಎಸ್. ಪಿ. ಮಂಚಿ	1997
108	ಸಿರಿ ರಾಮಾಶ್ವಮೇದೊ (ಮುದ್ದಣನ 'ಶ್ರೀ ರಾಮಾಶ್ವಮೇಧ' ಅನುವಾದ)- ಕೆದಂಬಾಡಿ ಜತ್ತಪ್ಪ ರೈ	1997
109	ಪರ್ವಪರ್ಬದ ಪೊರ್ಲು ಕಬಿತೆಲು - ಸಂ. : ಮುದ್ದು ಮೂಡುಬೆಳ್ಳೆ	1997
110	ತಿರ್ಗಾಸ್ – ಟಿ. ಎ. ಎನ್. ಖಂಡಿಗೆ	1996
111	ಬೀರದ ಬೊಲ್ಪು - ಮಂದಾರ ಕೇಶವ ಭಟ್ಟ	1997
112	ನಾಗಸಂಪಿಗೆ - ಸುನೀತಾ ಶೆಟ್ಟಿ	1984
113	ನೆಂಪು - ಶ್ರೀನಿವಾಸ ಮಂಕುಡೆ	1995
114	ಪದರಂಗಿತ - ಪ್ರಮೋದಾ ಕೆ. ಸುವರ್ಣ	1997
115	ತುಳುನಾಡ್ದ ಪೊರ್ಲು - ಬೆಳ್ಳಿಪ್ಪಾಡಿ ಸತೀಶ ರೈ	1994
116	ತಾಟಿ ತೆಂಬರೆ - ಪ್ರಮೋದಾ ಕೆ. ಸುವರ್ಣ	1999
117	ಪುರಂದರ ದಾಸೆರೆ ಪದೊಕುಲು - ಕಬ್ಬಿನಾಲೆ ವಸಂತ ಭಾರದ್ವಾಜ	1999

ಇವಿಷ್ಟು ಈ ಲೇಖಕನಿಗೆ ಲಭ್ಯವಾದ ಕವನ ಸಂಕಲನಗಳ ಮಾಹಿತಿ. ಕ್ಷೇತ್ರ ಕಾರ್ಯ ಹಾಗೂ ವಿದ್ವಾಂಸರಿಂದ, ಕವಿ - ಲೇಖಕರಿಂದ ಪಡೆದ ಮಾಹಿತಿಯ ಆಧಾರದಲ್ಲಿ ಈ ಯಾದಿ ತಯಾರಿಸಲಾಗಿದೆ. ಇದೊಂದು ಸಮಗ್ರ ಪಟ್ಟಿಯೇ ಹೌದು; ಆದರೂ ಕೆಲವೊಂದು ಕವನ ಸಂಕಲನಗಳ ಹೆಸರು ಬಿಟ್ಟುಹೋಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ತುಳುವಿನಲ್ಲಿ ಚೆನ್ನಾಗಿ ಬರೆಯುತ್ತಿದ್ದ ರಸಿಕ ಪುತ್ತಿಗೆ (1995), ಕೆ. ಎಸ್. ಭಂಡಾರಿ ನಿಟ್ಟೂರು (1996) ಮತ್ತು ಮಂದಾರ ಕೇಶವ ಭಟ್ಟರು (1997) ತೀರಿಕೊಂಡುದು ತುಳು ಕಾವ್ಯಕ್ಷೇತ್ರಕ್ಕಾದ ನಷ್ಟವೇ ಸರಿ.

ತುಳುವಿನಲ್ಲಿ ಪ್ರಕಟಣೆಯ ಸೌಲಭ್ಯ ಇಲ್ಲದಿದ್ದುದು ಬರವಣಿಗೆಗೆ ತೊಡಕಾದ ಒಂದು ಪ್ರಮುಖ ಅಂಶವೆಂದು ಹೇಳಬಹುದು. ಆಕಾಶವಾಣಿ ಪತ್ತೆ ಹಚ್ಚಿದ ಕವಿಗಳ ಸಂಖ್ಯೆ ಸುಮಾರು ನೂರಾಐವತ್ತನ್ನು ದಾಟುತ್ತದೆ. ಇವರಲ್ಲಿ ಸುಮಾರು ನೂರು ಮಂದಿಯಷ್ಟಾದರೂ ಗಟ್ಟಿ ಕವಿಗಳಿದ್ದಾರೆ.

ವಿಶ್ವ ತುಳು ಸಮ್ಮೇಳನ ಜರುಗಿದ ಬಳಿಕ (1994) ಮತ್ತು ಆ ಮೂಲಕ 'ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ' ಸ್ಥಾಪನೆಯಾದ ಬಳಿಕ (1994) ತುಳುವಿನಲ್ಲಿ ಬರೆಯುತ್ತಿರುವವರಿಗೆ ತುಸು ಉತ್ತೇಜನ - ಪ್ರೋತ್ಸಾಹ ಸಿಕ್ಕಂತಾಯಿತು. ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಮದಿಪು' ವಿನಲ್ಲಿ ಕೆಲವು ಒಳ್ಳೆಯ ರಚನೆಗಳು ಅಚ್ಚಾಗತೊಡಗಿದವು. ಹೀಗಿದ್ದೂ ಬರೆಯುವ ಕವಿಗಳಿಗೆ ಪ್ರಕಟಣೆಯ ಅವಕಾಶಗಳನ್ನು ಒದಗಿಸುವ ಸೌಲಭ್ಯ ತುಳುವಿನಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ.

ಪ್ರಸ್ತುತ ತುಳುವಿನಲ್ಲಿ ಕವನಗಳನ್ನು ಬರೆಯುತ್ತಿರುವ ಕವಿಗಳ ಒಂದು ಯಾದಿಯನ್ನು ಈಗ ಕೊಡಬಹುದು :

ಅಚ್ಯುತ ಕಲ್ಲಾಪು, ಕೆ. ಪಿ. ಅಮೀನ್, ಅಮೃತ ಸೋಮೇಶ್ವರ, ಅತ್ರಾಡಿ ಅಮೃತಾ ಶೆಟ್ಟಿ, ಅಶೋಕ ಎನ್, ಕಡೇ ಶಿವಾಲಯ, ಪಿ. ಈಶ್ವರ ಭಟ್ಟ ಪುತ್ತಿಗೆ, ಕಾಂತಿ ಶಿರ್ವ, ಕಯ್ಯಾರ ಕಿಂಞಣ್ಣ ರೈ, ಬಿ. ಪಿ, ಕೋಡಿಬೆಂಗ್ರೆ, ಪಿ. ಚೆನ್ನಪ್ಪ ಅಳಿಕೆ, ಕೆದಂಬಾಡಿ ಜತ್ತಪ್ಪ ರೈ, ಯಂ. ಜಯರಾಮ ರೈ, ದಿನೇಶ್ ಅಮೀನ್ ಮಟ್ಟು, ನಾರಾಯಣ ರೈ ಕುಕ್ಕುವಳ್ಳಿ, ಭಾಸ್ಕರ ರೈ ಕುಕ್ಕುವಳ್ಳಿ, ಕೆ. ಪದ್ಮನಾಭ ಕೇಕುಣ್ಣಾಯ, ಕೆ. ಕೆ. ಪೇಜಾವರ, ಪೇರೂರು ಜಾರು, ಪ್ರಮೋದಾ ಕೆ, ಸುವರ್ಣ, ಅ. ಬಾಲಕೃಷ್ಣ ಶೆಟ್ಟಿ ಪೊಳಲಿ, ಭಾಸ್ಕರ ಶೆಟ್ಟಿ ಪೆರ್ಡೂರು, ಬೇಬಿ ನೈಮಾಡಿ, ಕೋಡು ಭೋಜ ಶೆಟ್ಟಿ, ಎಂ. ಆರ್. ಬಂಗೇರ ಮಾರಿಪಳ್ಳ, ಮನು ಇಡ್ಯಾ, ಪಡಾರು ಮಹಾಬಲೇಶ್ವರ ಭಟ್ಟ, ಮುದ್ದು ಮೂಡು ಬೆಳ್ಳೆ, ನಾ. ಮೊಗಸಾಲೆ, ಎಸ್, ಪಿ. ಮಂಚಿ, ಯಶವಂತ ಬೋಳೂರು, ಎಂ. ರತ್ನಕುಮಾರ್, ರಾಮ್ ಎಲ್ಲಂಗಳ, ಪಾಲ್ತಾಡಿ ರಾಮಕೃಷ್ಣ ಆಚಾರ್, ಕೆ, ಲೀಲಾವತಿ, ವಸಂತಕುಮಾರ ಪೆರ್ಲ, ಕನರಾಡಿ ವಾದಿರಾಜ ಭಟ್ಟ, ರವಿಕಿರಣ, ಬೆಳ್ಳಿಪ್ಪಾಡಿ ಸತೀಶ ರೈ, ಕಬ್ಬಿನಾಲೆ ವಸನ್ತ ಭಾರದ್ವಾಜ, ವಾಮನ ನಂದಾವರ, ಕುದ್ಕಾಡಿ ವಿಶ್ವನಾಥ ರೈ, ವೆಂಕಟರಾಜ ಪುಣಿಂಚತ್ತಾಯ, ಎಚ್. ಶಕುಂತಲಾ ಭಟ್, ಎನ್. ಪಿ. ಶೆಟ್ಟಿ, ಶ್ರೀನಿವಾಸ ಕಾರ್ಕಳ, ಶ್ರೀನಿವಾಸ ಮಂಕುಡೆ, ಸಂಜೀವ ಶೆಟ್ಟಿ ಮುಂಬಯಿ, ಕೆಲಿಂಜ ಸೀತಾರಾಮ ಆಳ್ವ, ಡಾ. ಬಿ. ಎ. ವಿವೇಕ ರೈ, ಅಗ್ರಾಳ ಪುರಂದರ ರೈ, ಸುನೀತಾ ಶೆಟ್ಟಿ ಮುಂಬಯಿ, ಟಿ. ಎ. ಎನ್. ಖಂಡಿಗೆ, ರತ್ನಾಕರ ರಾವ್ ಕಾವೂರು, ಕೆ. ಆರ್. ರೈ, ಶ್ಯಾಮ್‌ಗೋಪಾಲ್. ಕೆ. ಕೆ. ಗಟ್ಟಿ, ಗಣೇಶ್‌ಪ್ರಸಾದ್ ಪಾಂಡೇಲು, ಸಂಜೀವ ಸೋಮೇಶ್ವರ, ಬಿ. ಮಂಜುನಾಥ್,

ಕ್ಯಾಥರೀನ್ ರಾಡ್ರಿಗಸ್, ಯೋಗೀಶ್ ಕಾಂಚನ್, ಕೆ. ಜೆ. ಶೆಟ್ಟಿ ಕಡಂದಲೆ, ಜೆ. ತಿಮ್ಮಪ್ಪ ಪೂಜಾರಿ, ತಿಲಕನಾಥ ಮಂಜೇಶ್ವರ, ಸಂಕಲಕರಿಯು ಕೃಷ್ಣ ಸಾಲ್ಯಾನ್, ಪ್ರಭಾಕರ ನೀರುಮಾರ್ಗ, ಭಾಸ್ಕರ ಕುಲಾಲ್ ಬರ್ಕೆ, ಬಿ. ಎಂ. ಇದಿನಬ್ಬ. ಸುಬ್ರಾಯ ಚೊಕ್ಕಾಡಿ, ಶಿಮುಂಜೆ ಪರಾರಿ, ವಿಠ್ಠಲ ಕಬಕ, ಆರ್. ಕೆ. ಉಳ್ಳಾಲ್, ರಘುನಾಥ ವರ್ಕಾಡಿ, ಮನೋಹರ ಪ್ರಸಾದ್, ಪೆರ್ಡೂರು ಭಾಸ್ಕರ ಶೆಟ್ಟಿ, ಕಸ್ತೂರಿ ಪಂಜ, ನಕ್ರೆ ಬಿಪಿನ್‌ಚಂದ್ರ ಪಾಲ್, ರಾಮಚಂದ್ರ ಬೈಕಂಪಾಡಿ, ಅನಂತರಾಮ ಬಂಗಾಡಿ. ಗುರುವಪ್ಪ ಎನ್. ಟಿ, ಗಣೇಶ ಅವಿನಾಶ್ ಸಂಕಪಶಾರ್, ಜಿತು ನಿಡ್ಲೆ, ರಘು ಇಡ್ಕಿದು, ರಾಜಕಿರಣ್, ದಾ. ನ. ಉಮರಾಣ್ಣ ಕೊಕ್ಕಪುಣಿ, ಸಂಕಪ್ಪ ಕಾಂಚನ್. ಎಸ್. ಸಿ. ಕುಡಿಯ ಕಲ್ಲಡ್ಕ, ಟಿ. ಮೀನಾಕ್ಷಿ, ವಿಮಲಾ ಕಲ್ಲಡ್ಕ, ಸುಶೀಲಾ ಬಾಲಕೃಷ್ಣ, ಶಾರದಾ ಆರ್. ರಾವ್, ವಿ. ಸು. ಭ. ಕುಂಟಪದವು, ಕಡಂದಲೆ ವಾಸು ಶೆಟ್ಟಿ, ಕುಸುಮ ಜಿ. ಪಿ., ಸುಜಿ ಕುರ್ಯ, ಇಂದಿರಾ ಹೆಗ್ಡೆ, ಕೆ. ಕೆ. ಪೇಜಾವರ, ಕೆ. ಜಿ. ಚಿದಂಬರ ಬೈಕಂಪಾಡಿ, ಸುಂದರ ಬಾರಡ್ಕ, ಅನಸೂಯಾ ಈಶ್ವರಚಂದ್ರ, ವಿಶ್ವನಾಥ ಬದಿಕಾನ, ಮ. ವಿಠ್ಠಲ ಪುತ್ತೂರು, ಮೈನಾ ಎನ್. ಶೆಟ್ಟಿ, ಶೀಲಾ ಕೆ. ಶೆಟ್ಟಿ, ಧರಣೀದೇವಿ– ಇನ್ನೂ ಮುಂತಾದವರು. ಇದು ಪರಿಪೂರ್ಣ ಯಾದಿಯಲ್ಲ. ಹುಡುಕಿದರೆ ಹಾಗೂ ಒಂದೆರಡು ಮೂರು ಪದ್ಯಗಳನ್ನು ಬರೆದ ಕವಿಗಳನ್ನೂ ಗಣನೆಗೆ ತೆಗೆದುಕೊಂಡರೆ ಇಷ್ಟೇ ಮಂದಿ ಕವಿಗಳು ಇನ್ನೂ ಸಿಗುತ್ತಾರೆ. ಇತ್ತೀಚೆಗೆ ಕೆಲವು ಹೊಸ ಕವಿ - ಕವಯಿತ್ರಿಯರ ಹೆಸರುಗಳೂ ಕಾಣಿಸಿಕೊಳ್ಳುತ್ತಿವೆ.

ಕವನ ಸಾಹಿತ್ಯ ಬೆಳೆದಷ್ಟು ಆಧುನಿಕ ಅರ್ಥದ ಕಥಾಸಾಹಿತ್ಯ ತುಳುವಿನಲ್ಲಿ ಬೆಳೆದಿಲ್ಲ. ಅದಕ್ಕೆ ಕಾರಣಗಳನ್ನು ಈಗಾಗಲೇ ವಿಶ್ಲೇಷಿಸಿದ್ದೇವೆ.

1933 ರಲ್ಲಿ ಪ್ರಕಟವಾದ ಎಂ. ವಿ. ಹೆಗ್ಡೆಯವರ 'ಮದಿಮಾಳತ್ತ್ ಮದಿ ಮಾಯೆ' (ಮದುಮಗಳಲ್ಲ, ಮದುಮಗ) ತುಳುವಿನ ಮೊಟ್ಟಮೊದಲ ಸಣ್ಣಕತೆ. ಅನಂತರ ಪೊಳಲಿ ಶೀನಪ್ಪ ಹೆಗ್ಡೆಯವರ 'ಮಿತ್ಯ ನಾರಾಯಣ ಕತೆ' (1935) ಪ್ರಕಟವಾಯಿತು. ಕನ್ನಡದ ಪ್ರಸಿದ್ಧ ಸಾಹಿತಿ ನಿರಂಜನರು ತುಳುವಿನಲ್ಲಿ ತಮ್ಮ ಬರವಣಿಗೆಯನ್ನು ಆರಂಭಿಸಿ, 1937 ರ ಸುಮಾರಿಗೆ ಉಡುಪಿಯಿಂದ ಪ್ರಕಟವಾಗುತ್ತಿದ್ದ 'ನವಯುಗ' ದಲ್ಲಿ ಸಣ್ಣಕತೆಯ ಮಾದರಿಯ ಬರವಣಿಗೆಯನ್ನು ಬರೆಯುತ್ತಿದ್ದರೆಂದು ತಿಳಿದು ಬರುತ್ತದೆ. ರಮೇಶ್ ಕಾರ್ನಾಡ್ 1973 ರಲ್ಲಿ 'ಪೊಸ ಜೀವನ' ಎಂಬ ಸಂಕಲನವನ್ನು ಬೆಳಕಿಗೆ ತಂದರು (1976 ರಲ್ಲಿ ಸಣ್ಣ ವಯಸ್ಸಿನಲ್ಲಿ ಕಾಮಾಲೆ ರೋಗದಿಂದ ಅವರು ತೀರಿಕೊಂಡರು).

ಅನಂತರ ಬಾ. ಸಾಮಗ ಮಲ್ಪೆ ಇವರು 1986 ರಲ್ಲಿ 'ಕಿನ್ಯ ಕತೆಕ್ಲು' (ಸಣ್ಣ ಕತೆಗಳು) ಎಂಬ ಹದಿನೇಳು ಕತೆಗಳುಳ್ಳ ಸಂಕಲನ ಪ್ರಕಟಿಸಿದರು. 1988 ರಲ್ಲಿ

ಹದಿನೇಳು ಕತೆಗಳ ಅವರ ಇನ್ನೊಂದು ಸಂಕಲನ 'ಬೋಂಟೆ' (ಬೇಟೆ) ಪ್ರಕಟವಾಯಿತು. ಇವು ಜನಪ್ರಿಯ ಮಾದರಿಯ ಮನರಂಜನಾ ಬರವಣಿಗೆಗಳು. ಇವನ್ನು ಸಣ್ಣ ಕತೆಗಳೆಂದು ಅವರು ಹೆಸರಿಸಿದರೂ ಇವೆಲ್ಲ ಮಿನಿಕತೆಗಳು. 'ಸಾಲ ಮೇಳೊಡು ಸಲ್ಕೆದ ತೋಮೆ' (ಸಾಲ ಮೇಳದಲ್ಲಿ ಸಲ್ಕೆಯ ಚೋಮ,)[11] 'ಎನನ್ ಪತ್ತರೆ ಬತ್ತೆ ಭಾಸ್ಕರ ಭಟ್ಟೆ (ನನ್ನನ್ನು ಹಿಡಿಯಲು ಬಂದ ಭಾಸ್ಕರ ಭಟ್ಟ), 'ದಾಯೆಗ್ ಸೈತೆರ್ ಡಾಕ್ಟರ್ ದಯಾನಂದರ್.' (ಡಾ॥ ದಯಾನಂದ್ ಸತ್ತುದೇಕೆ?)– ಇಂತಹ ದೈನಂದಿನ, ಪ್ರಚಲಿತ ವಿಷಯಗಳನ್ನು ರಂಜನೀಯವಾಗಿ ಸಣ್ಣ ಸಣ್ಣ ಕತೆಗಳ ರೂಪದಲ್ಲಿ ಅವರು ಬರೆದಿದ್ದಾರೆ.

ಮಂಗಳೂರಲ್ಲಿ ಆಕಾಶವಾಣಿ ಸ್ಥಾಪನೆಯಾದುದರಿಂದ (1976) ಬೇರೆ ಬೇರೆ ರೀತಿಯ ಕಾರ್ಯಕ್ರಮಗಳು ತುಳುವಿನಲ್ಲಿ ಪ್ರಸಾರವಾಗತೊಡಗಿದವು. ಅವುಗಳಲ್ಲಿ ಸಣ್ಣಕತೆ, ಸ್ವರಚಿತ ಕವನ ವಾಚನ, ಸಂದರ್ಶನ, ನಾಟಕ, ರೂಪಕ, ಕ್ಷೇತ್ರ ಸಂದರ್ಶನ ಆಧರಿಸಿದ ಕಾರ್ಯಕ್ರಮ, ಭಾಷಣ, ಭಾವಗೀತೆ, ಜನಪದ ಗೀತೆ - ಮೊದಲಾದ ಕಾರ್ಯಕ್ರಮಗಳಿದ್ದವು. ಈ ಕಾರ್ಯಕ್ರಮಗಳಿಗಾಗಿ ತುಳು ಭಾಷೆಯಲ್ಲಿ ಪರಿಶ್ರಮ ಉಳ್ಳವರು ನಿರಂತರವಾಗಿ ತೊಡಗಿಸಿಕೊಳ್ಳುವಂತಾಯಿತು. ಅದಕ್ಕೂ ಮುನ್ನ ಮಂಗಳೂರಲ್ಲಿ ತುಳುಕೂಟ ಸ್ಥಾಪನೆ ಆಗಿತ್ತು (1969). ತುಳುಕೂಟವು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂತು. ಈ ಎಲ್ಲ ಚಟುವಟಿಕೆಗಳಿಂದಾಗಿ 1980ರ ದಶಕದಲ್ಲಿ ತುಳು ಎಚ್ಚರ ಮೂಡಿತು. ಪರಿಣಾಮವಾಗಿ, ಅದುವರೆಗೆ ತುಳುವಿನಲ್ಲಿ ಬರೆಯುತ್ತಿದ್ದವರ ಜೊತೆಗೆ ಬಹಳ ಮಂದಿ ಕನ್ನಡ ಬರಹಗಾರರೂ ತುಳುವಿನಲ್ಲಿ ಸಾಹಿತ್ಯ ಸೃಷ್ಟಿಸತೊಡಗಿದರು. ಕೆದಂಬಾಡಿ ಜತ್ತಪ್ಪ ರೈ, ಕುದ್ಕಾಡಿ ವಿಶ್ವನಾಥ ರೈ, ಬಾಲಕೃಷ್ಣ ಶೆಟ್ಟಿ ಪೊಳಲಿ, ಬಾ. ಸಾಮಗ ಮಲ್ಪೆ, ಕೆ. ಟಿ. ಗಟ್ಟಿ, ಮುದ್ದು ಮೂಡುಬೆಳ್ಳೆ, ಬಿ. ಎ. ವಿವೇಕ ರೈ, ಪ್ರಭಾಕರ ಶಿಶಿಲ, ಕಯ್ಯಾರ ಕಿಞ್ಞಣ್ಣ ರೈ, ಮಹಾಲಿಂಗ, ಎಂ. ಜಾನಕಿ ಬ್ರಹ್ಮಾವರ, ಬಿ. ಎಂ. ರೋಹಿಣಿ, ಮನೋಹರ ಪ್ರಸಾದ್, ವಸಂತಕುಮಾರ ಪೆರ್ಲ ಮೊದಲಾದವರು ಇದಕ್ಕೆ ಉದಾಹರಣೆ.

ಈ ಅಲೆಯಿಂದಾಗಿ 1987 ರಲ್ಲಿ ಮುದ್ದುಮೂಡು ಬೆಳ್ಳೆಯವರ 'ಉದಿಪು' ಕಥಾಸಂಕಲನ ಪ್ರಕಟವಾಯಿತು. 1995 ರಲ್ಲಿ ಅವರ ಎರಡನೆಯ ಕಥಾಸಂಕಲನ 'ಒಸಯೊ' (ದರ್ಶನ) ಬೆಳಕಿಗೆ ಬಂತು. 'ತುಳು ಜನಪದ ಕತೆಗಳು' 1, 2, 3 ಎಂಬ ಮೂರು ಸಂಕಲನಗಳನ್ನು ಕನರಾಡಿ ವಾದಿರಾಜ ಭಟ್ ಪ್ರಕಟಿಸಿದ್ದಾರೆ. ತುಳು ಜನಪದ ಕತೆಗಳನ್ನು 'ಒಂಜಿ ಕೋಪೆ ಕತೆಕ್ಕುಲು' ಎಂಬ ಶೀರ್ಷಿಕೆಯಲ್ಲಿ ಭಾಗ-1, ಭಾಗ-2 (1987, 1988) ಎಂಬ ಸಂಕಲನಗಳನ್ನು ವಾಮನ ನಂದಾವರ

ಪ್ರಕಟಿಸಿದ್ದಾರೆ. ಘಟನೆಗಳ ನಿರೂಪಣೆಯಂತಿರುವ ಪತ್ರಿಕಾ ಬರವಣಿಗೆಯ ಮಾದರಿಯ ಸಣ್ಣಕತೆಗಳನ್ನು 'ಬದ್‌ಕ್‌ದ ಬಂಡಿ' ಎಂಬ ಶೀರ್ಷಿಕೆಯಲ್ಲಿ ಮನೋಹರ ಪ್ರಸಾದ್ ಪ್ರಕಟಿಸಿದ್ದಾರೆ (1989).

1994 ರಲ್ಲಿ ಪ್ರಭಾಕರ ಶಿಶಿಲ ಅವರ ಐದು ಕತೆಗಳ ಸಂಕಲನ 'ಬಾರಣೆ' (ಭೂತಗಳ ಭೋಜನ) ಪ್ರಕಟವಾಯಿತು. 'ನನ್ನ ಕತೆಯ ಲೋಕ ತುಳುನಾಡು ಆಗಿರುವುದರಿಂದ ನಾನು ತುಳುವಿನಲ್ಲಿ ಬರೆಯ ಹೊರಟೆ' ಎಂದು ಶಿಶಿಲರು ಮುನ್ನುಡಿ ಯಲ್ಲಿ ಹೇಳಿದ್ದಾರೆ. ಪುತ್ತೂರು, ಸುಳ್ಯ ಭಾಗದ ತುಳು ಭಾಷಾ ಪ್ರಭೇದವನ್ನು ಈ ಕತೆಗಳಲ್ಲಿ ಗುರುತಿಸಬಹುದು. ತಂತ್ರ, ಸಂವಿಧಾನ ಮತ್ತು ನಿರೂಪಣೆಗಳಲ್ಲಿ ಈ ಕತೆಗಳು ಕನ್ನಡ ನವ್ಯಕತೆಗೆ ಸಮೀಪವಾಗಿವೆ.

1996 ರಲ್ಲಿ ವಸಂತಕುಮಾರ ಪೆರ್ಲ ಅವರು ತುಳುವಿನಲ್ಲಿ ಬರೆಯುತ್ತಿರುವ ಇಪ್ಪತ್ತು ಮಂದಿ ಕತೆಗಾರರ ಇಪ್ಪತ್ತು ಉತ್ತಮ ಕತೆಗಳನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಗಾಗಿ ಸಂಪಾದಿಸಿ ಕೊಟ್ಟರು. ಅವು ಅದಾಗಲೇ ಆಕಾಶವಾಣಿಯಲ್ಲಿ ಪ್ರಸಾರವಾಗಿದ್ದ ಕತೆಗಳಾಗಿದ್ದವು. 'ಪ್ರಾತಿನಿಧಿಕ ತುಳು ಕತೆಕ್ಕುಲು' ಎಂಬ ಈ ಕೃತಿಯಲ್ಲಿ ತುಳು ಸಣ್ಣಕತೆಗಳ ಹುಟ್ಟು, ವಿಕಾಸ ಮತ್ತು ಹೆಜ್ಜೆ ಗುರುತುಗಳ ಬಗ್ಗೆ ವಿಸ್ತೃತವಾದ ಮುನ್ನುಡಿಯನ್ನು ಅವರು ಬರೆದಿದ್ದಾರೆ.

1996 ರಲ್ಲಿ ಆನಂದಕೃಷ್ಣ ಅವರ "ಕರಿಯಜ್ಜೆರೆನ ಕತೆಕ್ಕುಲು" ಪ್ರಕಟ ವಾಯಿತು. ಹನ್ನೆರಡು ಕತೆಗಳಿರುವ ಇದರಲ್ಲಿ ಕರಿಯ ಅಜ್ಜನ ಸಮಗ್ರ ಜೀವನಾನುಭವ ಒಂದರ ಬಳಿಕ ಒಂದು ಅನಾವರಣಗೊಳ್ಳುತ್ತ ಸಾಗುತ್ತದೆ. ಕರಿಯನ ಬಾಲ್ಯ, ಯೌವನ, ಗಾಂಧೀತತ್ವವನ್ನು ಕೇವಲ ಬಾಯಿ ಮಾತಿನಲ್ಲಿ ಹೇಳದೆ ತನ್ನ ಜೀವನದಲ್ಲಿ ಅಳವಡಿಸಿಕೊಂಡ ವಿಧಾನ ಮೊದಲಾದವು ನೈಜವಾಗಿ ಮೂಡಿಬಂದಿವೆ. ತೆಂಕಣ ಸೀಮೆಯ ತುಳು ಭಾಷೆಯ ಸಹಜಗತ್ತು ಕತೆಗಳಲ್ಲಿ ಒಡಮೂಡಿದೆ. ಇದು ಕಥಾಸಂಕಲನವಾಗಿದ್ದರೂ ಕರಿಯನ ಜೀವನ ವೃತ್ತಾಂತ ವನ್ನು ಅನುಕ್ರಮಣಿಕೆಯಂತೆ ಹೇಳಿರುವುದರಿಂದ ಕಿರುಕಾದಂಬರಿಯಂತೆ ಭಾಸ ವಾಗುತ್ತದೆ.

ಸಂಕಲನ ಪ್ರಕಟಿಸಿರದಿದ್ದರೂ ಬಿಡಿಕತೆಗಳನ್ನು ಬರೆದು ಹೆಸರಾದವರೆಂದರೆ ಬೊಳುವಾರು ಮಹಮ್ಮದ್ ಕುಂಞ, ಯಶವಂತ ಬೋಳೂರು, ಮನೋರಮಾ ಕೆ. ರೈ, ಅನಂತರಾಮ ಬಂಗಾಡಿ, ಅನಸೂಯಾ ಈಶ್ವರಚಂದ್ರ, ಅತ್ರಾಡಿ ಅಮೃತಾ ಶೆಟ್ಟಿ, ಕೆ. ಜೆ. ಕೊಕ್ರಾಡಿ, ಕ್ಯಾಥರೀನ್ ರಾಡ್ರಿಗಸ್, ಗೀತಾ ಸುರತ್ಕಲ್, ಜಗನ್ನಾಥ ಕೋಟೆ, ಫಕೀರ್ ಮಹಮದ್ ಕಟ್ಪಾಡಿ, ಬಾಪೋಜಿರಾವ್, ವೆಂಕಟರಾಜ ಪುಣಿಂಚತ್ತಾಯ, ಜೇಬಿ ಶೆಟ್ಟಿ ನೈಮಾಡಿ, ಎಂ. ಬಾಬುಶೆಟ್ಟಿ ನಾರಾವಿ,

ಕೆ. ಎಸ್. ಭಂಡಾರಿ ನಿಟ್ಟೂರು, ನಾ. ಉಜಿರೆ, ಎಸ್. ಪಿ. ಮಂಚಿ, ಮನು ಇಡ್ಯಾ, ವಸಂತಿ ಶೆಟ್ಟಿ ಬ್ರಹ್ಮಾವರ, ಅ. ಬಾಲಕೃಷ್ಣ ಶೆಟ್ಟಿ ಪೊಳಲಿ, ಪಾ. ಸಂಜೀವ ಬೋಳಾರ, ಎಚ್. ಶಕುಂತಲಾ ಭಟ್ ಹಳೆಯಂಗಡಿ, ಕೆ.ಜೆ. ಶೆಟ್ಟಿ ಕಡಂದಲೆ, ಕೆ.ಟಿ. ಗಟ್ಟಿ, ಕುದ್ಕಾಡಿ ವಿಶ್ವನಾಥ ರೈ, ನಾರಾಯಣ ರೈ ಕುಕ್ಕುವಳ್ಳಿ, ಶಾರದಾ ಶೆಟ್ಟಿ, ಕೆದಂಬಾಡಿ ಜತ್ತಪ್ಪ ರೈ, ಕೆ. ಲೀಲಾವತಿ, ಎಂ. ಆರ್. ಬಂಗೇರ ಮಾರಿಪಳ್ಳ, ಚೆನ್ನಪ್ಪ ಅಳಿಕೆ, ವರದಾಭಟ್ ನಕ್ರೆ, ವಿಶ್ವನಾಥ ಪೂಜಾರಿ, ಭಾಸ್ಕರ ರೈ ಕುಕ್ಕುವಳ್ಳಿ, ವೈ. ಮೋಹನ ರಾವ್, ಪ. ರಾಮಕೃಷ್ಣ ಶಾಸ್ತ್ರಿ, ಚಂದ್ರಶೇಖರ ಗಟ್ಟಿ ಪಿಲಾರ್, ಕೇಶವ ಆದೂರು, ತೊಡಿಕಾನ ಅಬ್ದುಲ್ಲ, ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಟಿ. ಎ. ಎನ್. ಖಂಡಿಗೆ ಮೊದಲಾದವರು.

ಮಂಗಳೂರು ಆಕಾಶವಾಣಿ ಸ್ಥಾಪನೆಯಾದ ಬಳಿಕ ಇದುವರೆಗೆ ಕನಿಷ್ಠ ಆರು ನೂರರಷ್ಟು ಕತೆಗಳು ಪ್ರಸಾರವಾಗಿರಬಹುದು. ಆದರೆ ಅವನ್ನೆಲ್ಲ ಕತೆಗಾರರು ಸಂಕಲನ ರೂಪದಲ್ಲಿ ತಂ ಲ್ಲ. ಪ್ರಕಟಣೆ ಮತ್ತು ಮಾರಾಟದ ಸಮಸ್ಯೆ ಅದಕ್ಕೆ ಕಾರಣ.

ತುಳುವಿನಲ್ಲಿ ಜನಪದ ಸಾಹಿತ್ಯದ್ದೇ ಮೇಲುಗೈ. ಜಾನಪದದಲ್ಲಿ ಕಥಾಸಾಹಿತ್ಯ ಪರಂಪರೆಯೇ ಇದೆ. ಅದನ್ನು ಈ ಸಮೀಕ್ಷೆಯಲ್ಲಿ ಅಳವಡಿಸಿಕೊಂಡಿಲ್ಲ. ಜನಪದ ಕತೆಗಳನ್ನು ಸಂಗ್ರಹಿಸಿ ಪಂಜೆ ಮಂಗೇಶ ರಾವ್, ಸೇವ ನಮಿರಾಜ ಮಲ್ಲ, ಗೀತಾ ಕುಲಕರ್ಣಿ, ಬೇಕಲ ರಾಮನಾಯಕ, ಕೆ. ವೆಂಕಟರಾಯಾಚಾರ್ಯ ಸುರತ್ಕಲ್, ಅಮೃತ ಸೋಮೇಶ್ವರ, ಕೆ. ಜೆ. ಶೆಟ್ಟಿ ಕಡಂದಲೆ, ಗಣೇಶ ಅಮೀನ್ ಸಂಕಮಾರ್ ಮೊದಲಾದ ವರು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಜಾನಪದ ಮತ್ತು ಜನಪದ ಸಾಹಿತ್ಯದ ಬೇರೆ ಬೇರೆ ಮಗ್ಗುಲುಗಳಲ್ಲಿ-ಕ್ಷೇತ್ರಕಾರ್ಯ, ಸಂಗ್ರಹ, ದಾಖಲಾತಿ ಹೀಗೆ–ಹಲವಾರು ವಿದ್ವಾಂಸರು ದುಡಿಯುತ್ತಿದ್ದಾರೆ. ಡಾ॥ ಬಿ.ಎ. ವಿವೇಕ ರೈ, ಅಮೃತ ಸೋಮೇಶ್ವರ, ಕನರಾಡಿ ವಾದಿರಾಜ ಭಟ್ಟ, ಪಾಲ್ತಾಡಿ ರಾಮಕೃಷ್ಣ ಆಚಾರ್, ವಾಮನ ನಂದಾವರ, ಗಣನಾಥ ಶೆಟ್ಟಿ ಎಕ್ಕಾರು, ಯು.ಪಿ, ಉಪಾಧ್ಯಾಯ, ಶ್ರೀಮತಿ ಸುಶೀಲಾ ಪಿ. ಉಪಾ ಧ್ಯಾಯ ಮೊದಲಾದವರು ಜನಪದ ಕತೆಗಳನ್ನು ಸಂಗ್ರಹ ಮಾಡಿದ್ದಾರೆ. ಜನಪದ ಕಥೆ ಗಳನ್ನು ಆಧರಿಸಿ ಕೆ. ಚಿನ್ನಪ್ಪಗೌಡ, ಕೆ. ಅಶೋಕ ಆಳ್ವ. ಕೆ. ಪದ್ಮನಾಭ ಕೇಕುಣ್ಣಾಯ, ಬಿ. ಶಿವರಾಮಶೆಟ್ಟಿ, ಯದುಪತಿ ಗೌಡ, ಪುರುಷೋತ್ತಮ ಬಿಳಿಮಲೆ, ಎ. ವಿ. ನಾವಡ, ಎಸ್. ಆರ್. ಅರುಣಕುಮಾರ್, ಎಸ್. ಎ. ಕೃಷ್ಣಯ್ಯ, ಗಣೇಶ ಅಮೀನ್, ವೆಂಕಟರಾಜ ಪುಣಿಂಚತ್ತಾಯ, ಪಾದೇಕಲ್ಲು ವಿಷ್ಣು ಭಟ್ಟ, ಗಣಪತಿ ಭಟ್ ಅರಸಳಿಕೆ, ಪದ್ಮನಾಭ ಭಟ್ ಎಕ್ಕಾರು, ಎ. ಸುಬ್ಬಣ್ಣ ರೈ, ಸಿದ್ಧಾಪುರ ವಾಸುದೇವ ಭಟ್ಟ ಮೊದಲಾದವರು ಅಧ್ಯಯನ ನಡೆಸುತ್ತಿದ್ದಾರೆ. ಜಾನಪದದ ಇನ್ನೊಂದು ಮಗ್ಗು ಲಾದ ಒಗಟುಗಳನ್ನು ಪೆರುವಾಯಿ ಸುಬ್ಬಯ್ಯಶೆಟ್ಟರು ಸಂಗ್ರಹ ಮಾಡಿದ್ದಾರೆ. ಕುದ್ಕಾಡಿ ವಿಶ್ವನಾಥ ರೈಯವರೂ ಅದೇ ಹಾದಿಯಲ್ಲಿ ಸಾಗಿಗಾದೆಗಳ ಸಂಗ್ರಹ

ಪ್ರಕಟಿಸಿದ್ದಾರೆ. ತುಳು ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಗಂಭೀರ ಅಧ್ಯಯನ ನಡೆಸಿದವರ ವಿಸ್ತೃತ ಪಟ್ಟಿಯೇ ಲಭ್ಯವಿದೆ.[12]

ಆಧುನಿಕ ಅರ್ಥದ ಕಥಾ ಸಾಹಿತ್ಯದ ಬೆಳಸು ತುಳುವಿನಲ್ಲಿ ಅಷ್ಟಾಗಿ ಕಾಣಿಸುತ್ತಿಲ್ಲ. ಕಥೆಗಾರರು ಇದ್ದಾರೆ. ಆಕಾಶವಾಣಿಯ ಅಗತ್ಯಕ್ಕಾಗಿ ಆಗೀಗೊಮ್ಮೆ ಅವರು ಬರೆಯುತ್ತಿದ್ದಾರೆ. ಪ್ರಕಟಣೆಯ ಇತರ ಸೌಲಭ್ಯಗಳು ಒದಗಿ ಬಂದಲ್ಲಿ ಆಧುನಿಕ ತುಳು ಕಥಾ ಸಾಹಿತ್ಯ ಮೈಬಿಚ್ಚಿಕೊಳ್ಳುವುದರಲ್ಲಿ ಯಾವ ಸಂದೇಹವೂ ಇರಲಾರದು.

ಅಡಿ ಟಿಪ್ಪಣಿಗಳು

1 ಕುಂಬಳೆ ಅರಸರ ಉಪಲಬ್ಧ ಹೆಸರುಗಳು ಮತ್ತು ಕಾಲ ಹೀಗಿದೆ : 1) ಕವಿಸಿಂಹ (ಕ್ರಿ.ಶ. 5ನೇ ಶತಮಾನ), 2) ಕವಿಸಿಂಹ (10 ನೇ ಶತಮಾನ), 3) ಜಯಸಿಂಹ (ಕ್ರಿ.ಶ. 10ನೇ ಶ.), 4) ಕವಿಸಿಂಹ (13ನೇ ಶ.), 5) ಕಾಮದೇವರಸ (ಕ್ರಿ.ಶ, 1389), 6) ಜಯಸಿಂಹ (15ನೇ ಶ.), 7) ರಾಮರಾವ್ (1623), 8) ಸೋಮನಾಥರಸ ಕವಿಸಿಂಹರಸ (ಕ್ರಿ. ಶ. 1708), 9) ನಂದಪ್ಪರಸರಾದ ಕವಿಸಿಂಹ (ಕ್ರಿ. ಶ. 1754), 10) ಶಿವವರ್ಮ ಕವಿ ಸಿಂಹರಸ (ಕ್ರಿ.ಶ. 1784), 11) ರಾಮಂತರಸು (ಕ್ರಿ.ಶ. 1808), 12) ಗುಣ್ಯಪ್ಪರಸು (ಕ್ರಿ.ಶ. 1880), 13) ರಾಮರಾವ್ (ಕ್ರಿ.ಶ. 1887), ಹಂಗಳ ಅಥವಾ ಹಾನಗಲ್ಲ ಕದಂಬರು ಕುಂಬಳೆಯ ಅರಸರ ಪೂರ್ವಜರೆಂದು ಚರಿತ್ರೆ ತಿಳಿಸುತ್ತದೆ. ಕುಂಬಳೆ ಅರಸರು ಮೂಲತಃ ಕನ್ನಡದವರಾದರೂ ಕಾಲಾನುಕ್ರಮದಲ್ಲಿ ತುಳುವರೇ ಆದರು.

2 ಕ್ರಿ. ಶ. 10 ನೇ ಶತಮಾನಕ್ಕೆ ಸೇರಿದ ತಳಂಗೆರೆ ಶಿಲಾಶಾಸನವು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿದ್ದು ಕನ್ನಡ ಲಿಪಿಯಲ್ಲಿದೆ. ಕುಂಬಳೆಯ ಅರಸನಾದ ಜಯಸಿಂಹನು ಮೇಚಬ್ಬರಸಿಗೆ ಮೊಗರಾಲು ಪುತ್ತೂರು ಸಮೀಪದ ಪಾಳುನೆಲವನ್ನು ಕನ್ಯಾಶುಲ್ಕವಾಗಿ ನೀಡಿದ ಬಗ್ಗೆ ಅದರಲ್ಲಿ ವಿವರಗಳಿವೆ. ಕ್ರಿ. ಶ. 15 ನೇ ಶತಮಾನಕ್ಕೆ ಸೇರಿದ ಅನಂತಪುರ ಶಿಲಾಶಾಸನ ತುಳುಭಾಷೆ ಮತ್ತು ತುಳು ಲಿಪಿಯಲ್ಲಿದೆ. ಕುಂಬಳೆಯ ಅರಸನಾದ ಜಯಸಿಂಹ ಅಥವಾ ಕವಿಸಿಂಹನೆಂಬಾತ ಮೊಗರಾಲು ಪುತ್ತೂರು ಗ್ರಾಮದ ತೆರಿಗೆ ಆದಾಯವನ್ನು ಅನಂತಪುರ ದೇವರಿಗೆ ದಾನವಾಗಿ ಬಿಟ್ಟ ವಿಚಾರ ಆ ಶಾಸನದಲ್ಲಿದೆ (ಮುಗೇರರು, ಮಾಯಿಲರು ಮತ್ತು ಬಾಕುಡರು ಹಿಂದೆ ಕುಂಬಳೆ ಸೀಮೆಯಲ್ಲಿ ಪ್ರಬಲರಾಗಿದ್ದರು. ಮುಗೇರರು ಇದ್ದ ಊರು ಮೊಗರಾಲು ; ಮಾಯಿಲರು ಮಧೂರು ಸಮೀಪ ಹಾಗೂ ಕಾಟುಕುಕ್ಕೆ ಬಳಿ ಕೋಟೆ ಕಟ್ಟಿಕೊಂಡಿದ್ದರು. ಅವು ಮಾಯಿಲಂಕೋಟೆ ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಬಾಕುಡರು ವಾಸಿಸುತ್ತಿದ್ದ ಊರು ಬಾಡೂರು).

3 ಪುಣಿಂಚತ್ತಾಯ ವೆಂಕಟರಾಜ, ಪಿ, ಮಧುರ. ಕಾಸರಗೋಡು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ, 1997, ಪು. 5.

ತುಳುನಾಡಿನಲ್ಲಿ ಕುಂಬಳೆಯ ಅರಸರು ಸಾಹಿತ್ಯ ಸೃಜನೆಗೆ ವಿಶಿಷ್ಟ ಪ್ರೋತ್ಸಾಹ ಕೊಟ್ಟಿದ್ದರು. "ಹಿಂದಿನ ಸಾಹಿತ್ಯಕರ್ತರು ತಾವು ರಚಿಸಿದ ಗ್ರಂಥಗಳಲ್ಲಿ ತಮ್ಮ ಹೆಸರನ್ನಾಗಲೀ ಕುಲಗೋತ್ರ

ಗಳನ್ನಾಗಲೀ ಹಾಕದೇ ಇದ್ದುದರಿಂದ ನನಗೆ ಅನೇಕ ವರ್ಷಗಳ ಪರಿಶ್ರಮದಿಂದ ಕುಂಬಳೆ ಅರಸರ ಕಾಲದಲ್ಲಿ ರಾಜ್ಯದ ವಿದ್ವಾಂಸರಿಂದ ರಚಿಸಲ್ಪಟ್ಟ ಹಲವು ತಾಳೆಯೋಲೆ ಗ್ರಂಥಗಳು ಸಿಕ್ಕಿರುವುದಾದರೂ ಅವುಗಳ ಕಾಲವನ್ನಾಗಲೀ, ಅವುಗಳನ್ನು ಬರೆದ ಗ್ರಂಥಕರ್ತರ ಹೆಸರು, ಕುಲಗೋತ್ರಗಳನ್ನಾಗಲೀ, ಅವರಿಗೆ ರಾಜಾಶ್ರಯವಿತ್ತ ಕುಂಬಳೆ ಅರಸರ ಹೆಸರನ್ನಾಗಲೀ ಕಂಡು ಹಿಡಿಯಲು ಇನ್ನೂ ಸಾಧ್ಯವಾಗಲಿಲ್ಲ. ಹಿಂದಿನ ತಾಳೆಯೋಲೆಯಲ್ಲಿರುವ ಹಲವಾರು ಗ್ರಂಥಗಳು ನನ್ನ ಬಳಿ ಇವೆ". (ಉಲ್ಲೇಖ : ಉದಯ ವರ್ಮರಾಜ, ತುಳುನಾಡಿನ ಗತವೈಭವ, ಕನ್ನಡ ಸಾಹಿತ್ಯ ಪರಿಷತ್ತು ಕೇರಳ ವಿಶೇಷ ಘಟಕ, ಕಾಸರಗೋಡು, 1998, ಪುಟ 231 + 20, ಪುಟ 228 ರಿಂದ).

4 ಪುಣಿಂಚತ್ತಾಯ ವೆಂಕಟರಾಜ ಪಿ, ತುಳುಬಾಸೆದ ಅಮೂಲ್ಯ ಕಾವ್ಯ ಗ್ರಂಥೊಲು, ಪನಿಯಾರ, ಅಖಿಲ ಭಾರತ ತುಳು ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಮಂಗಳೂರು, 1989, ಪು. 16.

5 ವಿಷ್ಣು ಭಟ್ಟ ಪಾದೇಕಲ್ಲು, ಪ್ರಾಚೀನ ತುಳು ಸಾಹಿತ್ಯದ ಮಹತ್ವ, ಜಾಗೃತಿ, ಪುತ್ತೂರು ವಿವೇಕಾನಂದ ಕಾಲೇಜಿನ ಬೆಳ್ಳಿಹಬ್ಬದ ಸ್ಮರಣ ಸಂಚಿಕೆ, ಪುತ್ತೂರು, 1990, ಪುಟ. 27.

6 ಪುಣಿಂಚತ್ತಾಯ ವೆಂಕಟರಾಜ ಪಿ, ತುಳುಬಾಸೆದ ಅಮೂಲ್ಯ ಕಾವ್ಯ ಗ್ರಂಥೊಲು, ಪನಿಯಾರ, ಅಖಿಲ ಭಾರತ ತುಳು ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಮಂಗಳೂರು. 1989, ಪು. 20.

7 'ಕನ್ನಡ ನವೋದಯ'ದ ಕಾಲ 1919-1921.

8 ಹಿರಿಯಡಕ ಮುರಳೀಧರ ಉಪಾಧ್ಯ, ತುಳು ಕಾವ್ಯ-ಕವಿತೆ ಸಂಕಲನೊಳು, ಪನಿಯಾರ, ಪು. 186.

9 Upadhyaya, U.P., Preface, Karajina, Tulu Lexicon Specimen volume-2, Govinda Pai Research Centre, Udupi, 1985.

10 ಪೆರ್ಲ ವಸಂತಕುಮಾರ, ತುಳುವಿನಲ್ಲಿ ಇದುವರೆಗೆ ಅಚ್ಚಾಗಿರುವ ಕಾವ್ಯ, ಕವನ ಸಂಕಲನಗಳ ಪಟ್ಟಿ, ಪ್ರಾತಿನಿಧಿಕ ತುಳು ಕಬಿತೆಲು, ಅಖಿಲ ಭಾರತ ತುಳು ಒಕ್ಕೂಟ, ಮಂಗಳೂರು-1994, ಪು. 103-107.

11 ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ, ತುಳು ಅಧ್ಯಯನ ಪೀಠ, ಉಡುಪಿಯಲ್ಲಿರುವ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಇಂತಹ ಕೆಲಸದಲ್ಲಿ ನಿರತವಾಗಿದೆ. ಮಂಗಳೂರು ಆಕಾಶವಾಣಿ, ತುಳು ಸಾಹಿತ್ಯ ಅಕಾಡೆಮಿ ಅಲ್ಪ ಮತ್ತು ಸೀಮಿತ ಪ್ರಮಾಣದಲ್ಲಿ ದುಡಿಯುತ್ತಿವೆ. ಜಾನಪದ ವಸ್ತುಗಳ ಸಂಗ್ರಹದಲ್ಲಿ ಧರ್ಮಸ್ಥಳದ ಪ್ರಾಕ್ತನ ವಿಭಾಗ ಮತ್ತು ವೈಯಕ್ತಿಕ ನೆಲೆಯಲ್ಲಿ ಬಂಟ್ವಾಳದ ಉಪನ್ಯಾಸಕ ತುಕಾರಾಮ ಪೂಜಾರಿ ದುಡಿಯುತ್ತಿದ್ದಾರೆ.

12 ರಾಮಕೃಷ್ಣ ಟಿ. ಶೆಟ್ಟಿ, ಡಾ. ತುಳುಬಾಸೆ, ಪನಿಯಾರ, ಪು. 24-38.

ಹಿರೇಗುಂಡಗಲ್ಲಿನ ಒಂದು ಅಪರೂಪದ ಶಾಸನ*

ತಮಿಳ್ ಸೆಲ್ವಿ

ತುಮಕೂರು ಜಿಲ್ಲೆಯ ಹಿರೇಗುಂಡಗಲ್ ಗ್ರಾಮದ ಆಂಜನೇಯ ದೇವಸ್ಥಾನದ ಹಿಂಬದಿಯಲ್ಲಿರುವ ಹಾಳು ಬಾವಿಯ ಬಳಿಯಿರುವ ಕಲ್ಲಿನ ಮೇಲಿನ ಶಾಸನವು 3ನೇ ಬಲ್ಲಾಳನ ಆಳಿಕೆಯ ಅವಧಿಗೆ ಸೇರಿದುದಾಗಿದೆ. ಇದರ ಕಾಲ ಕ್ರಿ. ಶ. 1338. ಶಾಸನದ ಲಿಪಿ ಸ್ಪಷ್ಟವಾಗಿದೆ. ಸುಮಾರು ನಾಲ್ಕು ಅಡಿ ಎತ್ತರದ ಈ ಶಾಸನವು ಶಿಲ್ಪವನ್ನೊಳಗೊಂಡಿಲ್ಲ. ಕನ್ನಡ ಭಾಷೆಯಲ್ಲಿ ರಚಿತವಾಗಿದೆ.

ಈ ಶಾಸನ ರಾಜಕೀಯ ಸಂಗತಿಗಳನ್ನೇನೂ ತಿಳಿಸುವುದಿಲ್ಲ. ಆದರೆ, ನಮ್ಮ ಸಮಾಜದ ಸಾಂಸ್ಕೃತಿಕ ಸಂಗತಿಯೊಂದರ ಮೇಲೆ ಬೆಳಕು ಚೆಲ್ಲುತ್ತದೆ.

ಮದುವೆಯ ಸಂದರ್ಭದಲ್ಲಿ ತಂದೆ-ತಾಯಿಗಳು ತಮ್ಮ ಹೆಣ್ಣು ಮಗಳ ಸುಖ-ಸಂತೋಷಕ್ಕಾಗಿ ನಾನಾ ರೀತಿಯ ಕೊಡುಗೆ-ಉಡುಗೊರೆಗಳನ್ನು ನೀಡುವುದು ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಉಡುಗೊರೆಗಳನ್ನಷ್ಟೇ ಅಲ್ಲದೆ, ಭೂಮಿಯನ್ನೂ ಕಾಣಿಕೆ ನೀಡುತ್ತಿದ್ದರು. ಆದರೆ, ಅದಕ್ಕೆ ಶಾಸನವನ್ನು ಹಾಕಿಸುವುದು ಅಪರೂಪದ ಸಂಗತಿ. ಮೇಲೆ ಪ್ರಸ್ತಾಪಿಸಲಾದ ಹಿರೇಗುಂಡಗಲ್ಲಿನ ಶಾಸನವೊಂದು ಇಂತಹ ಸಂಗತಿಯನ್ನೊಳಗೊಂಡಿದೆ.

ಹನಿಮೂರು ಸಾಲುಗಳ ಈ ಶಾಸನವನ್ನು ಶ್ರೀಮನ್ಮಹಾನಾಡ ಪ್ರಭುವಾದ ಕಯೂರ (?)ನ ಮಗನಾದ ರಾಮಗೌಡನು, ಶ್ರೀಮನ್ಮ ಹಾಸಾಮಂತಾಧಿಪತಿಯಾದ ಹೊಳಕಲಿನ ಬೊಂಮೆಯ ನಾಯಕನ ಮಗನಾದ ಮಾಚಣಂಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟು 'ತನಗೆ ಕೊಡಗಿ ಆಗಿ ಸಾಸನಕಲ್ಲು ನಡಸಿದ್ದ ಹಿರಿಯ ಗುಂಡು ಗಲನು ಆ ಅಳಿಯ ಮಾಚಣ್ಣಂಗೆ ತಾನು ಕೊಡಗಿಯಾಗಿ ಕೊಟ್ಟು' ಶಾಸನವನ್ನು ನೆಡಿಸಿದ್ದಾನೆ. ಶಾಸನದ ಪೂರ್ಣಪಾಠ ಹೀಗಿದೆ :

ಸ್ವಸ್ತಿ ಶ್ರೀ ಶಕವರುಷ ೧೨೫೮
ಈಶ್ವರ ಸಂವತ್ಸರದ ಮಾಘ ಶುದ್ಧ
ದಸಮಿಯ ಸೋಮವಾರದಂದು ಶ್ರೀಮನು ಮ

---

* ಎಪಿಗ್ರಾಫಿಯಾ ಕರ್ನಾಟಿಕ XVI, ಸ. : ಕೆ. ವಿ. ನೀಲಕಂಠಶಾಸ್ತ್ರಿ, ಹಿರೇಗುಂಡಗಲ್ 106, ಪು. 83.

ಹಾ ನಾಡ ಪ್ರಭು ಕಯೂರ
ಮಗ ರಾಮುಗೌಡನು ಶ್ರೀ ಮನುಮಹಾ ಸಾ
ಮಂತಾಧಿಪತಿ ಹೊಳಕಲ ಬೊಂಮ್ಮೆಯ
ನಾಯಕನ ಮಗ ಮಾಚಣಂಗೆ ತಂನ
ಮಗಳನು ಮದುವೆಯು ಮಾಡಿ ತನಗೆ
ಕೊಡಗಿ ಆಗಿ ಸಾಸನಕಲ್ಲು ನಡಸಿದ್ದ ಹಿರಿಯ
ಗುಂಡಗಲನು ಆ ಅಳಿಯು ಮಾಚಣ್ಣಂಗೆ
ರಾಮುಗೌಡನು ತಾನು ಕೊಡಗಿಯಾ
ಗಿ ಕೊಟ್ಟು ನಡೆಸಿಕೊಟ್ಟ ಶಾಸನ ಮಂ
ಗಳ ಮಹಾ ಶ್ರೀ ಶ್ರೀ ಶ್ರೀ

ಇಡೀ ಶಾಸನದಲ್ಲಿ ಕುತೂಹಲಕಾರಿಯಾದ ಅಂಶವೆಂದರೆ, 'ತನಗೆ ಕೊಡಗಿ ಆಗಿ ಸಾಸನಕಲ್ಲು ನಡಸಿದ್ದ ಹಿರಿಯ ಗುಂಡಗಲನು...ತಾನು ಕೊಡಗಿಯಾಗಿ ಕೊಟ್ಟ' ಎಂಬುದು. ಬಹುಶಃ ಈ ನುಡಿ ನಮ್ಮ ಅಂದಿನ ಒಂದು ಸಾಮಾಜಿಕ ಪದ್ಧತಿಯನ್ನು ಕುರಿತು ಹೇಳುತ್ತಿದೆ ಎನ್ನಿಸುತ್ತದೆ. ತಾನು ಅಳಿಯನಾದಾಗ ತನಗೆ ಕೊಡುಗೆಯಾಗಿ ಬಂದ ಭೂಮಿಯನ್ನು ತನ್ನ ಅಳಿಯನಿಗೇ ಕೊಡಬೇಕಾಗಿತ್ತೆಂಬಂತೆ ಇದರಿಂದ ತಿಳಿದು ಬರುತ್ತದೆ. ಈಗಲೂ ಸಹ ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಗೆ ಹೋದಾಗ ಅವಳಿಗೆ ಹರಿಷಿಣ-ಕುಂಕುಮಕ್ಕೆಂದು ಭೂಮಿಯನ್ನು ನೀಡುತ್ತಾರೆ. ಆ ಭೂಮಿಯ ಮೇಲೆ ಅವಳೊಬ್ಬಳದ್ದೇ ಸಂಪೂರ್ಣ ಹಕ್ಕು. ಅದು ಅವಳ ಮಗಳ ಮದುವೆಯಲ್ಲಿ ಅವಳಿಗೆ ಹೋಗುತ್ತದೆಯೇ ಹೊರತು ಅದರಲ್ಲಿ ಅವಳ ಗಂಡು ಮಕ್ಕಳಿಗಾಗಲೀ, ಗಂಡನಿಗಾಗಲೀ ಯಾವುದೇ ರೀತಿಯ ಹಕ್ಕಿರುವುದಿಲ್ಲ. ಆಕೆ ಇಷ್ಟ ಪಟ್ಟರೆ ಕೊಡ ಬಹುದಷ್ಟೇ ಹೊರತು ಕಾನೂನು ರೀತ್ಯಾ ಅವರಿಗೆ ಅದರ ಮೇಲೆ ಅಧಿಕಾರವಿರುವು ದಿಲ್ಲ. ಈ ಪದ್ಧತಿಯನ್ನು ಈಗಲೂ ಕಾಣಬಹುದು. ಇದರಂತೆಯೇ ಅಂದಿನ ದಿನಗಳಲ್ಲಿ ಅಳಿಯನು ತಾನು ಕೊಡುಗೆಯಾಗಿ ಪಡೆದ ಭೂಮಿಯನ್ನು ತನ್ನ ಅಳಿಯನಿಗೆ ಕೊಡಬೇಕಾಗಿದ್ದುದರಿಂದಲೇ, ಹೀಗೆ ಕೊಟ್ಟು ಶಾಸನವನ್ನು ಹಾಸಿರಬಹುದು. ವಿದ್ವಾಂಸರು ಈ ಬಗ್ಗೆ ಇನ್ನೂ ಹೆಚ್ಚು ಬೆಳಕು ಚೆಲ್ಲಬೇಕು. ಒಂದು ರೀತಿಯಲ್ಲಿ ಇದು ವರನಿಗೆ ನೀಡಿದ ದಕ್ಷಿಣೆ ಎಂದರೂ ತಪ್ಪಲ್ಲ. ಅದನ್ನು ಶಾಸನದ ಮೂಲಕ ಎಲ್ಲರಿಗೂ ತಿಳಿಸಿ, ನೀಡಲಾಗಿದೆ. ಇದನ್ನು ನೋಡಿದರೆ ಕೊಡುಗೆಯ ರೂಪದಲ್ಲಿ ವರದಕ್ಷಿಣೆ ಅಂದೂ ಮಾನ್ಯವಾಗಿತ್ತೆಂದು ತಿಳಿಯುತ್ತದೆ.

ಪ್ರೊ|| ಎಚ್. ವಿ. ಶ್ರೀನಿವಾಸ ಶರ್ಮ

ಪಸರ > ವಸರ ಮತ್ತು ಅಂಗಡಿ—ಒಂದು ವಿವೇಚನೆ

'ಪಸರ' – ಪದ ಮೊಟ್ಟಮೊದಲಿಗೆ ಕಾಣಬರುವುದು. ವಡ್ಡಾರಾಧನೆ ಕೃತಿಯ "ಸುಕುಮಾರಸ್ವಾಮಿಯ ಕಥೆ"ಯಲ್ಲಿ. ಈ ಪದ ಹೀಗೆ ಪ್ರಯೋಗವಾಗಿದೆ : ವಿದ್ಯಾಭ್ಯಾಸಕ್ಕಾಗಿ ತನ್ನ ಬಳಿಗೆ ಬಂದ ತಂಗಿಯ ಮಕ್ಕಳು ದಡ್ಡರೆಂದು ತಿಳಿದ ಸೂರ್ಯಮಿತ್ರ 'ಇವಂದಿರ್ಗೆ ಪಸರಂ ಗೊಟ್ಟೆನಪ್ಪೊಡೆ ಮುನ್ನಿನಂತೆ ಉರ್ಕಿ ಕಿಡುವರೆಂದು ಮನದೆ ಬಗೆದು...' (ಪುಟ 3, ಸಾಲು 15) ಈ ಪದಕ್ಕೆ ಪೂಜ್ಯ ಡಿ. ಎಲ್. ಎನ್, ರವರು 'ಸಲಿಗೆ' ಎಂಬ ಅರ್ಥ ಸರಿಯಾದುದೆಂದು ತಿಳಿಸಿದ್ದಾರೆ. ಅವರ ಪ್ರಕಾರ "ಇವರಿಗೆ ಸಲಿಗೆ ಕೊಟ್ಟದ್ದೇ ಆದರೆ ಮೊದಲಿನಂತೆ ಸೊಕ್ಕಿ ಕೆಡುವರೆಂದು ಮನಸ್ಸಿನಲ್ಲಿ ಯೋಚಿಸಿ..." ಎಂದಾಗುತ್ತದೆ. ಸಧ್ಯದ ಸ್ಥಿತಿಯಲ್ಲಿ ಅರ್ಥ ಸಮರ್ಪಕವೆಂದು ಹೇಳಬಹುದಾದರೂ ಅದೇ ಕೃತಿಯ ಪುಟ 33ನೇ ಸಾಲಿನಲ್ಲಿ ಬರುವ ಈ ವಾಕ್ಯವನ್ನು ನೋಡಿದರೆ ಅರ್ಥ ಬೇರೆಯಾದೀತು ಎನ್ನಿಸುತ್ತದೆ. "ಪತ್ತು ಪಯುನುಮಂ ಮೂಸಾಸಿರಗಂಡುಗ ಭತ್ತಮುಮಂ ಪ್ರಮಾಣ ಮಾಡಿ ಕೊಟ್ಟೊಡಾ 'ಪಸರದೊಳ್' ಅರಸಂ, ದಾಯಂಗೊಟ್ಟನೆಂದು...." ವೀರಪೂರ್ಣ ಭಾವಿಸುತ್ತಾನೆ. ಇಲ್ಲಿ 'ಪಸರ' ಪದಕ್ಕೆ ಸಲಿಗೆ ಎಂಬ ಅರ್ಥವನ್ನು ಹಚ್ಚಿದರೆ 'ಸಲಿಗೆಯಲ್ಲಿ ಅರಸ ಹಾಲು ಕೊಟ್ಟನು' ಎಂದಾಗುತ್ತದೆ. ವೀರಪೂರ್ಣನ ಕಾರ್ಯ ನಿಷ್ಠೆಯನ್ನು ಮೆಚ್ಚಿದ ರಾಜ, ಅವನಿಗೆ ಮೆಚ್ಚು ಕೊಡಬೇಕಾದರೆ 'ಸಲಿಗೆ' ಇಲ್ಲವೆ 'ಬಿಗುಮಾನ' ಯಾವುದೂ ಬೇಕಾಗುವುದಿಲ್ಲ. ಇದಕ್ಕೂ ಮೇಲಾಗಿ ಅರಸ ಮೆಚ್ಚು ಕೊಡುವುದು ದನ ಕಾಯುವ ವೀರಪೂರ್ಣನಿಗೆ, ಇವರ ನಡುವೆ ಸಲಿಗೆಯ ಪ್ರಶ್ನೆಯೇ ಏಳುವುದಿಲ್ಲ. ಕಾರ್ಯ ನಿಷ್ಠೆಯನ್ನು ಮೆಚ್ಚಿ ತನ್ನ ಅರಮನೆಯ ಆಸ್ತಿಯ ಅಲ್ಪ ಭಾಗವನ್ನು ಕೊಡುವುದರ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಕ್ರಿಯೆ ಇಲ್ಲಿ ಕಾಣುತ್ತದೆ.

ಈ ಸಂದರ್ಭದಲ್ಲಿ ತಪ್ಪು ತಿಳಿದ ದುರಾಸೆಯ ವೀರಪೂರ್ಣ ಯೋಜಿಸಿದ ರೀತಿಯನ್ನು ನಾನು ಸ್ಪಷ್ಟಪಡಿಸಲು ಯತ್ನಿಸುತ್ತೇನೆ. "ಹತ್ತು ಹಸುಗಳು, ಮೂಸಾಸಿರ ಕಂಡುಗ ಭತ್ತವನ್ನು ಮಾತ್ರ ಕೊಟ್ಟಿದ್ದಾನೆ. 'ಪಸರದೊಳ್' ಎಂದರೆ ಯಥೇಚ್ಛವಾದ, ವಿಶೇಷವಾದ (ಭಂಡಾರದಲ್ಲಿ) ಆಸ್ತಿಯಲ್ಲಿ ರಾಜ ಕೊಟ್ಟದ್ದು ಅಲ್ಪ

ಭಾಗ" ಎಂಬ ಭಾವನೆಯಲ್ಲಿ ವೀರಪೂರ್ಣ ಅರಸನ ಪರಿವಾರದವರ ಆಸ್ತಿಯನ್ನೆಲ್ಲಾ ಲೂಟಿ ಮಾಡಲಾರಂಭಿಸುತ್ತಾನೆ. ಇದಕ್ಕೆ ಪೋಷಕವಾಗಿ ರಾಜನ ಪ್ರತಿಕ್ರಿಯೆಯನ್ನು ನೋಡಬಹುದು. 'ಎನ್ನ ಕೊಟ್ಟುದರೊಳ್ ಸಂತೋಷಂಬಟ್ಟನಿಲ್ಲ' ಎನ್ನುವ ಮಾತಿನಲ್ಲಿ 'ಎನ್ನ ಕೊಟ್ಟುದರೊಳ್' ಗಮನಾರ್ಹವಾದುದು. ಯಥೇಚ್ಛವಾದ ಆಸ್ತಿಯಲ್ಲಿ ನಾನು ಕೊಟ್ಟಷ್ಟರಿಂದ ಸಂತೃಪ್ತಿಪಡಲಿಲ್ಲ ಎಂಬುದು ವ್ಯಕ್ತ. ಆದ್ದರಿಂದ 'ಆ ಪಸರದೊಳ್' ಎಂಬ ಮಾತಿಗೆ 'ಯಥೇಚ್ಛ' ವಾದ ಆಸ್ತಿಯಲ್ಲಿ 'ವಿಶೇಷ' ಆಸ್ತಿಯಲ್ಲಿ ಎಂಬ ಅರ್ಥವನ್ನು ಇಟ್ಟುಕೊಳ್ಳಬಹುದು ಎನಿಸುತ್ತದೆ.

ಈಗ ಈ ಅರ್ಥದಲ್ಲಿ ಮೇಲಿನ ಸೂರ್ಯಮಿತ್ರ ಯೋಜಿಸಿದ ರೀತಿಯನ್ನು ಹೀಗೆ ವಿವರಿಸಬಹುದು. "ಇವಂದಿರ್ಗೆ ಪಸರಂ ಗೊಟ್ಟೆನಪ್ಪೊಡೆ ಎಂಬಲ್ಲಿ ಇವರಿಗೆ 'ವಿಶದವಾಗಿ', 'ಸಮಗ್ರವಾಗಿ' ತನ್ನ ಪರಿಚಯ ತಿಳಿಸಿದರೆ" ಎಂಬ ಅರ್ಥ ಮೂಡುತ್ತದೆ. ಎಂದ ಮೇಲೆ ಸೂರ್ಯಮಿತ್ರ ತನ್ನ ಪರಿಚಯ ವಿಶದವಾಗಿ ಅವರಿಗೆ ತಿಳಿಯಬಾರದೆಂದು ಯೋಜಿಸಿದ್ದ. ಇದಕ್ಕೆ ಪುಷ್ಟೀಕರಣ ಅದೇ ಭಾಗದ ಪುಟ 4 ; ಸಾಲು 9 ರಲ್ಲಿ ಆದೀತು.

ವಿದ್ಯೆ ಕಲಿಸಿದ ಸೂರ್ಯಮಿತ್ರ ಮಕ್ಕಳನ್ನು ಬೀಳ್ಕೊಡುತ್ತಾ "ನೀವು ಎಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ್, ನಿಮಗಾಂ ಪಸರಂ ಗೊಟ್ಟೆನಿಲ್ಲ " ಹಾಗೂ "ನಿಮ್ಮಂ ಯೋಗ್ಯರಂ ಮಾಡುವ ಕಾರಣಮಾಗಿ ನಿಮಗೆ ಪಸರಂ ಗೊಟ್ಟೆನಿಲ್ಲ..." ಎನ್ನುತ್ತಾನೆ.

ಇಲ್ಲಿ ತನ್ನ ಬಳಿಗೆ ವಿದ್ಯೆಗಾಗಿ ಬಂದವರು ತನ್ನ ತಂಗಿಯ ಮಕ್ಕಳೆಂದು ತಿಳಿದಿದ್ದರೂ, ತಮ್ಮ ತಂದೆಯ ಬಳಿ ವಿದ್ಯೆ ಕಲಿಯದೆ ಅಯೋಗ್ಯರಾದವರನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದಿಂದ, ಸೂರ್ಯಮಿತ್ರ "ತನ್ನ ಸಮಗ್ರ, ವಿಸ್ತಾರ, ಪರಿಚಯುವನ್ನು ಮಾಡಿಕೊಡಲಿಲ್ಲ". ಅದಕ್ಕಾಗಿ ಕೋಪಿಸಬಾರದೆಂದು ಹೇಳಿ, ಕ್ಷಮೆ ಕೇಳುತ್ತಾನೆ.

ಇಂಥಹುದೇ ಸನ್ನಿವೇಶ ಚಿತ್ರಣವಿರುವ ಶಾಂತಿನಾಥನ ಸುಕುಮಾರ ಚರಿತೆಯಲ್ಲಿ ಬರುವ ಈ ಪದ ಪ್ರಯೋಗವನ್ನು ನೋಡೋಣ. ಸೂರ್ಯಮಿತ್ರ ತನ್ನ ಬಳಿಗೆ ಮಕ್ಕಳು ಬಂದಾಗ ಹೀಗೆ ಯೋಚಿಸುತ್ತಾನೆ ; "ಆದರಿಸಿ ಪಸರಂ ಗೊಟ್ಟೆನಪ್ಪೊಡೆ ಎನಗೆ ಸುಸರಮಾಗಿ ಬೆಸಕಯ್ಯಲಱಿಯರ್, ಅಱಿಯದಂದದಿನ್ ಉಱಿಸೆಱಿಗೆಯ್ದು ಪೆಱರಮಾರ್ಗದೊಳಿರ್ದಡಲ್ಲದೆ ತಱಿಸಂದುನೆಗಳರ್"— ಇಲ್ಲಿ ಬಳಸಲಾಗಿರುವ 'ಅಱಿಯದಂದದಿನ್' ಹಾಗೂ 'ಪೆಱರಮಾರ್ಗದೊಳ್'-ಈ ಮಾತುಗಳು ಗಮನಾರ್ಹ. ತನ್ನ ಪೂರ್ಣ ಪರಿಚಯುವೇ ಆಗಬಾರದೆಂಬುದು ಅವನ ಉದ್ದೇಶ. ಎಂದ ಮೇಲೆ ಪರಿಚಯುವೇ ಇಲ್ಲದ ಮೇಲೆ 'ಸಲಿಗೆ' ಬೆಳೆಯುವುದು ಕಷ್ಟವೇ ಅಲ್ಲವೆ ?

ಇನ್ನು ಮುಂದೆ ಬರುವ ಸನ್ನಿವೇಶದಿಂದ ಈ ಅರ್ಥ ಮತ್ತಷ್ಟೂ ಸ್ಪಷ್ಟವಾಗುತ್ತದೆ. ಮಕ್ಕಳನ್ನು ಬೀಳ್ಕೊಡುವಾಗ, ಸೂರ್ಯಮಿತ್ರ ತಾನು ಅವರ ಮಾವನೆಂದೂ, ಅವರು ತನ್ನ ತಂಗಿಯ ಮಕ್ಕಳೆಂದೂ ತಿಳಿಸಿ,

"ಮುನ್ನಮೊಸೆದು ಎನ್ನನ್ ಅಜಿಿಪಿದೊಡೆ ಎನ್ನಂ ಅಣಂಬಗೆಯಿರ್ ಎಂಬ ಬಗೆಯನೆಬಗೆದೆಂ" ಎಂದು ಹೇಳಿ, ಚಿಕ್ಕಂದಿನ ದಿನಗಳಲ್ಲಿ ತಂದೆತಾಯಿಯರಿಗೂ ಬಗ್ಗದ ಈ ಮಕ್ಕಳಿಗೆ ತನ್ನ ಗುರುತು ಇಲ್ಲವೆ ವಿಶೇಷ ಪರಿಚಯ ಹತ್ತಿದರೆ ವಿದ್ಯೆ ಕಲಿಯಲಾರರೆಂದು "ಉಪಾಯದಿಂದೋದಿಸಿದೆಂ" ಎನ್ನುತ್ತಾನೆ. ಹೀಗೆ ತಾನು "ಉಕ್ಕೆವತನದಿಂ ಓದಿಸಿದ ವೃತ್ತಾಂತಮಂ ಆದ್ಯಂತಂ ಅಜಿಿಯೆ ಪೇೞ್ದು...." ಎಂಬ ಮಾತು ಬರುತ್ತದೆ. ತನ್ನ ವಿಷಯವನ್ನು ಆದ್ಯಂತವಾಗಿ ತಿಳಿಸಿದ ಸೂರ್ಯಮಿತ್ರನ ಮಾತಿನಲ್ಲಿ 'ಪಸರ ಎಂಬ ಪದದಲ್ಲಿ ಅಡಗಿರುವ ಅರ್ಥ ಸುಸ್ಪಷ್ಟವಾಗದೇ ಇಲ್ಲ. ಮತ್ತೊಂದು ಸಂದರ್ಭ, ಶಾಂತಿಪುರಾಣದಿಂದ : (ಆ. 8 : ಪದ್ಯ 83ವ)

> ಮನೆಯ ಮುಂದೆ ಮೆಯ್ಯುಸಾಗಳಿಜಿಸಲೆಂದು, ಪಟ್ಟಿರ್ದ
> ಗರ್ಭೇಶ್ವರಿಯಲ್ಲಿಗೆ ಧೂತನನ್ನಟ್ಟಿ, ಪಸರಂಬಡೆಯದೆ
> ವೈನತೇಯನ ಚಿತ್ತವೃತ್ತಿಯಂತೆ ಭುಜಗದ್ವೇಷಿಯಾಗಿ
> ದಃದನಜಿದು....................

ಈ ಮಾತಿಗೆ ವಿಸ್ತಾರ, ವಿಶದ, ವಿವರ, ವ್ಯಾಪಕ ಎಂಬ ಅರ್ಥವನ್ನೇ ಕೃತಿಗಾರ ಇಟ್ಟಿದ್ದಾನೆ ಎಂಬ ನಿರ್ಣಯಕ್ಕೆ ಬರಬಹುದು ಎನ್ನಿಸುತ್ತದೆ. ಆದರೂ, ಈ ಪದದ ಪ್ರಯೋಗ, ಅರ್ಥವ್ಯಾಪ್ತಿಗಳನ್ನು ಮುಂದೆ ವಿಸ್ತಾರವಾಗಿ ನೋಡೋಣ.

ಗಾಂಗೇಯನು ಅಂಬೆಗೆ ಪುರುಷವ್ರತದ ವಿಷಯವನ್ನು ತಿಳಿಸುವ ಸನ್ನಿವೇಶ

> ಅತ್ತ ಸುರೇಶ್ವರಾವಸಥಮಿತ್ತಮಹೀತಳಮುತ್ತಪನ್ನಗೋ
> ದಾತ್ತ ಸಮಸ್ತ ಲೋಕಮಜಿದಂತಿರೆ ಪೂಣ್ದನಗಾಗದಂಗಜೋ
> ತ್ಪತ್ತಿ ಸುಖಕ್ಕೆಸೋಲಲಟಿಗುಂ ಪುರುಷವ್ರತವಿಾಗಳಬ್ಬೆಯೆಂ
> ಬತ್ತಿಗೆಯೆಂಬ ಮಾತನೆನಗೇನನಲಕ್ಕುಮೊ ಪಂಕಜಾನನೇ ॥

(ಪಂಪ ಭಾರತ, ಆಶ್ವಾಸ 1 ಪದ್ಯ 75 ವಚನ)

ವ॥ "ಎಂದು ನುಡಿದ ಗಾಂಗೇಯನನುಡಿಯೊಳವಸರಮಂ ಪಸರಮುಂಪಡೆಯದ" ಇಲ್ಲಿ ಸಂದರ್ಭ ಹೀಗಿದೆ : ಪದ್ಯದಲ್ಲಿ ಗೆದ್ದು ತಂದವಳನ್ನು ಮದುವೆಯಾಗಬೇಕಾದದ್ದು ಗಾಂಗೇಯನ ಕರ್ತವ್ಯ. ಆದರೆ ಅವನ ಪ್ರತಿಜ್ಞೆಯೇ ಅವನಿಗೆ ಅಡ್ಡಿ. ಇವೆರಡರ ನಡುವೆ ತನ್ನ ಪುರುಷವ್ರತವನ್ನೇ ಎತ್ತಿಹಿಡಿಯಲು ಹೊರಟ ಗಾಂಗೇಯನ ಮಾತಿನಲ್ಲಿ ಅಂಬೆಗೆ ಯಾವ ಅಭಿಪ್ರಾಯವೂ ಖಚಿತವಾಗುವುದಿಲ್ಲ. ಸಧ್ಯದ ಸನ್ನಿವೇಶದ ಪಂಪನ (ಗಾಂಗೇಯನ) ಮಾತನ್ನು ಹೀಗೆ ಅರ್ಥೈಸಬಹುದು. 'ಗಾಂಗೇಯನ

ಮಾತಿನಲ್ಲಿ, ಆ ಸನ್ನಿವೇಶ ಇಲ್ಲವೆ ಸಂದರ್ಭದ ವಿವರಣೆಯಾಗಲೀ (ಅವಸರ) ಮನಸ್ಸಿನಲ್ಲಿದ್ದ ಅಭಿಪ್ರಾಯದ ವಿಶದೀಕರಣವಾಗಲಿ (ಪಸರ) ತಿಳಿಯಲ್ಲಿಲ್ಲ' ಎಂದು ಕೊಳ್ಳುವುದು ಸಮ್ಮತ ಎನ್ನಿಸುತ್ತದೆ.

ಮತ್ತೊಂದು ಸನ್ನಿವೇಶ : ಸುಭದ್ರೆಯನ್ನು ಅರ್ಜುನನಿಗೆ ಧಾರೆ ಎರೆದು ಕೊಡುವ ಸನ್ನಿವೇಶದಲ್ಲಿ ಬರುವ ಈ ಪದ್ಯವನ್ನು ಗಮನಿಸಿ.

> "ಪಸುರ್ವಂದರ್, ಪಸೆ, ವೇದಪಾರಗವಂ, ಕಣ್ಬೇಟದುದ್ದಾನಿಯುಂ
> ಪಸರಂಗೆಯ್ವವೊಲಪ್ಪ ಪೊಚ್ಚಱ ಮಹಾಸಾಮಂತ ಸೀಮಂತಿನೀ
> ಪ್ರಸರಂ ಮಂಗಳಸೂರ್ಯನಾದಮೆಸೆಯುತ್ತಿರ್ಪನ್ನೆಗಂ ಚಕ್ರಿ ರಾ
> ಗಿಸಿ ಕಯ್ನೀರೆರೆದಂ ಗುಣಾರ್ಣವಮಹಿಪಾಲಂಗವಾಕನ್ನೆಯಂ"।।

(ಪಂಪ ಭಾರತ. ಆಶ್ವಾಸ 5. ಪದ್ಯ 25)

ಹಸಿರು ಚಪ್ಪರ, ಹಸೆ, ವೇದಪಂಡಿತರ ಮಂತ್ರಘೋಷ, ಒಂದೆಡೆಯಾದರೆ, "ಕಣ್ಬೇಟದ ಉದ್ದಾನಿಯುಂ ಪಸರಂಗೆಯ್ವವೊಲ್ ಅಪ್ಪಪೊಚ್ಚರ ಮಹಾ ಸಾಮಂತ ಸೀಮಂತನೀ ಪ್ರಸರಂ" ಮತ್ತೊಂದೆಡೆಯ ಚಿತ್ರ. ಪ್ರಸ್ತುತ ನಮಗೆ ಬೇಕಾದದ್ದು ಈ ಚಿತ್ರ ಮಾತ್ರ. 'ಕಣ್ಣಿನಲ್ಲೇ ಪ್ರೀತಿಯ ಆಧಿಕ್ಯವನ್ನು ವ್ಯಾಪಕಗೊಳಿಸಿದಂತೆ ನೆರೆದಿದ್ದವೀರ ಸಾಮಂತರ ಮತ್ತು ಸ್ತ್ರೀಯರ ಸಮೂಹ' ಎಂದು ಓದಿಕೊಳ್ಳಬಹುದು. ಒಂದು ವಿಶೇಷದಸಂಗತಿಯೆಂದರೆ ಒಂದೇ ಪದ್ಯದಲ್ಲಿ 'ಪಸರ' ಹಾಗೂ 'ಪ್ರಸರ' ಎರಡೂ ಪದಗಳು ಪ್ರಯೋಗವಾಗಿರುವುದು ಮುಂದಿನ ವಿಚಾರ ಬೆಳವಣಿಗೆಗೆ ಕಾರಣ ವಾಗುತ್ತದೆ.

ಬಿ

ಪ್ರಸರ (ಸಂ) > ಪಸರ (ತ್ಭ)–(1)–(ಸಮೂಹ, ಗುಂಪು)
ಪಸರ (ಕ) > ಪಸರಿಸು (ಕ್ರಿ)–(2)–(ವ್ಯಾಪಕ, ಹರಡು)

ನಾನು ಹೇಳಬಯಸುವುದು ಇಷ್ಟೆ : ಪ್ರಸರ (ಸಂ) ಪದದಿಂದ ತದ್ಭವವಾಗಿ ಪಸರ ವಾದ ಕನ್ನಡ ಪದರೂಪ ಒಂದು. ಕನ್ನಡದಲ್ಲೇ ಮೂಲ ಬಳಕೆಯಲ್ಲಿದ್ದು, ಮುಂದು ವರಿದು ಬರುತ್ತಾ ಅದರ ವ್ಯಾಪಕತೆಯನ್ನು ಕಂಡುಕೊಂಡದ್ದು ಕನ್ನಡ ರೂಪ ಎರಡು. ಸಂಸ್ಕೃತ 'ಪ್ರಸರ' > ಪಸರವಾಗಿ ಸಮೂಹ, ಗುಂಪು ಎಂಬ ಅರ್ಥವನ್ನು ಪಡೆದರೆ, ಕನ್ನಡದ 'ಪಸರ' ಸಹಜವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ವ್ಯಾಪಕತೆ, ವಿಸ್ತಾರ ಎಂಬ ಅರ್ಥದಲ್ಲಿ ಮುಂದೆ ರೂಪ ಹಾಗೂ ಅರ್ಥ ವಿಕಾಸಗೊಳ್ಳುತ್ತಾ

ಹೋಗುತ್ತದೆ. ಈಗ ಎರಡೂ ಶಬ್ದಗಳು ಒಂದೇ ಪದ್ಯದಲ್ಲಿ ಬಳಕೆಯಾಗಿರುವ ರೀತಿಯನ್ನು ನೋಡಬಹುದು.

ಪೊಸಸನೆಂಪೊಳ್ ಪಸುರ್ಪಲರೊಳಂಜಿತಮಲ್ಲದ ನಿಪ್ಪ ಪಲ್ಲವ
ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪುತುಂಬಿಪೊಳ್

(ಆದಿ ಪು. ಆಶ್ವಾ. 1 : ಪದ್ಯ 66)

ಇಲ್ಲಿ 'ಪಲ್ಲವ ಪ್ರಸರದೊಳ್' ಗೂ 'ಕಣ್ಗೆ ಪಸರಂ ಬಡೆದು ಒಪ್ಪುವ ಕೆಂಪು' ಎಂಬುದಕ್ಕೂ ವ್ಯತ್ಯಾಸವನ್ನು ಕಾಣಬಹುದು. ಇನ್ನೂ ಕೆಲವು ಉದಾಹರಣೆಗಳನ್ನು ನೋಡಿ :

ಆ. ಪು. 7 ಆ. 123 ಪದ್ಯ : ರ ಸಭಾವಾಭಿನಯಂಗಳಂ ಭುಜಲತಾ ಭ್ರೂಚಾಪ ನೇತ್ರೋತ್ಪಲ
ಪ್ರಸರಂಗಳ್ ಪಸರಂ ಗೆಯ್ಯುತ್ತಿರೆ... (1)

ಆ. ಪು. 11 ಆ. 16 ಪದ್ಯ : ಸೊಸಲಂ ತೊಂಗಲ್ಗುರುಳ್, ಸೋಲುದ ನೊಗೆವ ಕುಚಂ, ಬೆನ್ನನಾನೀಳಕೇಶ
ಪ್ರಸರಂ———ಸೋಗೆಯಂ ನೂಲತೊಂಗಲ್,
ದೆಸೆಯುಂ ಕಣ್———ಸಂಚಳತ್ತಾರ ಹಾ ರಂ
ಪಸರಂ ಚಿತ್ರೈತ್ರಮೋ ರಂತ ಲೆಯಿ, ಭರತನಂ ನೋಡಲ್ಕೆಂತವ
ಳೊವಗಳ್ (2)

ಪಂ. ಭಾ. 5 ಆ. 25 ಪದ್ಯ : (ಹಿಂದೆಯೇ ತಿಳಿಸಲಾಗಿದೆ) (3)

ಉದ್ಯೋಗಪರ್ವ 7–24

ನಸುಬಿರಿದ ಪರಿಪಕ್ವದಾಡಿಮ
ಪಸರದೊಳಗರವಟ್ಟಿಗೆಯುದರ
ಹಸಿತಪಂಕಜ ಗಳಿತ ಮಕರಂದದ ತಟಾಕದಲಿ
ರಸಭರಿತ ಖರ್ಜೂರ ಫಲಸಂ
ಪ್ರಸರ ಛತ್ರವನೆಸಗಿಯುಪವನ
ವೆಸೆವುದೈಥಾವಿ ಕಸಸ್ಫೊಲು ಯಮುರಾಜನಿದಿರಿನಲಿ (4)

ಹೀಗೆ ಪ್ರಸರ ಮತ್ತು ಪಸರ ಪದಗಳ ಪ್ರಯೋಗ ಒಂದೇ ಪದ್ಯದಲ್ಲಿ ಪ್ರಯೋಗವಾಗಿರುವುದನ್ನು ನೋಡಿದ ಮೇಲೆ ಎರಡೂ ಪದಗಳು ಬೇರೆ ಬೇರೆಯಾಗಿ ಬಳಕೆಯಾಗಿರುವುದನ್ನೂ ನೋಡೋಣ :

(1) ಪ್ರಸರ – ಸಮೂಹ

ಅಮೃತಾ ಪುರ ಶಾಸನ, 1196

ಶಾಸನ ಸಾಹಿತ್ಯ ಸಂಪದ ಪುಟ 78 :

1) ವಾಜಿರಾಜಿಗೆ ದಿಶಾ ಪ್ರಸರು ಕವಿವಂತೆ ನೂಂಕಲಪ್ಪಳಿಸುವ ಗಂಧ
ಸಿಂಧುರಘಟಾವಳಿಗೆ— —

ಜನ್ನ : ಯಶೋಧರ ಚರಿತೆ ; 1 : ಪದ್ಯ 30

2) "ಮದಿಲೊಳಬ್ಬೆ ಪೇರಡಗಿನ ಪೆರ್ಬೆಸನಗೆ ಪೊಱಗಣ
ಜೀವ ಪ್ರಸರಮುಮಂ ಪಲವು ಮುಖದಿನ್ ಅವಕೋಕಿಪನ್ಪೊಲ್"

ಅನಂತನಾಥಪುರಾಣ : ಆ. 6, ಪದ್ಯ 78 :

3) "— ಅಲರ್ದ ಕರ್ಣಿಕಾ ಪ್ರಸರಂಗಳ್"

ಕಾದಂಬರಿ : ನಾಗವರ್ಮ : 5-17 ಮತ್ತು 5-95:

4) "—ಕಾಂತಾ ಜನೋತ್ಕರ ರತ್ನಾಭರಣ ಪ್ರಭಾ ಪ್ರಸರ ಮಾದಂ ಕಳ್ತು—"

ಚಂದ್ರಪ್ರಭಾ ಪುರಾಣ 8-45 :

5) —ರವಿ ಶ್ರಾಂತ ನಿತ್ಯಲ್ಲಲನಾ ನಿಶ್ವಾಸಪುಷ್ಪಪ್ರಸರದಗರು ಸಾರಭ್ಯಸಂದೋಹಭಾರಾ
ಕಳಿಕಂ—"

ಸೂಕ್ತಿಸುಧಾರ್ಣವ : ಕುಮಾರೋದಯವರ್ಣನಂ : ಪುಟ 59 :

7) "ದೆಸೆಯುಂ ತೆಕ್ಕನೆ ತೀವಿದತ್ತು ಘನ ಭೇರೀ ನಿಸ್ವನಂ ಭೋಂಕನಾ
ಗಸದೊಳ್, ಸಾಲ್ವಡೆದತ್ತು ವೀಧಿಗತ ನಾರೀ ಮುಷ್ಟಿ ಪಿಷ್ಟಾತಕ
ಪ್ರಸರಂ —"

8) "ಎಸಸುಯು ಕಂಕಣಂ ಪೊಳೆವಪೊಂಬಳೆಯೊಪ್ಪುವ ನಾಗಚಂಪಕ
ಪ್ರಸರದ ಚೊಲ್ಲೆಹ..."

ಕು. ವ್ಯಾಸ : ಉ. ಪರ್ವ :

10) ಕುಸುಮ ಫಲ ತಾಂಬೂಲ ಗಂಧ
ಪ್ರಸರ ಭೋಜನ ಗಮನ ನೆನಹಿಂದೆಸೆವ...

ರಾಜಶೇಖರ ವಿಳಾಸ ; ರಗಳೆ :

11) "ನವನಾರೀಕೇಳ, ಕದಳೀಫಳ ಪ್ರಸರದಿಂ"

ಕು. ವ್ಯಾ : ಭೀಷ್ಮಪರ್ವ 1–13 ಪದ್ಯ :

ಅಸುರರಲಿ ಸುರರಲಿ ಭುಜಂಗ
ಪ್ರಸರದಲಿ ಭೀಮಾರ್ಜುನರ ಸೈ
ರಿಸುವರುಂಟೇ...

ಇನ್ನು 'ಪಸರ' ಪ್ರಯೋಗಗಳನ್ನು ನೋಡೋಣ :

(೨) ಕನ್ನಡ 'ಪಸರ' = ವ್ಯಾಪಕತೆ, ವಿಸ್ತಾರ, ವಿಶಾಲ, ಹರಡು

ಬೇಲೂರು ಶಾಸನ : ಶಾಸನ ಪದ್ಯ ಮಂಜರಿ : ಪುಟ 75, ಪದ್ಯ 424

1) " 'ಪಸರಂ' ಬೆತ್ತೆತ್ತಲುಂ ಬೇರ್ವರಿದು ಬೆಳೆದು ಶಾಖಾನುಶಾಖಾಳಿ
ನೀಳ್ದಿಣ್ದೆಸೆಗಂ ತಳ್ತೊಪ್ಪೆ..."

ಇಟ್ಟಗಿ ಶಾಸನ : ಶಾ. ಪದ್ಯ ಮಂ : ಪುಟ 38, ಪದ್ಯ 213 :

2) "ನೆಗಳ್ದಾ ವಿಕ್ರಮ ಚಕ್ರವರ್ತಿಯ ಪದಾಂಭೋಜಕ್ಕೆ ಭೃಂಗಂ—
ಜಸಕ್ಕೆ ಪಸರಂ, ತೇಜಕ್ಕೆ ಕಾಯ್ಪು, ಈತನ್ ಎಂದೇ ಗುಣಂಗೊಳ್ಪುದು"

ಕುಮಾರವ್ಯಾಸ : ವಿರಾಟಪರ್ವ ; ಸಂಧಿ 2, ಪದ್ಯ 5 :

"ಅವಯವದ ಪರಿಮಳದ ಪಸರಕೆ
ಕವಿವ ತುಂಬಿಯ ಸಾರ ಸಂಗೀತವನು ಕೇಳುತ"

ಸಂಧಿ 4. ಪದ್ಯ 30 :

"ಪಳಹರದ ಪಲ್ಲವದ ಪಸರದ
ಪಳಿಯ ಪಟ್ಟಿಯ ತೋಮರದ

ಉ. ಪ. ಸಂಧಿ 11, ಪದ್ಯ 17 :

"ಥಳಥಳಿಪ ಸೂನಿಗೆಯ ಮುಮ್ಮೊನೆ
ಗಳ ರಥಾಂಗದ ಮೇಲು ಪಸರದ
ಪಳ ಹರದ..."

ಸಂಧಿ 12, ಪದ್ಯ 42 :

ಅರಿವಿಜಯಿಗಳು ನೆಲನ ಗೆಲಿದರು
ಹರಿಯ ನೇಮದಲೆಡೆಯರಿದು ಬಲ
ಶರದಿ ಬಿಟ್ಟುದು ಕಳನ ಪಶ್ಚಿಮದೆಸೆಯಪಸರದಲಿ

ಅರಣ್ಯ ಪರ್ವ, 23-15 :

"ಪರಿಮಳದಪಸರದಲಿ ಶೈತ್ಯೋ
ತ್ಕರುಷದಲಿ ಲೇಸೆನಿಸಿ—"

ಅ.ಪ. 23-13 :

ದೃಗುಮನೋಮಂಜುಳದ ಕಂಜಾಳಿಗಳ
ಕಡು ಪರಿಮಳದ ಪಸರದ
ಸೊಗಸು ತೀವಿತುವಿಮಳ ಪದ್ಮಾಕರದಪವಮಾನ

ಅ.ಪ. 15 ಸಂಧಿ : ಪದ್ಯ 25 :

ನುಸುಳುನೆಲೆ ಡಿಳ್ಳ್ಯಯ್ತು ಪೈಸರ
ಬೆಸುಗೆ ಬಿಗುಹುಳುಕೊತ್ತು ಕಲೆಗಳ
ರಸದ ಪಸರವನರಿಯಬಾರದು ವಿಗಡವಿಟರುಗಳ

ಪರಮಾರ್ಥ (ಸರ್ವಜ್ಞ ವಚನ) : ಡಾ॥ ಎಲ್. ಬಸವರಾಜು

ಮೊಸರಿಲ್ಲದಾ ಊಟ ಪಸರವಿಲ್ಲದ ಕಟಕ
ಹಸನಿಲ್ಲದವಳ ಮನೆವಾರ್ತೆ ಸವಣನ ಬಾಯು
ಕಿಸುಕುಳದಂತೆ ಪರಮಾರ್ಥ

ಚನ್ನಬಸವ ಪುರಾಣ : ಕಾಂಡ 1, ಸಂಧಿ 10–ಪದ್ಯ 5 :

"ಪರಿಮಳದ ಪೊನಲೆನಿಪ ಪರಿಮಳದ ಪಸರಮಾ
ಘಟ್ಟವಳ್ಳಿಯರ ಚೆಲ್ವಿಂ ಮೆರೆದುದು"

ಇದುವರೆವಿಗೆ 'ಪ್ರಸರ' (ಸಂ) ಹಾಗೂ 'ಪಸರ' (ಕನ್ನಡ) ಪದಗಳು ಬೇರೆಬೇರೆ ಪ್ರಯೋಗಗಳಾಗಿ ಬಳಕೆಯಾಗಿರುವುದನ್ನು ನೋಡಿದ್ದೇವೆ. 'ಪ್ರಸರ'ಕ್ಕೆ ಸಮೂಹ ಗುಂಪು ಅರ್ಥ ಹೊಂದಿಬಂದು, 'ಪಸರ'ಕ್ಕೆ ವ್ಯಾಪಕತೆ, ಹರಡುವಿಕೆ, ವಿಸ್ತಾರ, ಈ ಅರ್ಥಗಳು ಬಳಕೆಯಾಗಿರುವುದು ವ್ಯಕ್ತವಾಗುತ್ತದೆ. ಅಲ್ಲದೆ ಗಮನಿಸಬೇಕಾದ ಅಂಶವೆಂದರೆ 'ಪಸರ' ಪದ ಪ್ರಯೋಗಗಳೆಲ್ಲವೂ ಒಂದು abstract, ಒಂದು ಗುಣ, ಸ್ವಭಾವ, ಮುಂತಾದವುಗಳ ವ್ಯಾಪಕತೆಯನ್ನೇ ನಿರ್ದೇಶಿಸುತ್ತದೆ. 'ಪ್ರಸರ' ಹಲವು ವಸ್ತುಗಳ ಒಂದು ಗುಂಪು, ಸಮೂಹ ಎಂಬುದನ್ನೇ ನಿರ್ದೇಶಿಸುತ್ತದೆ. ಮುಂದಿನ ಪ್ರಯೋಗಗಳಲ್ಲಿ ಇದು ಪೂರ್ಣ ಸ್ಪಷ್ಟತೆ ಪಡೆಯುವುದನ್ನು ಕಾಣಬಹುದು.

(೩) "ಪಸರ + ಇಸು – ಪಸರಿಸು"

ಶಾಸನ ಪದ್ಯ ಮಂಜರಿ :

"ಪಸರಿಸಿ ಪರ್ಬಿ ಗೊಂದಳಿಸಿನಿಂದ ತಮಸ್ತಮಮಂ ತೆರಳ್ಚಿ"

ಕು.ವ್ಯಾ. ವಿ.ಪ. 10-2

ಕುಂತೀ ಕುಮಾರಕರೇಳಿಗೆಯ ತನಿರಾಗ ರಸಪುಬ್ಬರಿಸಿ ಪಸರಿಸಿತೊ'

ವಿ.ಪರ್ವ. 9-3 "ಇಂದು ಪಸರಿಸು ನಿನ್ನವಿಕ್ರಮವ"

10-39 "ಬಹಳ ಪರಮ ಸ್ನೇಹ ಪಸರಿಸಿತು"

ಹೀಗೆ ಕ್ರಿಯಾ ಪ್ರಯೋಗವಾಗಿರುವಲ್ಲಿಯೂ, 'ತಮಸ್' 'ತನಿರಾಗರಸ' 'ವಿಕ್ರಮ'– ಇಂತಹ ಗುಣ ಸ್ವಭಾವಗಳ ವಿಸ್ತಾರವನ್ನೋ, ತಾರ್ಕಿಕತೆಯನ್ನೋ ತಿಳಿಸುವಲ್ಲಿಯೇ ಈ 'ಪಸರ' ಬಳಕೆಯಾಗಿರುತ್ತದೆ.

'ಲೀಲಾವತಿ'ಯಲ್ಲಿ ಬರುವ ಈ ಪ್ರಯೋಗವನ್ನು ಪರಿಶೀಲಿಸಿ ನೋಡೋಣ :

> "...ಮರದುಱುಗಲ ಕಬ್ಬಿಲೆಯುಂ ತಲೆಯೆತ್ತಲೀಯದಂತೆ
> ತೊಳಗುವ ನಿಜಮರೀಚಿ ಮಂಜರಿಗಳಿಂ, ಪೊಸವಿಸಿಲ ಪಸರವಂ
> ಪಸರಿಸಿ, ಪಸುರ್ವಣ್ಣಂವಾಗಿ..."

ಇಲ್ಲಿ ಗಮನಿಸಬೇಕಾದದ್ದು 'ಮಂಜರಿ' ಮತ್ತು 'ಪಸರ' ಪದಗಳು. "ತೊಳಗುವ ತನ್ನ ಕಿರಣ ಸಮೂಹಗಳಿಂದ ಬಿಸಿಲ ವ್ಯಾಪಕತೆಯನ್ನು (ಹರಡಿ). ವಿಸ್ತಾರಗೊಳಿಸಿ ಎನ್ನುವಲ್ಲಿ 'ಪಸರವಂ ಪಸರಿಸಿ' ಪ್ರಯೋಗವಿರುವುದು ಕಾಣುತ್ತದೆ. ಆದರೆ ಮೊದಲು ತಿಳಿಸಿದಂತೆ, ಅಮೂರ್ತ (abstract), ಇಲ್ಲವೆ non concrete ಎನ್ನಬಹುದಾದ ಬಿಸಿಲು, ಬೆಳದಿಂಗಳು, ನೋವು, ನಲಿವು, ಸ್ನೇಹ, ಮಿಂಚು, ಧ್ವನಿ ಹೀಗೆ ಇವುಗಳ ವ್ಯಾಪಕತೆ ಇಲ್ಲವೇ ಹರಡುವಿಕೆಯನ್ನು ತಿಳಿಸುವಲ್ಲಿ ಮಾತ್ರ ಬಳಕೆಯಾಗಿದೆ. ಇನ್ನೂ ಕೆಲವು ಉದಾಹರಣೆಯನ್ನು ನೋಡೋಣ :

ಆದಿಪು, ಸಂ ; ಪದ್ಯ 245 :

> "ಆನಕಧ್ವನಿ ದೆಸೆಯೊಳ್ ಪಸರಿಸೆ"

ರಾಜಶೇಖರ ವಿಳಾಸ :

> "ಕೆಂಬಲ್ಲನುಣ್ಬಿಳಗು ದೆಸೆಪೆಸೆಗೆ ಪಸರಿಸೆ"
> "ಪೊಸಮಿಂಚಂ ಪಸರಿಪ ಮಿಸುನಿವನೆಗಳುಂ"
> "ಮತ್ತೊರ್ವಳ್ ಪೊಸವೇಟಮಂ ಪಸರಿಸುವಂತೆ"

ಕು.ವ್ಯಾ. ಭೀ.ಪ. 4–54 :

> "ಪಸರಿಸಿತಲಾ ಸ್ಮಾರ್ತ ಮಾರ್ಗ ಪ್ರಸರ"

—ಈ ಪ್ರಯೋಗಗಳು ಪ್ರಸರಿಸು (ಸಂ) > ಪಸರಿಸು ಆಗಿಲ್ಲ ಎಂಬುದನ್ನೇ ಸೂಚಿಸುತ್ತಿರುವುದನ್ನು ಗಮನಿಸಬಹುದು.

'ಪಸರ' > 'ವಸರ' > 'ಹಸರ' ಮತ್ತು ಅಂಗಡಿ

ಈಗ ಇವು ಮೂರಕ್ಕೂ ಇರಬಹುದಾದ ಸಂಬಂಧವನ್ನು ನೋಡುವುದು ಮುಂದಿನ ವಿಚಾರ.

ಲೀಲಾವತಿ. 148 ಪದ್ಯ 15 :

> 'ಬಿಳಿ ಎಲೆಗಳ್ ತಂಬುಲಿಗ ವಸರದೊಳ್ ಕರವೆಸಗುಂ'

ರಾ.ಶೇ.ವಿಳಾಸ :—

> "ಜನವನಪುರಸರದೆ ಪಟ್ಟಣದ ಪೊಳಲದರ್ಪಣಂತೆ ಕಂಚುನಸರಂ ತೋರ್ಕುಂ"
> "ಸೊಗಯಿಸಿದುದು ತೊಳಸ, ಕಂಚುಗಾರರ ಪಸರಂ"

ಚಂದ್ರಪ್ರಭ ಚರಿತೆ–ದೊಡ್ಡಯ್ಯ (ಸು. 1620)

(1) ಪಸನಾದ ಕಡಲೆ, ಕೊಪರಿ, ಬೆಲ್ಲ, ಬಿಳಿಎಲೆ, ರಸದಾಳಿಗಬ್ಬುಡಕೆಗಳ,
ಪಸರಗಳಿಟ್ಟರಂಗಡಿಕಾರರು ಬಾಪನವಸದಿಂದ ಬೀದಿಸೊಳು 15—ಪದ್ಯ 109

(2) ಹೂರಿಗೆ, ಗಾರಿಗೆ, ಕಾಸಿದ ತುಪ್ಪ, ಪಾಲ್ಕೊಸರ
ಭಾಸಿಪ ಪಸರವಿಟ್ಟರು, ಮಾಱುವಸುವಿಲಾಸಿನಿಯರು 15—ಪದ್ಯ 110

(3) ಕಂಪುವಡೆದ ಜವಾದಿ, ಪುಣುಗು, ಗಂಧವುಡಿ,
ಕತ್ತುರಿ, ಸಿರಿಪಚ್ಚೆ, ಮುಡಿಪೂವಿನಮಾಲೆಗಳ
ಹಸರವಿಟ್ಟರುಡುಪಮುಖಿಯರಂತಲ್ಲಿ 15—111

ಈಗ ಬೇರೆಬೇರೆ ವೃತ್ತಿಯುವರು ಮಾರಾಟಕ್ಕಾಗಿ ತಮ್ಮ ಸರಕುಗಳನ್ನು ಹರಡಿಕೊಂಡೋ ರಾಶಿರಾಶಿ ಹಾಕಿಕೊಂಡೋ ಕುಳಿತುಕೊಳ್ಳುವುದು ವಾಡಿಕೆಯಾಗುತ್ತಾ ಬಂದಿರಬಹುದು. ಗೊತ್ತಾದ ಪ್ರದೇಶದಲ್ಲಿ ಒಂದೇ ಪದಾರ್ಥದ ವ್ಯಾಪಾರಗಾರರು ಸಾಲಾಗಿ ಕುಳಿತುಕೊಳುವುದನ್ನು ಈಗಲೂ ಕಾಣುತ್ತೇವೆ. ಹಳ್ಳಿಗಳಲ್ಲಿ, ಸಂತೆಗಳಲ್ಲಿ, ಜಾತ್ರೆ, ಪಟ್ಟಣಗಳ ರಸ್ತೆಬದಿಯಲ್ಲಿ, ಪಾತ್ರೆ, ವೀಳೆಯದೆಲೆ, ವಸ್ತ್ರ, ಶಂಖ, ಮಣಿಹಾರ, ಕವಡೆಗಳನ್ನು ಮಾರುವಾಗ ಬೇರೆ ಬೇರೆ ಮಾರಾಟ ವಸ್ತುಗಳಿಗೆ ಸೇರಿದ ವ್ಯಾಪಾರಿಗಳು ಕುಳಿತು ವ್ಯಾಪಾರ ಮಾಡುವುದು ಈಗಲೂ ರೂಢಿಯಲ್ಲಿರುವುದು ಕಾಣಬರುತ್ತದೆ. ಇಂತಹ ವ್ಯಾಪಾರದ ಸರಕು ರಾಶಿಗಳ ಸ್ಥಳಕ್ಕೆ ಪಸರ ಇಲ್ಲವೆ ವಸರ (ಹರಡಿಕೊಂಡ ರಾಶಿ) ಎಂದು ಕರೆಯಲಾಗಿದ್ದು ಇಂತಹ ವಸರಗಳಿಗೆ ಸುಂಕ ಹಾಕುತ್ತಿದ್ದದ್ದೂ ಉಂಟು.

ಶಾಸಂ. ಸ: 1254: ದೂಸಿಗವಸರಕ್ಕೆ, ಹತ್ತಿವಸರಕ್ಕೆ, ಮಣಿಗಾರವಸರಕ್ಕೆ ಗಂಧವಣವಸರಕ್ಕೆ– ಹೀಗೆ ಒಂದೊಂದನ್ನು ಹರಡಿಟ್ಟ ಸರಕಿನ ರಾಶಿಗೂ ಸುಂಕ ಹಾಕುತ್ತಿದ್ದುದನ್ನು ಕಾಣುತ್ತೇವೆ.

ಇಂತಹ ವಸರಗಳು ಸಾಲು ಸಾಲಾಗಿದ್ದು ಒಂದೇ ಬೀದಿಯಲ್ಲಿ ಕಾಣಿಸಿಕೊಂಡಾಗ 'ವಸರಬೀದಿ' ಎಂದೂ ಕರೆಯಲಾಗುತ್ತಿತ್ತು.

"ಬೋಗಾರ ಪಸರವಿಟ್ಟನ್ತು"– ಕಿಟ್ಟೆಲ್ ಅರ್ಥಕೋಶದಲ್ಲಿ ಇದೇ ಅಭಿಪ್ರಾಯಕ್ಕೆ ಪೋಷಕವಾಗುವ ಪ್ರಯೋಗವನ್ನು ಕಾಣಬಹುದು.

ಈ ಅಭಿಪ್ರಾಯಕ್ಕೆ ಪೋಷಕವಾಗಿ ಈ ಪ್ರಯೋಗಗಳನ್ನು ಗಮನಿಸಬಹುದು.

ಚನ್ನ. ಬ. ಪುರಾಣ ಪದ್ಯ 46 ಪುಟ 11 :

"ರಾಶಿಗೈದಿಪ್ಪ ಪೊಂಗಳ್ ಕಂಗೆ ಶೋಭಿಸುತ್ತಿರೆ"
"ಕರಂ ಒಪ್ಪಿತೋರ್ಪ ರತ್ನಂಗಳ ಒಟ್ಟಿಲ್ಗಳು"

ಈ ರಾಶಿರಾಶಿ, 'ಒಟ್ಟಿಲ್ಗಳು', ಗುಡ್ಡೆಗಳನ್ನೇ ಪಸರ/ವಸರಗಳೆಂದು ಕರೆದಿರಬೇಕೆಂಬುದಕ್ಕೆ ಮುಂದಿನ ಪ್ರಯೋಗಗಳು :

"ತಾವರೆಗಳೆಲೆಗಳನಾಂತ ಕೊಳಂಗಳ್"
ಪಸರಿಸಿದ ಕಂಚುಗಾರರ ಪಸರದವೊಲ್ ನಾಡೆ ತೋರ್ಪವು —ಕ. ಕಾದಂ. ಪುಟ 105

"ಸೀರೆ ವರದರ ಪಸರಂ"

"ನಱುಗಂಪಿನ ಪಸರದಂತೆ" —ಕ. ಕಾದಂ. ಪದ್ಯ, 34 ಪುಟ 87,

"ಮುಂತೆ ಪೂವಿನ ಸಂತೆ ಕಾಣಿಸಿದುದು" —ಚ. ಬ. ಪು. ಸಂಧಿ 10, ಪದ್ಯ 52

"ಜಾತಿಯಂ ಬೇರೆ ಬೇರ್ಪ್ಡಿಸುತ
ಸುಳಿಗಾಳಿ ಪೂವಸರದೊಳ್ ಮೆರೆದುದು" —ಚ.ಬ.ಪು. ಕಾಂಡ 1, ಸಂಧಿ 10, ಪದ್ಯ 3

"ಸ್ಮರ ಮಣಿಗಾರ ಮಾರುವ
ರನ್ನವಸರದಂತುರೆ ಮೆರೆದಿಹರಂಗನೆಯುರು"

ಕಂಠೀರ ನ. ರಾ. ವಿಜಯ, ಪದ್ಯ 98, ಪುಟ 8

"ಕುಸುಮದ ಪಸರದೊಳ್ ಒಪ್ಪಿದರಲ್ಲಿ
ಪೂವಡಿಗವೆಣ್ಗಳ್ ಅವನೇಟಿಕ್ವಿನು"
"ಅಂಬುಗಳ ಪಸರಮಂ ಬಿಟ್ಟು ಗೆಲುವಿನಗ್ಗದ
ಲಾಭವಮಂ ಪಡೆದೆವು"

—ಲಕ್ಷ್ಮೀಶ

'ಪಸರ' > 'ವಸರ' ಮತ್ತು "ಅಂಗಡಿ" ಸಂಬಂಧ

ವಡ್ಡಾರಾಧನೆಯಲ್ಲೇ ಮೊದಲಿಗೆ 'ಅಂಗಡಿ' ಶಬ್ದ ಪ್ರಯೊಗವಾಗಿರುವುದು ಅಚ್ಚರಿಯ ಸಂಗತಿ.

"ಮಗನೆ, ಈ ತನಂಗಡಿಯುಲವಡಂ ಪೆಱುಕಿ
ತಿಂದು ಬಾಳ್ವೊಂ"

—ವಡ್ಡಾ. ಪುಟ. 46

(ಅಂಗಡಿಯಿಂದ ಅಂಗಡಿಗೆ ಅಲೆದು ಆಯ್ದು ತಿಂದು ಬಾಳುವ ಬದುಕಿನ ದಾರುಣ ಚಿತ್ರ ಇಲ್ಲಿದೆ).

"ಅಮೃತೇಶ್ವರ ದೇವರ್ಗೆ ದೋರಸಮುದ್ರದ ಛತ್ರವಸರದಂಗಡಿಯ ಸಮಸ್ತಕರುಗಳುಂ ;"

ಪ್ರಧಾನವಾಗಿ ಗುಂಮೇಶ್ವರದಂಗಡಿ, ಬೊಮ್ಮಲ ದೇವರಂಗಡಿ, ಕೋತಲ ದೇವರಂಗಡಿ, ಚಂದ್ರಾಮೌಳಿಯಣ್ಣನಂಗಡಿ, ಬೊಪ್ಪದೇವನ ಬಸವನಂಗಡಿ, ಬೆಲುಹೂರಂಗಡಿ, ಪ್ರತ್ಯೇಕ ಪ್ರತ್ಯೇಕ ಸೆಡೆ ಅರವನವೊಂದು".

—ಅಮೃತಾಪುರ ಶಾಸನ : 1196

"...ಕುಡುತಾರಾ ಮೂಗನಾ ಮೂಗನಂಗಡಿಗೊಯ್ದೊ
ಹರದಂಗೆ ಮಾರಿವೆಯಲಾ". —ಸೂಕ್ತಿಸುಧಾರ್ಣವ

"ಅಂತೆಗೆಯ್ವೆಂ ಎಂದು ಅಂಗಡಿ ಬೀದಿಯತ್ತಲ್ ಬಂದು ......
... ಆಗ ಮಹಾಮಂಗಳ ಕಳಸದಿನಿದಿರ್ಗೊಂಡು
ಅಂಗಡಿಯಿಂ ಬರ್ಪಸುತನಂ...... .

—ಜೀವ ಸಂಬೋಧನೆ, 1200

"ಕಣ್ಣದೇಂ ತೊಳಗಿದುದೋ ಪಳಚ್ಚನೆಸೆವ ಅಂಗಡಿವೀಧಿಯೊಳ್"
'ಇಂತೆಸೆವ ಮಾಲೆಗಾರ್ತಿಯರಂಗಡಿಯ ಮುಂಗಡೆಯಲ್ಲಿ"

—ರಾಜಶೇಖರ ವಿಳಾಸ, ಆ 2; 97-107

ಹೀಗೆ ನೋಡುತ್ತಾ ಹೋಗುವಾಗ ಕಾಲದ ಓಟದೊಡನೆ ಶಬ್ದದ ಅರ್ಥ ರೂಪ ಬದಲಾವಣೆ ಹೊಂದುತ್ತಾ ನಡೆದಿರುವುದನ್ನು ಕಂಡುಕೊಳ್ಳಬಹುದು. ನೆಲದ ಮೇಲೆ ಹರಡಿ, ಬಿಂಗಡಿಸಿ, ಗುಡ್ಡೆ ಗುಡ್ಡೆಯಾಗಿ ಇಟ್ಟು ಮಾರುವ ಸ್ಥಳಕ್ಕೆ ಪಸರ/ವಸರ ಎಂದಿರುವಂತೆ, ಮನೆಯ ಮುಂಗಟ್ಟು ಇಲ್ಲವೆ ಕಟ್ಟಿದ ಸಾಲ ಕೊಠಡಿಗಳಲ್ಲಿ, ಅಚ್ಚುಕಟ್ಟಾಗಿ, ಓರಣವಾಗಿ ಜೋಡಿಸಿ ಮಾರುವ ಸ್ಥಳವನ್ನು 'ಅಂಗಡಿ' ಎಂದೂ ಇಂತಹ ಓಣಿ ಇಲ್ಲವೇ ಬೀದಿಯನ್ನು 'ವಸರಬೀದಿ', 'ವಸರವೀಧಿ', 'ಅಂಗಡಿ ಬೀದಿ' ಎಂದು ಕರೆಯುವ ವಾಡಿಕೆಯಾಗಿರಬಹುದು ಎನ್ನಿಸುತ್ತದೆ.

ಧರ್ಮವ್ಯಾಧನ ಮನೆಗೆ ಬ್ರಾಹ್ಮಣ ಬರುವ ಮಾರ್ಗವಿದು :

"ಬಸೆನೆಣನ ಸುಂಟಿಗೆಯ, ಹರಹಿದ ಹಸಿಯ ತೊಗಲಿನ...
ಕುರಿದಲೆಯ ಹಂತಿಯ. ಕುಸುರಿದೆಲುವಿನ, ಕೋದಮಾಂಸದಂಗಡಿ
ಯುಲ್ಲೈಕಂದ" —ಕು. ವ್ಯಾ. ಭಾರತ : ಅ. ಪರ್ವ : ಸಂ 15, ಪದ್ಯ 8

ಎನ್ನುವಲ್ಲಿ ಮಾಂಸ ಮಾರುವ ಅಂಗಡಿ ವೀಧಿ, ಅಂಗಡಿ ಬೀದಿಯನ್ನೇ ನಿರ್ದೇಶಿಸುತ್ತದೆ.

"ಕವಲು ಗೋಲಲಿ ಮೃಗಗಣವಕೊಂ
ದವನ ತಹೆನಂಗಡಿಯ ಲವ ಮಾರುವೆನು"

—ಕು. ವ್ಯಾ. ಭಾ. ಅ. ಪ. ಸಂ 15, ಪದ್ಯ 11

"ಅಡವಿಯಂಗಡಿಯಕ್ಕು
ನಡಗಡಲು ನೆಲೆಯಕ್ಕು" —ದೇ. ದಾ. ವಚನ

"ಇಂತೆಸೆವ ಸಕಲವ್ಯವಹಾರದಂಗಡಿಗಳಂ
ಸಂತಸದಿಂ ನೋಡುತ್ತೈತರೆ"... —ಚನ್ನ. ಬ. ಪುರಾಣ

"ಅಂಗಡಿಯೊಳಳೆವೊತ್ತು ಬರುತಿರೆ ಮುಂಗಡೆ
ಯೊಳ ಜಾಜಿ ಕೆಡೆಯದ ಹಾಂಗೆ ಹಿಡಿದನು
ಬಸವನಾ ಗೊಲ್ಲತಿಯ ಹರವಿಯನು" —ಬ. ಪುರಾಣ, ಕಾಂಡ 259

ಇಲ್ಲೆಲ್ಲಾ, ಅಂಗಡಿ, ಅಂಗಡಿ ಬೀದಿಯ ಬಳಕೆ ಅತಿಯಾಗಿದ್ದು, ಪಸರ, ವಸರ ಶಬ್ದದ ಬಳಕೆ ಕ್ವಚಿತ್ತಾಗುತ್ತದೆ. ಆದರೂ, 'ಕಂ. ನರಸ ರಾಜ, ವಿಜಯ' (1640) 65–69 ಪದ್ಯಗಳಲ್ಲಿ ಮಳಿಗೆ, ಪಸರ, ಅಂಗಡಿ, ಅಂಗಡಿಗೇರಿ– ಈ ಶಬ್ದಗಳು ಬಳಕೆಯಾಗಿರುವುದು ಸಾಮಾನ್ಯ.

"ಪಸರಗಳಿಟ್ಟರಂಗಡಿಕಾಜರು"– ಎಂಬ ಚಂದ್ರಪ್ರಭಚರಿತೆಯ ಪ್ರಯೋಗ ದಲ್ಲಿ, ಅಂಗಡಿಕಾರರು ಪದಾರ್ಥಗಳನ್ನು ಗುಡ್ಡೆ, ರಾಶಿಗಳಾಗಿ ವಿಸ್ತಾರವಾಗಿ ಹರಡಿ ಇಟ್ಟಿರುವ ಚಿತ್ರ ಕಾಣಬರುತ್ತದೆ.

ಹಾಗೆಯೇ,

ನೀಲದ ಸರ, ಮಾಣಿಕದ ಕುಚ್ಚು, ವಜ್ರದ
ಮೇಲು ಗೊಂಚಲು, ವೈಡೂರ್ಯ, ಥಾಳಿಸುತಿಹ
ಬಲು ಪಸರದಂಗಡಿಗಳು ಸಾಲಗೊಂಡೆಸೆದುವೇಷೇಳ್ವೆನು ॥

—ಕಂಠಿ.ನ.ವಿಜಯ ಸಂಧಿ 6-ಪುಟ 68

"ಕಡುಕು ಹೀರಾವಳಿಯ ಹಾರದ
ಕಡಿಯ ರಚನೆಯರಾಶಿ
ಯಮನಂಗಡಿಯ ಪಸರವಿದೆನಲು ಮೆರೆದುದುಕೂಡೆ ರಣರಂಗ

—ಕರ್ಣ ಪರ್ವ 15-30

ಹೀಗೆ 'ಪಸರ' ಎಂಬುದಕ್ಕೆ ಇದ್ದ ಹರಡಿದ, ಗುಡ್ಡೆಯಾದ ಸರಕುಗಳು ಯಮನ ಅಂಗಡಿಯ ಸರಕುಗಳು ಎಂದೇ ವ್ಯಕ್ತವಾಗುತ್ತದೆ.

ಆದರೆ,

"ಸೋಂಬನಂಗಡಿಯಂತೆ ಪಸರಮಿಲ್ಲದೆ"
"ಭಂಡಮಿಲ್ಲದಂಗಡಿಯು"

—ಧರ್ಮಾಮೃತ, 2 ಆ-54 ಗದ್ಯ, 1-74 ಗದ್ಯ

ನಯಸೇನನ ಕಾಲಕ್ಕೇ ಜನಸಾಮಾನ್ಯರ ನಡವಳಿಯಲ್ಲಿ 'ಪಸರ'ಕ್ಕೆ ಸರಕು, ವಸ್ತು, ಪದಾರ್ಥ ಎಂಬ ಅರ್ಥ ವ್ಯವಹಾರವಿದ್ದದ್ದು ಕಾಣಬರುತ್ತದೆ.

ಲಕ್ಷ್ಮೀಶನಲ್ಲಿ, "ಅಂಬುಗಳ ಪಸರಮಂ ಬಿಟ್ಟು ಗೆಲವಿನಗ್ಗದ
ಲಾಭಮಂ ಪಡೆದೆವು" ಎಂಬುದನ್ನು ಓದಿದಾಗ

ಬಾಣಗಳನ್ನೇ ಕವಿ ಮಾರಾಟದ ಸರಕನ್ನಾಗಿ ಶತ್ರುಗ್ರಾಹಕರಿಗೆ ಮಾರಿ (ಪ್ರಯೋಗಿಸಿ) ಗೆಲುವಿನ ಲಾಭ ಪಡೆದ ಸನ್ನಿವೇಶದ ಚಿತ್ರಣ ಕಾಣಬರುತ್ತದೆ. ಬರಬರುತ್ತಾ, ಪಸರ=ಸರಕು ಎಂಬ ಅರ್ಥ ಮರೆಯಾಗಿ 'ಅಂಗಡಿ' ಮಾತು ಸ್ಥಾಯಿಯಾಗಿ ಉಳಿದುದನ್ನು ಗುರುತಿಸಬಹುದು.

ಕೊನೆಗೆ, 1578ರಲ್ಲಿ ನಿಟ್ಟೂರು ದೊಡ್ಡಣಾಂಕನ ಚಂದ್ರಪ್ರಭ ಚರಿತೆಯಲ್ಲಿ ಕಾಣಬರುವ ಕೆಲವು ಪ್ರಯೋಗಗಳನ್ನು ನೋಡಬಹುದು

1 ಹಲವು ಚೀಲದೊಳಿಟ್ಟು ಪಸರವ....
ಪರದರ ಸುಲಭ ಸಂಪದ ವೆತ್ತು ಮಳಿಗೆಗಳೆಸೆದವು....

2 ತಳಿಗೆಯ ತೊಳಪ ಪಸರದವಿಸರ,

3 ಚೀನಿ, ಚೀನಾಂಬರದುಕೂಲವ....ಜವಳಿಯಂಗಡಿಯೆಸೆದವು

4 ಪಚ್ಚೆ, ವಜ್ರದ ರಾಶಿಯ ಮಾಡಿ ಮಾರುವ
ರಚ್ಚೆಯಂಗಡಿ ವೀಧಿ.... (2–ಪದ್ಯ 16, 17, 18, 19)

ಇಷ್ಟಾದರೂ ಕೊನೆಗೆ

ಪಸಾರಿ — ತೆಲುಗು, ಮರಾಠಿಯಲ್ಲಿ
ಅಂಗಡಿ — ತ,ತೆ,ಮಲ, ತುಳುವಿನಲ್ಲಿ
ಪಸಾರ, ಪಸಾರಿ — ಹಿಂದೂಸ್ಥಾನಿಯಲ್ಲಿ ಪ್ರಯೋಗವಾಗಿದ್ದು
ಅಂಙ್ಗಾಡಿ > ಅಂಗಡಿ ಆಗಿ ಕನ್ನಡಕ್ಕೆ ಬಂದಿರಬಹುದು ಎನ್ನಿಸುತ್ತದೆ.

ಇವುಗಳ ಆಧಾರವಿಟ್ಟುಕೊಂಡರೆ ಆಯಾ ಮೂಲದಿಂದ ಕನ್ನಡಕ್ಕೆ ಈ ಪದಗಳು ಬಂದು ಸೇರಿರಬೇಕು ಎಂಬ ಸಂಶಯಕ್ಕೂ ಎಡೆಗೊಡುತ್ತದೆ.

ಆದರೂ, ಕವಿಗಳು ಬಳಸಿರುವ ಪದಗಳ ಬಳವಣಿಯ ಆಧಾರದ ಮೇಲೆ ಪಸರ > ವಸರ > ಹಸರ ಮತ್ತು ಅಂಗಡಿ ಪದಗಳು ಬಳಕೆಯಾಗಿರುವ ಅರ್ಥವ್ಯಾಪ್ತಿಯನ್ನು ನಾನು ಗುರುತಿಸಿದ್ದೇನೆ ಹಾಗೂ ಇದರ ಮುಂದುವರಿದ ಚರ್ಚೆಗೆ ತೆರೆದಿಟ್ಟಿದ್ದೇನೆ.

ಈ ಸಂಚಿಕೆಯ ಲೇಖಕರು

ಕ. ವೆಂ. ರಾಜಗೋಪಾಲ	ಕೆಂಗೇರಿ ಉಪನಗರ, ಬೆಂಗಳೂರು.
ಕೆಳದಿ ಗುಂಡಾಜೋಯಿಸ್	ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರ, ಕೆಳದಿ (ಶಿವಮೊಗ್ಗ)–577 401.
ಕ. ವೆಂ. ರಾಜಗೋಪಾಲ	ಕೆಂಗೇರಿ ಉಪನಗರ, ಬೆಂಗಳೂರು.
ಶಿವಾನಂದ ಹೊಂಬಳ	ಬಸವೇಶ್ವರನಗರ, ಬೆಂಗಳೂರು.
ಟಿ. ಗೋವಿಂದರಾಜು	124, 1ನೇ ಆರ್. ಬ್ಲಾಕ್, ರಾಜಾಜಿನಗರ, ಬೆಂಗಳೂರು–10.
ಅನಿಲ್‌ಪುರೋಹಿತ್ ಮತ್ತು ರವಿಕುಮಾರ್	ರೇಷ್ಮೆ ಕೃಷಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56.
ಸಿ. ನಾಗಭೂಷಣ	ಉಪನ್ಯಾಸಕರು, ಕನ್ನಡ ಅಧ್ಯಯನ ವಿಭಾಗ, ಗುಲಬರ್ಗ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ರಾಯಚೂರು–133.
ಪದ್ಮಾವತಿ ಬಿ. ಎಸ್.	ಸಂಶೋಧಕಿ, ರಾಜಕೀಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56.
ವಸಂತಕುಮಾರ ಪೆರ್ಲ	ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಮೈಸೂರು–570 020.
ತಮಿಳ್ ಸೆಲ್ವಿ	ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–560 056.
ಎಚ್. ವಿ. ಶ್ರೀನಿವಾಸಶರ್ಮ	ಎಂ. ಇ. ಎಸ್. ಕಾಲೇಜು, ಬೆಂಗಳೂರು.

ವಿವರಗಳಿಗೆ ವ್ಯವಹರಿಸಿ:

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056